ಉಪನ್ಯಾಸ
ಗ್ರಂಥಮಾಲೆ

೨೨೮

ಕನ್ನಡದಲ್ಲಿ ಕಾದಂಬರಿ ಸಾಹಿತ್ಯ

ಡು. ನಿಂ. ಬೆಳಗಲಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಡಿಸೆಂಬರ, ೧೯೭೫

ರಜತ ಮಹೋತ್ಸವದ ಪ್ರಕಟನೆ

ಉಪನ್ಯಾಸ ಗ್ರಂಥಮಾಲೆ

೨೨೮

ಕನ್ನಡದಲ್ಲಿ ಕಾದಂಬರಿ ಸಾಹಿತ್ಯ

ಮ. ನಿಂ. ಬೆಳಗಲಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಿಸೆಂಬರ, ೧೯೭೫

ಪ್ರಕಾಶಕರು :
ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.
ಕುಲಸಚಿವರು,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು
ಡಿಸೆಂಬರ, ೧೯೭೫

ಬೆಲೆ : ೨೫ ಪೈಸೆ

ಮುದ್ರಕರು :
ಜಗದೀಶ ಡಿ. ಕಟ್ಟಿ
ಮಹಾಂತೇಶ ಪ್ರಿಂಟಿಂಗ ಪ್ರೆಸ್
ಜಕಣಿಭಾವಿ ರೋಡ, ಧಾರವಾಡ-೫೮೦೦೦೧

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗವಿಸ್ತರಣ ಹಾಗೂ ಪ್ರಕಟನ ಶಾಖೆಯ ಮುಖಾಂತರ ಕೈಕೊಂಡು ನಡೆ ಸುತ್ತಿರುವ ಜ್ಞಾನಪ್ರಸಾರ ಯೋಜನೆಗಳಲ್ಲಿ ಈ "ಉಪನ್ಯಾಸ ಗ್ರಂಥಮಾಲೆ" ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರು ವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರ ಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರ ಸಮ್ಮತವಾದ ಸರಣಿಯಲ್ಲಿ ಜನಸಾಮಾನ್ಯಕ್ಕೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಾಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಉಪನ್ಯಾಸಮಾಲೆಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು, ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋ ಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂಥ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರೆವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೨೨೭ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು–ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ
೮-೧೨-೧೯೭೫

ಆರ್. ಸಿ. ಹಿರೇಮಠ
ಕುಲಪತಿಗಳು

ಅರಿಕೆ

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಹಿಡಕಲ್ಲ ಗ್ರಾಮದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಹಾಗು ಪ್ರಕಟನ ಶಾಖೆಯ ವತಿಯಿಂದ ಏರ್ಪಡಿಸಲಾಗಿದ್ದ ೧೯೧ನೆಯ ಉಪನ್ಯಾಸ ಶಿಬಿರದಲ್ಲಿ ದಿ. ೨೯-೧೧-೧೯೭೪ ರಂದು 'ಕನ್ನಡ ಕಾದಂಬರಿಗಳು' ಈ ವಿಷಯದ ಮೇಲೆ ನನಗೆ ಮಾತನಾಡಲು ಅವಕಾಶ ದೊರೆತಿತ್ತು. ಅದೇ ಉಪನ್ಯಾಸವನ್ನು ಕರ್ನಾಟಕ ವಿಶ್ವವಿದ್ಯಾಲಯದ 'ಉಪನ್ಯಾಸ ಗ್ರಂಥಮಾಲೆ'ಯಲ್ಲಿ ಪ್ರಕಟಿಸುವ ಸಂದರ್ಭ ಒದಗಿದಾಗ, ಆ ಭಾಷಣವನ್ನು ಇನ್ನಿಷ್ಟು ವಿಸ್ತಾರಗೊಳಿಸಿ ಈ ಕಿರುಹೊತ್ತಿಗೆಯನ್ನು ಸಿದ್ಧಪಡಿಸಿದ್ದೇನೆ.

ಕಾದಂಬರಿಯ ವ್ಯಾಪ್ತಿ ತುಂಬ ದೊಡ್ಡದು. ಈಗಂತೂ ಕನ್ನಡದಲ್ಲಿ ಕಾದಂಬರಿಯ ಪ್ರವಾಹ ರಭಸದಿಂದ ಧುಮುಕುತ್ತಲಿದೆ. ಬಹು ವಿಸ್ತಾರವಾದ ಈ ಕಾದಂಬರಿಯ ಬೃಹತ್ ದೃಶ್ಯವನ್ನು ಕಿರಿದಾದ ಸ್ವರೂಪದಲ್ಲಿ ಬಿಂಬಿಸಲೆತ್ನಿಸಿದ್ದೇನೆ. ಕಾದಂಬರಿಯ 'ಸಿನೇರಮ' ದೃಶ್ಯ ೮ ಎಂ.ಎಂ. ತೆರೆಯ ಮೇಲೆ ನೋಡಿದಂತೆ ಓದುಗರಿಗೆ ಭಾವನೆಯಾಗಬಹುದು. ಇಲ್ಲಿರುವ ಅವಕಾಶದ ಮಿತಿಯೂ ಅಷ್ಟೆ.

ಇಂದು ಕನ್ನಡದಲ್ಲಿ ಕಾದಂಬರಿಕಾರರದು ಹೆಚ್ಚಿನ ಸಂಖ್ಯೆ. ಕೃತಿಗಳ ನಿರ್ಮಿತಿಯೂ ಅಸಂಖ್ಯ. ಕನ್ನಡದ ಎಲ್ಲ ಕಾದಂಬರಿ

ಕಾರರೂ, ಕೃತಿಗಳು ಈ ಸೀಮಿತ ವ್ಯಾಪ್ತಿಯಲ್ಲಿ ಒಳಪಟ್ಟಿನಲಿಕ್ಕಿಲ್ಲ.ಮುಖ್ಯವಾಗಿ ಕಾದಂಬರಿಯ ಇತಿಹಾಸಕ್ಕೆ ಪೂರಕ-ಪೋಷಕವಾಗುವಂತಹ ಕೃತಿಗಳ ಬಗೆಗೆ, ಕಾದಂಬರಿಕಾರರ ಬಗೆಗೆ ಸೂಚಿಸಿದ್ದೇನೆ. ಅನ್ಯಥಾ ಅರ್ಥಕ್ಕೆ, ಇಲ್ಲಿ ಅವಕಾಶವಿಲ್ಲ. ಹಲವು ಗ್ರಂಥಗಳಲ್ಲಿನ ಪತ್ರಿಕೆಗಳಲ್ಲಿನ ಮಾತುಗಳನ್ನು ಇಲ್ಲಿ ಪಡಿಮೂಡಿಸಿದ್ದೇನೆ. ಸಂಬಂಧಿಸಿದ ಎಲ್ಲ ಲೇಖಕರ ಋಣವನ್ನು ಇಲ್ಲಿ ನೆನೆಯುತ್ತೇನೆ. ಮರೆತುಹೋದ ಇನ್ನಿತರರ ಬಗೆಗೂ ನಾನು ಋಣಿ.

ನನ್ನ ಉಪನ್ಯಾಸಕ್ಕೆ ಏರ್ಪಾಡು ಮಾಡಿಕೊಟ್ಟ ಪ್ರಕಟನ ವಿಭಾಗದ ನಿರ್ದೇಶಕರಾದ ಶ್ರೀ ಚೆನ್ನವೀರ ಕಣವಿ ಅವರಿಗೂ ಉಪನಿರ್ದೇಶಕರಾದ ಶ್ರೀ ಎಸ್.ಬಿ.ನಾಯಕ ಅವರಿಗೂ ಇತರ ಕಾರ್ಯದಲ್ಲಿ ಸಹಕರಿಸಿದ ಸಹಾಯಕ ನಿರ್ದೇಶಕರಾದ ಗೆ.ಲಿಂಗರಾಜ ಗುಡ್ಡೀನ ಅವರಿಗೂ ಸಂಬಂಧಿಸಿದ ಇತರ ಕರ್ನಾಟಕ ವಿಶ್ವವಿದ್ಯಾಲಯದ ಅಧಿಕಾರಿಗಳಿಗೂ ನಾನು ಅತ್ಯಂತ ಕೃತಜ್ಞ.

'ಕೃತೀ' ಸೌರಭ
ಬನಹಟ್ಟಿ (ಜಿ. ವಿಜಾಪುರ)
೧೧-೩-೧೯೭೫
[ಮಹಾಶಿವರಾತ್ರಿ]

—ದು. ನಿಂ. ಬೆಳಗಲಿ

ಪರಿವಿಡಿ

ಕನ್ನಡದಲ್ಲಿ ಕಾದಂಬರಿ ಸಾಹಿತ್ಯ

ಕಾದಂಬರಿ :

ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿ ಅತ್ಯಂತ ಜನಪ್ರಿಯವಾದುದು. ಈ ಮಾತು ಕನ್ನಡಕ್ಕೆ ಅಷ್ಟೇ ಅನ್ವಯಿಸದೆ, ವಿಶ್ವಸಾಹಿತ್ಯಕ್ಕೂ ಅನ್ವಯಿಸುವದು. ಕಾದಂಬರಿ ಸರ್ವಜನರಿಗೆ ಪ್ರಿಯವಾದ ಒಂದು ಸಾಹಿತ್ಯಿಕ ಮಾಧ್ಯಮವಾಗಿದೆ. ಸಾಹಿತ್ಯದ ಹಲವು ಪ್ರಕಾರಗಳಿಗಿಂತ ವಿಲಂಬವಾಗಿ ಕಾದಂಬರಿ ಮಾಡಿ ಬಂದರೂ, ಅದು ತನ್ನ ವಿಶಿಷ್ಟ ಲಕ್ಷಣಗಳಿಂದ, ಎಲ್ಲ ಪ್ರಕಾರಗಳನ್ನು ಹಿಂದೆ ಹಾಕಿ, ಮೇಲೇರಿ ಉತ್ತುಂಗ ಶಿಖರವನ್ನೇ ಆಕ್ರಮಿಸಿದೆ. ಎಲ್ಲ ವರ್ಗದ, ಎಲ್ಲ ಮನಸ್ಸಿನ ಜನರಿಗೆ ಮಾನ್ಯವಾಗಿದೆ. ಜಗತ್ತಿನ ಎಲ್ಲ ಸಾಹಿತ್ಯದ ಇತಿಹಾಸದಲ್ಲಿ ಈಗ ಕಾದಂಬರಿಗೇನೇ ಅಗ್ರಪೂಜೆ.

ಕನ್ನಡದಲ್ಲಿ ಕೂಡ ಕಾದಂಬರಿ ತಡವಾಗಿ ಬಂದರೂ, ಈಗ ಅದೇ 'ಹಿರಿಯ ಗಡಿ'ಯಾಗಿ ನಿಂತಿದೆ. ಕನ್ನಡದಲ್ಲಿ ಕಾದಂಬರಿ ಹುಟ್ಟಿಕೊಂಡು ಒಂದು ಪರಿಪೂರ್ಣ ಸ್ವರೂಪ ಪಡೆದ ಮೇಲೆ, ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿ ಇದೇ ಉಚ್ಚ ಸ್ಥಾನ ಪಡೆದಿದೆ. ಈ ಕಾದಂಬರಿ ಒಂದು ಬಗೆಯಿಂದ

ಸಂಪ್ರದಾಯ ಕಥೆಗಳು, ಪ್ರಚಲಿತ ಸಂಗತಿಗಳು, ದಂತಕಥೆಗಳು ಮತ್ತು ಜನಪದ ಸಾಹಿತ್ಯದಂತೆ ಜನಸಾಮಾನ್ಯರ ಬಯಕೆ, ಅಭಿರುಚಿಗಳನ್ನು ಪೂರ್ಣಗೊಳಿಸುವಂತಿದೆ. ವಿಶ್ವದಲ್ಲಿ ಕಥೆಯೇ, -ಅದು ಪದ್ಯರೂಪದಲ್ಲಿಯೇ ಇರಲಿ, ಗದ್ಯರೂಪದಲ್ಲಿಯೇ ಇರಲಿ-ಪ್ರಥಮದಲ್ಲಿ ಸಾಹಿತ್ಯ ಸ್ವರೂಪವನ್ನು ರೂಪಿಸಿದಾಗ, ಕಥೆಯ ಅಡಿಗಲ್ಲಿನ ಮೇಲೆ ಭವ್ಯವಾಗಿ ಬೆಳೆದು ನಿಂತ ಈ ಕಾದಂಬರಿ ಮಂದಿರ ಎಲ್ಲರನ್ನು ಆಕರ್ಷಿಸಿದ್ದು ಅದೇನು ಅಚ್ಚರಿಯ ಸಂಗತಿಯಲ್ಲ. ಅಕ್ಷರಬಲ್ಲ ಸಾಮಾನ್ಯ ಹಳ್ಳಿಗನಿಗೂ ಅರ್ಥವಾಗುವ, ರಂಜನೆಯನ್ನೀಯುವ ಸಾಧನವೆಂದೇ ಕಾದಂಬರಿ ಇಷ್ಟು ಜನಪ್ರಿಯವಾಗಿದೆ. ಈಗಲೂ ಅದೆಷ್ಟೋ ಓದುಗರು, ಪುಸ್ತಕ ಅಂಗಡಿಗಳಲ್ಲಿ ಗ್ರಂಥಾಲಯಗಳಲ್ಲಿ "ಒಂದ ಕಥಿ ಇದ್ದ ಪುಸ್ತಕ, ಉದ್ದ ಕಥೀ ಇದ್ದ ಪುಸ್ತಕ ಕೊಡ್ರಿ" ಎಂದು ಕೇಳುತ್ತಿರುವುದು ಕಾದಂಬರಿಯನ್ನೇ ಕುರಿತಾಗಿದೆ.

ಕಾದಂಬರಿಯ ಮೂಲ :

ಮಾನವನಲ್ಲಿ ಕಥೆಯನ್ನು ಹೇಳುವ ಕೇಳುವ ಹವ್ಯಾಸ ಆದಿಕಾಲದಿಂದಲೂ ಜನಪ್ರಿಯವಾದ ಮನೋರಂಜನೆಯಾಗಿದೆ. ಇಂದಿಗೂ ಇದು ಅನೂಚಾನವಾಗಿ ನಡೆದುಕೊಂಡೇ ಬಂದಿದೆ. ಸ್ವರೂಪ ಮಾತ್ರ ಬದಲಾಗುತ್ತ ಇದೆ ಅಷ್ಟೆ. ಕಾವ್ಯ, ನಾಟಕಗಳಿಗಿಂತ ಇತ್ತೀಚಿನದಾದ ಕಾದಂಬರಿ ಅವುಗಳಿಗಿಂತ ಹೆಚ್ಚು ವಿಶಾಲವೂ ಪರಿಪೂರ್ಣವೂ ಆಗಿದೆ. ನಾಟಕ ಶುದ್ಧ ಸಾಹಿತ್ಯವಲ್ಲವೆಂದು ಹೇಳುತ್ತಾರೆ. ಅದೊಂದು ಸಂಯುಕ್ತ ಕಲೆ.

ಕಾವ್ಯ ಪಂಡಿತರ ಸೊತ್ತೆನಿಸಿದೆ. ಆದರೆ ಕಾದಂಬರಿ ಒಂದು ಸ್ವತಂತ್ರ ಕಲೆಯಾಗಿ ಎಲ್ಲರನ್ನೂ ಮೋಹಗೊಳಿಸಿದೆ. ಮೆರಿಯನ್ ಕ್ರಾಫರ್ಡ್ ಕಾದಂಬರಿಗೆ "ಅಂಗೈ ರಂಗಭೂಮಿ" ಎಂದು ಹೇಳಿದುದು ತೀರ ಉಚಿತವಾಗಿದೆ. ನಾಟಕದ ಎಲ್ಲ ಪರಿಕರಗಳನ್ನು ಕಾದಂಬರಿ ತನ್ನೊಳಗೆ ಇರಿಸಿಕೊಂಡಿದೆ.

ಪ್ರಪಂಚದಲ್ಲಿ ಅತ್ಯಂತ ಪ್ರಾಚೀನ ಕಾದಂಬರಿಗಳು ಈಜಿಪ್ತ ದೇಶದವು. ಈಜಿಪ್ತ ಸಂಸ್ಕೃತಿಯಷ್ಟೇ ಈ ಕಾದಂಬರಿಯ ಇತಿಹಾಸ ಹಳೆಯದಾದರೂ, ಅದು ಒಂದು ನಿರ್ದಿಷ್ಟ ಸ್ವರೂಪವನ್ನು ರೂಪಿಸಿಕೊಂಡಿದ್ದು ಇನ್ನೂರು ವರ್ಷಗಳ ಹಿಂದೆ ಮಾತ್ರ. ಕ್ರಿ. ಶ. ಪೂರ್ವ ೨೦–೨೧ ನೇ ಶತಮಾನಗಳಿಗೆ ಸೇರಿವೆ ಎನ್ನಲಾದ ಹಲವು ಕೃತಿಗಳು ದೊರೆತಿದ್ದು, ಇವುಗಳಿಗೆ ಕಾದಂಬರಿ ಎನ್ನಬಹುದು. ಇವುಗಳಲ್ಲಿ ಹಾಸ್ಯ ಮತ್ತು ವಿಡಂಬನೆ ಮುಖ್ಯವಾಗಿವೆ. 'ಬಾಕ್ದಾದ ರಾಜಕುಮಾರಿ' 'ಸಿನುಹೆ' ಎಂಬುವು ಮುಖ್ಯ. ರೋಮಿನ 'ಬಂಗಾರದ ಕತ್ತೆ' ಎಂಬುದು ಕ್ರಿ. ಶ. ೨ನೇ ಶತಮಾನದ ಕೃತಿ. ಈ ಕತೆಯಲ್ಲಿ ತರುಣ ತತ್ತ್ವಜ್ಞಾನಿ ಕತ್ತೆಯಾಗಿ ಮಾರ್ಪಾಡಾಗುತ್ತಾನೆ. ಈ ಕೃತಿ ಮುಂದಿನ ಕಾದಂಬರಿಕಾರರಿಗೆ ಸ್ಫೂರ್ತಿ ನೀಡಿತೆನ್ನಲಾಗಿದೆ. 'ಗೆಂಜಿ ಮೊನೊಗಟರಿ'– ಗೆಂಜಿಯ ಕಥೆ ಎಂಬುದು ಮುರಾಸಾಕಿ ಎಂಬಾಕೆ ಬರೆದ ಜಪಾನ ದೇಶದ ಹತ್ತನೆಯ ಶತಮಾನದ ಕೃತಿಯಾಗಿದೆ. ಹಲವು ಹೆಣ್ಣುಗಳೊಡನೆ ಸರಸವಾಡುವ

ತರುಣನ ಕಥೆ ಇಲ್ಲಿ ಅದ್ಭುತವಾಗಿ ರೂಪಗೊಂಡಿದೆ. ಇದರಲ್ಲಿನ ಮಾನಸಿಕ ಅನುಭವಗಳ ವಿವರಗಳು ಇಂದಿಗೂ ಬೆರಗು ಗೊಳಿಸುತ್ತಿವೆ: ಹೀಯಾನ್ ಕಾಲದ (ಜಪಾನಿ ಪ್ರೌಢಕಾವ್ಯ ಗಳ ಕಾಲದಲ್ಲಿ ಹುಟ್ಟಿದ) ಈ ಕೃತಿ ಪ್ರಪಂಚದ ಕಾದಂಬರಿ ಚರಿತ್ರೆಯಲ್ಲಿ ಎದ್ದು ಕಾಣುವಂತಾಗಿದೆ.

ಚೀನದಲ್ಲಿ ಹದಿಮೂರನೆಯ ಶತಮಾನದಲ್ಲಿ ಕೆಲವು ಸಾಹಸಮಯ ಜನಪ್ರಿಯ ಕಥೆಗಳು ಕಾಣುತ್ತವೆ. ೧೪ನೆಯ ಶತಮಾನದ ನಂತರ ಚೀನಿ ಕಾದಂಬರಿ ಉಚ್ಚಸ್ಥಾನ ಪಡೆ ಯಿತು. ಆಧುನಿಕ ಲ್ಯಾಟಿನ್ ಭಾಷೆಗಳಲ್ಲಿ ಕಾದಂಬರಿ ಬಂದ ಉದಾಹರಣೆಗಳಿವೆ. ಆದರೆ ಇಟಾಲಿಯನ್ ಭಾಷೆಗಳಲ್ಲಿ ಖಚಿತ ವಾದ ಕಾದಂಬರಿ ಸ್ವರೂಪ ಮೂಡಿದ್ದು ೧೨ನೆಯ ಶತಮಾನದ ನಂತರ. ' ರೌಂಡ್ ಟೇಬಲ್ ' ' ತರೋಲಾ ಕೊಟಂಡಾ ' ಕೃತಿಗಳು ಗುಪ್ತನಾಮದಿಂದ ಬಂದವು. ಫ್ರೆಂಚ್ ಭಾಷೆಯಲ್ಲಿ ಇಂದು ' ರೋಮಾ ' ಎಂದು ಕರೆಯಲ್ಪಡುವ ಕಾದಂಬರಿ ೧೨ನೆಯ ಶತಮಾನಕ್ಕೆ ಮುಂಚೆ ಕಾವ್ಯದ ಕಾನೂನಕ್ಕೆ ಒಳ ಗಾಗದೆ, ಮುಕ್ತ ಕಾವ್ಯರೂಪದಲ್ಲಿ ಆಡು ಫ್ರೆಂಚ್ ಭಾಷೆಯಲ್ಲಿ ಬರೆಯಲ್ಪಟ್ಟಿತ್ತು.

ಆದರೆ ವಿಕಸನ ದೃಷ್ಟಿಯಿಂದ ಎದ್ದು ತೋರಿದ ಪಾಶ್ಚಾತ್ಯ ಕೃತಿಗಳೆಂದರೆ, ಸ್ಪೇನ್ ದೇಶದ ಸರ್ವಾಂಟಿಸ್‌ನ (೧೬೦೫–೧೬೧೫) ' ಡಾನ್ ಕ್ವಿಕ್ಸ್‌ಟ್ ' ಮತ್ತು ಜಾನ್ ಬನ್ಯನ್‌ನ (೧೬೭೮–೭೯) ' ದಿ ಪಿಲಿಗ್ರಿಮ್ಸ್ ಪ್ರೊಗ್ರೆಸ್ '

(ಯಾತ್ರಿಕನ ಮುನ್ನಡೆ). ಇವು ಪ್ರಾರಂಭದ ಕಾದಂಬರಿ ಎನಿಸಿಕೊಂಡಿವೆ. ೧೭೧೯ರಲ್ಲಿ ರಚಿತವಾದ ಕೃತಿ ಡೇನಿಯಲ್ ಡೇಫೋ ಇವನ 'ರಾಬಿನ್‌ಸನ್ ಕ್ರೂಸೊ' ಪ್ರಥಮ ಆಂಗ್ಲ ಕಾದಂಬರಿ ಎಂದು ಹೇಳುತ್ತಾರೆ. 'ರಾಬಿನ್‌ಸನ್ ಕ್ರೂಸೊ' ಕಾದಂಬರಿ ಎಂದು ಗುರುತಿಸಬಹುದು. ಆದರೆ ಸ್ಯಾಮ್ಯುಯೆಲ್ ರಿಚರ್ಡಸನ್‌ನ (೧೬೮೯ – ೧೭೬೧) ಕೃತಿ 'ಪಮೇಲಾ' ಪರಿಪೂರ್ಣವಾದ ಕಾದಂಬರಿಯಾಗಿ ಮೂಡಿಬಂದಿತು. ಒಂದು ವಿಶೇಷವೆಂದರೆ ರಿಚರ್ಡ್‌ಸನ್ ಒಬ್ಬ ಸಾಮಾನ್ಯ ವ್ಯಾಪಾರಿ. ಈತ ಪ್ರೇಮಪತ್ರಗಳನ್ನು ಬರೆಯುವುದರಲ್ಲಿ ಪರಿಣಿತ. ಪರರಿಗೆ ಇಂಥ ಪತ್ರಗಳನ್ನು ಬರೆದುಕೊಟ್ಟು ಬದುಕನ್ನು ಸಾಗಿಸುತ್ತಿದ್ದ. ಇದೇ ರೂಢಿ ಕಥೆಯಲ್ಲಿ ಇಳಿದು 'ಪಮೇಲಾ' ಕಾದಂಬರಿ ಹುಟ್ಟಿಕೊಂಡಿತು.

ಇಂಗ್ಲೀಷಿನ 'ನಾವೆಲ್' ಪದ ಲ್ಯಾಟಿನ್ನಿನ 'ನೋವಸ್' ಎನ್ನುವ ಪದದಿಂದ ಬಂದಿದ್ದು. ನೋವಸ್ ಎಂದರೆ ಹೊಸದು ಎಂದರ್ಥ. ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿ ಇದು ಹೊಸದಾಗಿ ಹುಟ್ಟಿದ್ದರಿಂದ, ಇಂಗ್ಲೀಷಿನಲ್ಲಿ ಈ ಹೊಸ ಹೆಸರನ್ನು ಪಡೆಯಿತು.

ವಿಲಿಯಂ ಹೇನ್ರಿ ಹಡ್ಸನ್ ಕಾದಂಬರಿಯ ಕರ್ತವ್ಯದ ಬಗೆಗೆ ಈ ರೀತಿ ಹೇಳುತ್ತಾನೆ: "ವಿರಾಮ ಕಾಲದಲ್ಲಿ ಮನರಂಜನೆಯನ್ನೂ, ವಾಸ್ತವಿಕ ವ್ಯವಹಾರಗಳ ಶ್ರಮದಿಂದ ಬಿಡುಗಡೆಯನ್ನೂ ಒದಗಿಸುವುದು. ಈ ಬಗೆಯಲ್ಲಿ ತನ್ನ

ಉದ್ದೇಶವನ್ನು ಸಾಧಿಸುವ ಯಾವುದೇ ಕಾದಂಬರಿ, ಅದು ಕೊಡುವ ಸಂತೋಷ ಅಖಂಡವೂ ಪುಷ್ಟಿಕರವೂ ಆಗಿದ್ದ ಪಕ್ಷದಲ್ಲಿ, ತನ್ನನ್ನು ತಾನು ಸಂಪೂರ್ಣವಾಗಿ ಸಮರ್ಥಿಸಿಕೊಂಡಿದೆ ಎನ್ನಬಹುದು."

ಕನ್ನಡಕ್ಕೆ 'ಕಾದಂಬರಿ' ಬಂದ ಬಗೆ:

ಈ ಸಾಹಿತ್ಯ ಪ್ರಕಾರಕ್ಕೆ ಕನ್ನಡದಲ್ಲಿ 'ಕಾದಂಬರಿ' ಎಂಬ ಹೆಸರು ಬಂದಿದ್ದು ಬಾಣನ ಸಂಸ್ಕೃತ ಕೃತಿ 'ಕಾದಂಬರಿ' ಯಿಂದ ಎಂದು ಹಲವರು ಹೇಳುವುದುಂಟು. ಬಾಣನ ಕಥೆ, 'ಕಾದಂಬರಿ' ಗದ್ಯದಲ್ಲಿ ರೂಪಗೊಂಡಿದೆ. ಕ್ರಿ. ಶ. ೧೮೭೫ ರಲ್ಲಿ ಪ್ರಕಟವಾದ ಶ್ರೀ ಗಂಗಾಧರ ಮಡಿವಾಳೇಶ್ವರ ತುರುಮರಿ ಅವರ ಕಾದಂಬರಿಯ ಅನುವಾದ ಹೊಸಗನ್ನಡ ಗದ್ಯದಲ್ಲಿ ಆಗಿದ್ದು, ಓದುಗರ ಮನಸ್ಸನ್ನು ಸೂರೆಗೊಂಡಿತು. ಇದೇ ಕೃತಿಯನ್ನು ಜಿ. ವೈ. ಕೃಷ್ಣಾಚಾರ್ಯರು ಗದ್ಯದಲ್ಲಿ ಅನುವಾದಿಸಿದ್ದು, ಅದು ಮೈಸೂರು ಸಂಸ್ಥಾನದಲ್ಲಿ ಪ್ರಚಾರಗೊಂಡಿದ್ದು, ತುರುಮರಿ ಅವರ ಕೃತಿಯಷ್ಟು ಜನಪ್ರಿಯವಾಗಲಿಲ್ಲ. ನಾಗವರ್ಮನು ಮೊದಲೇ ಇದನ್ನು ಕನ್ನಡ ಕಾವ್ಯಕ್ಕೆ ಇಳಿಸಿದ್ದು ಅದು ಪಂಡಿತರ ಸ್ವತ್ತಾಗಿತ್ತು ಅಷ್ಟೆ (ಕರ್ನಾಟಕ ಕಾದಂಬರಿ).

ಬಾಣನ ಈ ಕೃತಿಯಲ್ಲಿ 'ಕಾದಂಬರಿ' ಎಂಬ ನಾಮಧೇಯವುಳ್ಳ ನಾಯಿಕೆಯಿದ್ದು, ಇದೇ ಹೆಸರಿನಿಂದ 'ನಾವೆಲ್' ಪ್ರಕಾರಕ್ಕೆ ಕನ್ನಡದಲ್ಲಿ ಕರೆದಿರಬಹುದೆಂಬ ತಿಳುವಳಿಕೆ. ಕನ್ನಡ

ಕ್ಕಿಂತ ಪೂರ್ವದಲ್ಲಿ ಮರಾಠಿಯಲ್ಲಿ ಈ ಸಾಹಿತ್ಯ ಪ್ರಕಾರಕ್ಕೆ ' ಕಾದಂಬರಿ ' ಎಂದು ಕರೆದದ್ದುಂಟು. ಕ್ರಿ. ಶ. ೧೮೨೭ ರಲ್ಲಿ ಮುಂಬಯಿ ಸರಕಾರ ಪ್ರಕಟಪಡಿಸಿದ ' ಮರಾಠಿ ಭಾಷೆ ಚಾ ಕೋಶ ' ಎಂಬ ಮರಾಠಿ ಭಾಷೆಯ ಕೋಶದಲ್ಲಿ ಕಾದಂಬರಿಗೆ ' ಕಲ್ಪಿತ ಕಥೆ ' ಎಂಬ ಅರ್ಥವನ್ನು ಕೊಡಲಾಗಿದೆ. ಮುಂದೆ ೧೮೫೪ ರ ಅಕ್ಟೋಬರ ಸಂಚಿಕೆಯಿಂದ ' ಚಂದ್ರಿಕಾ ' ಎಂಬ ಪತ್ರಿಕೆಯು ' ನೀತಿಪರ ಕಾದಂಬರಿ ' ಎಂಬ ಶಿರೋನಾಮೆ ಯಿಂದ ಒಂದು ಧಾರಾವಾಹಿಯನ್ನು ಪ್ರಕಟಿಸತೊಡಗಿತು. ಕನ್ನಡದಲ್ಲಿ ತನ್ನ ಕಲ್ಪಿತ ಕೃತಿಗೆ ' ಕಾದಂಬರಿ' ಎಂದು ಪ್ರಥಮ ವಾಗಿ ಕರೆದುಕೊಂಡವರು ಲಕ್ಷ್ಮಣ ಭೀಮರಾವ್ ಗದಗಕರ. ಕ್ರಿ.ಶ. ೧೮೯೨ ರಲ್ಲಿ ರಚಿತವಾದ 'ಸೂರ್ಯಕಾಂತ' ಕೃತಿಗೆ ಇವರು ' ಕನ್ನಡ ಹೊಸ ಕಾದಂಬರಿ ' ಎಂದು ಕರೆದುಕೊಂಡಿದ್ದಾರೆ. ಅಲ್ಲದೆ ಪೀಠಿಕೆಯಲ್ಲಿ ತಮ್ಮ ನಿಲುವನ್ನು ಈ ರೀತಿ ವಿವರಿಸಿದ್ದಾರೆ:

"ಜನರಲ್ಲಿ ಓದುವ ಅಭಿರುಚಿ ಹುಟ್ಟಿದ ಹೊರ್ತು ಯಾವ ಭಾಷೆಯೂ ಉತ್ತಮ ಸ್ಥಿತಿಯಲ್ಲಿ ಬರಲಾರದು. ಇಂಥ ಅಭಿರುಚಿಯನ್ನು ಹುಟ್ಟಿಸಬೇಕಾದರೆ ಕಾದಂಬರಿ, ಇತಿಹಾಸ, ನಾಟಕ ಮುಂತಾದ ಸಾಮುಗ್ರಿಯು ಅವಶ್ಯವಾಗಿ ಬೇಕಾಗುತ್ತದೆ. ಈ ಕೊರತೆಯನ್ನು ನನ್ನ ಕೈಲಾದ ಮಟ್ಟಿಗೆ ನಿವಾರಿಸಬೇಕೆಂದು ಆಶೆಯುಳ್ಳವನಾಗಿ ಈ ಚಿಕ್ಕ ಕಾದಂಬರಿಯನ್ನು ಬರೆದಿದ್ದೇನೆ." ಕಾದಂಬರಿ ಎಂಬ ಹೆಸರು ಕನ್ನಡದಲ್ಲಿ ಈ ಕೃತಿಯಿಂದಲೇ ಆರಂಭಿಸಿತು. ಅನಂತರ ೧೮೯೮ ರಿಂದ ಸ್ವತಂತ್ರವಾಗಿಯೂ,

ಮರಾಠಿ ಅನುವಾದ ಮಾಡಿಯೂ ಗಳಗನಾಥರು ಬರೆದ ತಮ್ಮೆಲ್ಲ ಕೃತಿಗಳಿಗೆ ' ಕಾದಂಬರಿ ' ಎಂದೇ ಕರೆದರು.

ಇದಕ್ಕೂ ಮೊದಲು ೧೮೮೫ ರ ಸುಮಾರಿಗೆ ಬಿ· ವೆಂಕಟಾಚಾರ್ಯರು ಬಂಗಾಲಿ ಕಾದಂಬರಿ ' ದುರ್ಗೇಶ ನಂದಿನಿ ' ಯನ್ನು ಕನ್ನಡಕ್ಕೆ ಅನುವಾದಿಸಿದಾಗ ಅವರು ' ನಾವೆಲ್ ' ಇಂಗ್ಲಿಷ ಪದವನ್ನೆ ಕನ್ನಡದಲ್ಲಿಯೂ ಇರಿಸಿದ್ದರು. ತಮ್ಮ ಇಂಗ್ಲಿಷ್ ಪ್ರಸ್ತಾವನೆಯಲ್ಲಿ ಅವರು ಈ ಸಾಹಿತ್ಯ ಪ್ರಕಾರದ ಹೆಸರಿನ ಬಗೆಗೆ ಹೀಗೆ ಹೇಳಿದ್ದಾರೆ :

" A novel in the sense it is understood in English is no familiar to the Kanarese speaking public. "

ಆಗ ಮೈಸೂರು ಪ್ರದೇಶದಲ್ಲಿ ಕಾದಂಬರಿಗೆ ಎಲ್ಲರೂ ' ನಾವೆಲ್ ' ಎಂದೇ ಕರೆದರು. ೧೯೨೦ ನೆಯ ದಶಕದ ವರೆಗೂ ಹಳೆಯ ಮೈಸೂರು ಪ್ರದೇಶದಲ್ಲಿ ' ಕಾದಂಬರಿ ' ಪದ ಬಳಕೆಯಲ್ಲಿ ಇರಲೇ ಇಲ್ಲ. ಈಗಲೂ ದಕ್ಷಿಣದಲ್ಲಿ ತೆಲುಗು ಭಾಷೆಯಲ್ಲಿ ' ನವಲಾ ' ಎಂದು, ತಮಿಳಿನಲ್ಲಿ ' ನಾವೆಲ್ ' ಎಂದೇ ಕರೆಯುತ್ತಾರೆ. ಹಿಂದಿ-ಬಂಗಾಲಿಗಳಲ್ಲಿ ನಾವೆಲ್ ' ಉಪನ್ಯಾಸ್ ' ವಾಯಿತು. ಮರಾಠಿ, ಗುಜರಾತಿ ಮತ್ತು ಕನ್ನಡಗಳಲ್ಲಿ ನಾವೆಲ್ ಕಾದಂಬರಿಯಾಯಿತು. ಉಪನ್ಯಾಸ್-ನವಲಾಗಳಿಗಿಂತ ಸುಂದರ,ಮಧುರವಾದ ಪದ ಈ 'ಕಾದಂಬರಿ'.

ಮೊಳಕೆ–ಮೊದಲ ಘಟ್ಟ :

ಕನ್ನಡದಲ್ಲಿ ಕಾದಂಬರಿಯು ಖಚಿತ ಸ್ವರೂಪ ಮೂಡುವು ದಕ್ಕೆ ಮುನ್ನ, ಬಂಗಾಲಿ, ಮರಾಠಿ, ತೆಲುಗು ಭಾಷೆಗಳಲ್ಲಿ ಇಂಗ್ಲಿಷ ಅಧ್ಯಯನದ ಪರಿಣಾಮದಿಂದ. ಇಂಗ್ಲಿಷಿನಿಂದ ಭಾಷಾಂತರವಾಗಿಯೂ, ರೂಪಾಂತರವಾಗಿಯೂ, ಸ್ವತಂತ್ರ ವಾಗಿಯೂ ಕಾದಂಬರಿಗಳು ಬಂದಿದ್ದವು. ಬಂಗಾಲಿ, ಮರಾಠಿ, ತೆಲುಗು, ಇಂಗ್ಲಿಷ್, ಭಾಷೆಗಳಿಂದ ಕನ್ನಡಕ್ಕೆ ಕಾದಂಬರಿಗಳ ಬರುವ ಪೂರ್ವದಲ್ಲಿ ಕಾದಂಬರಿಯ ಸ್ವರೂಪಕ್ಕೆ ಸಮೀಪ ವರ್ತಿಯಾಗಿ ಕೆಲವು ಕೃತಿಗಳು ಮೂಡಿಕೊಂಡಿದ್ದು, ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಅವು ಕನ್ನಡದಲ್ಲಿ ಹೊಸ ಬೆಳಗನ್ನು ಮೂಡಿಸಿದ್ದವೆಂದು ಹೇಳಬೇಕು.

ಹಳಗನ್ನಡದಿಂದ ಹೊಸಗನ್ನಡಕ್ಕೆ ಸಾಗಿಬಂದ ಸಂಧಿ ಕಾಲದಲ್ಲಿ, ಅಂದರೆ ೧೯ನೆಯ ಶತಮಾನದ ಪೂರ್ವಾರ್ಧದಲ್ಲಿ, ಪಾಶ್ಚಾತ್ಯ ಸಾಹಿತ್ಯದ ಪ್ರಭಾವಕ್ಕೆ ಮುಂಚೆ 'ಕಾದಂಬರಿ' ಅಭಿದಾನಕ್ಕೆ ಉಚಿತವಾಗಿ ಮೂರು ಕೃತಿಗಳು ಮೂಡಿ ಬಂದುವು. ಯಾದವನ 'ಕಲಾವತಿ ಪರಿಣಯ' ಮುಮ್ಮಡಿ ಕೃಷ್ಣರಾಜರ 'ಸೌಗಂಧಿಕಾ ಪರಿಣಯ' ಮತ್ತು ಕೆಂಪು ನಾರಾಯಣನ 'ಮುದ್ರಾ ಮಂಜೂಷ'.

ದೊಡ್ಡಬಳ್ಳಾಪುರದ ಯಾದವ ಎಂಬ ಕವಿ (ಸು. ಕ್ರಿ. ಶ. ೧೮೧೫) 'ಕಲಾವತಿ ಪರಿಣಯ' ಎಂಬ ಕಾದಂಬರಿಯನ್ನು

ಹಳಗನ್ನಡ ಸರಣಿಯ ಪದ್ಯ ಗದ್ಯ ರೂಪದಲ್ಲಿ ಬರೆದಿದ್ದನು. ಈತ ಮುಮ್ಮಡಿ ಕೃಷ್ಣರಾಜರ ಆಸ್ಥಾನದಲ್ಲಿದ್ದನೆಂದು ಹೇಳುತ್ತಾರೆ. ಕೆಲ ಜಾನಪದ ಕಥೆಗಳ ಜಾಡಿನಲ್ಲಿರುವ ಈ ಕಾದಂಬರಿಯ ಕಥಾವಸ್ತು ತುಂಬ ಹೃದ್ಯವಾಗಿದೆ. ಯಾದವನು ಅರಸರಾಡಿದ ಹಗುರುಮಾತಿನಿಂದ ಬೇಸರಗೊಂಡು ತನ್ನೂರಿಗೆ ಹೋಗಿ ಈ ಕೃತಿಯನ್ನು ರಚಿಸಿದನಂತೆ. ಕನ್ನಡದ ಆದ್ಯ ಕಾದಂಬರಿ ಇದೇ ಎಂದು ಗೋವಿಂದ ಪೈಗಳು ಹೇಳಿದ್ದಾರೆ. ಇದರ ಕಥೆಯು ಪೌರಾಣಿಕವಾಗಿದ್ದರೂ ಸ್ವಕಲ್ಪಿತವಾದದ್ದು. ಹೊಸತನದಿಂದ ಕೂಡಿದ್ದು ಆಗಿದೆ. ಒಂದು ಸಣ್ಣ ಕಾರಣದಿಂದ ಗಂಡ ಹೆಂಡಿರು ಅಗಲಿ, ತಮ್ಮ ಮಗನಿಂದಾಗಿ ಪುನರ್ಮಿಲನ ಹೊಂದುವುದು ಇಲ್ಲಿಯ ಕಥೆಯ ವಸ್ತುವಾಗಿದೆ. ೧೮೬೦ ನೆಯ ದಶಕದಲ್ಲಿ ಈ ಕೃತಿ ಅಚ್ಚಾಗಿದೆ. ಆಗ ಇದು ತುಂಬ ಜನಪ್ರಿಯವಾಗಿದ್ದು ಮದ್ರಾಸ್ ವಿಶ್ವವಿದ್ಯಾನಿಲಯದವರು ಈ ಗ್ರಂಥವನ್ನು ಪಠ್ಯವನ್ನಾಗಿ ಮಾಡಿದ್ದರು.

ಮುಮ್ಮಡಿ ಕೃಷ್ಣರಾಜರ 'ಸೌಗಂಧಿಕಾ ಪರಿಣಯ' ೧೮೨೧ ರಲ್ಲಿ ರಚಿತವಾಯಿತು. ದೇವೇಂದ್ರ ಶಚಿದೇವಿಯರ ಮರುಜನ್ಮದ ಕಾಲ್ಪನಿಕ ಕಥೆಯು ಶೃಂಗಾರ ರಸದಿಂದ ತುಂಬಿಕೊಂಡಿದೆ. ದುರ್ವಾಸಮುನಿಯ ಶಾಪದಿಂದ ತನ್ನ ಪದವಿ ಕಳೆದುಕೊಂಡ ದೇವೇಂದ್ರ ಸುಗಂಧರಾಯನೆಂಬ ಹೆಸರಿನಿಂದ ಭೂಲೋಕದಲ್ಲಿ ಜನಿಸಿ, ಸೌಗಂಧಿಕೆಯಾಗಿ ಹುಟ್ಟುವ ಶಚಿದೇವಿಯನ್ನು ವರಿಸಿದನೆಂಬುದೇ ಈ ಕೃತಿಯ ಕಥಾಸಾರ. ಇದು

ಮೂವತ್ತಾರು ಆಶ್ವಾಸಗಳಲ್ಲಿ ಬೆಳೆದು, ಅನೇಕ ವಿಷಯ ಸೇರಿಸಿಕೊಂಡ ಈ ಗದ್ಯ-ಪದ್ಯಾತ್ಮಕ ಕೃತಿಯ ಪುಟಗಳ ಸಂಖ್ಯೆ ಸಾವಿರಕ್ಕೆ ಮೀರಿ ಬೃಹತ್ ಕೃತಿಯಾಗಿದೆ. ಇದರ ಭಾಷೆ ಹೊಸಗನ್ನಡಕ್ಕೆ ತೀರ ಹತ್ತಿರವಾಗಿದೆ.

ಹೊಯಿಸಣಿಗ ಕುಲದ ಕೆಂಪುನಾರಾಯಣನ 'ಮುದ್ರಾ ಮಂಜೂಷ' ೧೮೨೩ ರಲ್ಲಿ ರಚಿತವಾಗಿದ್ದು, ಇದು ಉತ್ತರಾರ್ಧದಲ್ಲಿ ಮಾತ್ರ ವಿಶಾಖದತ್ತನ ಸಂಸ್ಕೃತ ಮುದ್ರಾರಾಕ್ಷಸನ ನಾಟಕದ ಆಧಾರವೇ ಹೊರತು ಅನುವಾದವಲ್ಲ. ವಿಶಾಖದತ್ತನ ನಾಟಕ ಕೆಂಪುನಾರಾಯಣನಿಗೆ ಸ್ಫೂರ್ತಿಯನ್ನಿತ್ತಿದ್ದು ಮಾತ್ರ ನಿಜ. ಆದರೆ ಕೆಂಪುನಾರಾಯಣ ಬೇರೆ ಬೇರೆ ಆಧಾರಗಳಿಂದ ಈ ಕೃತಿಯನ್ನು ರಚಿಸಿದನು, ಅಲೌಕಿಕ ಸನ್ನಿವೇಶ, ಶೃಂಗಾರಗಳಿಲ್ಲದಿದ್ದರೂ ರಾಜನೀತಿಯ ಚಾತುರ್ಯವನ್ನು ತೋರಿಸುವ ಈ ಕೃತಿಯು ವಾಚಕರ ಮನಸ್ಸನ್ನು ಸೂರೆಗೊಳ್ಳುವಂತಹುದು. ಈ ಕೃತಿ ಆಧುನಿಕ ಕನ್ನಡ ಗದ್ಯ ಶೈಲಿಗೆ ನಾಂದಿಯಾಯಿತೆಂದು ಹೇಳಬೇಕು. ಚಾಣಕ್ಯ ಚಂದ್ರಗುಪ್ತರು ನಂದರ ವಿನಾಶವನ್ನು ಸಾಧಿಸಿ ಪಾಟಲಿಪುತ್ರದ ಸಿಂಹಾಸನವನ್ನು ದೊರಕಿಸಿಕೊಂಡ ಕಥೆ ಈ ಗ್ರಂಥದ ವಿಷಯ.

ಇಂಗ್ಲಿಷ ಭಾಷೆಯ ಸಂಪರ್ಕವಿಲ್ಲದ ಆ ಕಾಲದಲ್ಲಿ ಕನ್ನಡದಲ್ಲಿ ಕಾದಂಬರಿಯ ಸ್ವರೂಪಕ್ಕೆ ನಾಂದಿಯಾಗಿ ಈ ಕೃತಿಗಳು ಬಂದಿದ್ದು ವಿಶೇಷವಾಗಿದೆ.

ಮೊದಲ ಅನುವಾದಗಳು :

ಕ್ರಿ.ಶ. ೧೮೩೦ರಿಂದ ಇಂಗ್ಲಿಷ ಶಿಕ್ಷಣ ಕ್ರಮವು ನಾಡಿನಲ್ಲಿ ಜಾರಿಯಾಗತೊಡಗಿತು. ಇದರ ಪರಿಣಾಮವಾಗಿ ಕನ್ನಡದಲ್ಲಿ ಶೆಕ್ಸಪಿಯರನ ಇಂಗ್ಲಿಷ ನಾಟಕಗಳು ಅನುವಾದಗೊಂಡವು ಹೊರತು, ಇಂಗ್ಲಿಷ ಕಾದಂಬರಿಕಾರರ ಕೃತಿಗಳು ಬರಲಿಲ್ಲ. ಕನ್ನಡಕ್ಕೆ ಅನುವಾದ ಕಾದಂಬರಿಗಳು ಬಂದಿದ್ದು ಬಂಗಾಲಿ, ಮರಾಠಿ ಮತ್ತು ತೆಲುಗಿನಿಂದ. ಆದರೆ ಜಾನ್ ಬನ್ಯನ್‌ನ 'The Pilgrim's Progress' ೧೮೪೭ರಲ್ಲಿ ಕನ್ನಡದಲ್ಲಿ 'ಯಾತ್ರಿಕನ ಸಂಚಾರ' ಎಂಬ ಹೆಸರಿನಲ್ಲಿ ಮೊದಲ ಭಾಗವು ಬಂದಿದ್ದು, ಎರಡನೇ ಭಾಗವು ೧೮೪೯ರಲ್ಲಿ ಬಂದಿತು. ಇದನ್ನು ಮಂಗಳೂರ ಬಾಸೆಲ್ ಮಿಶನ್‌ನಲ್ಲಿ ಮತಪ್ರಚಾರಕರಾದ ಜಿ. ವೀಗಲ್ ಅವರು ಅನುವಾದಿಸಿದ್ದರು. ಇದೊಂದು ಕ್ರೈಸ್ತ ಧಾರ್ಮಿಕ ಕೃತಿ. ಡೇನಿಯಲ್ ಡೇಫೋನ 'ರಾಬಿನ್‌ಸನ್ ಕ್ರೂಸೋ' ಈ ಕೃತಿಯನ್ನು ಎಸ್.ಬಿ. ಕೃಷ್ಣಸ್ವಾಮಿ ಅಯ್ಯಂಗಾರ್ ೧೮೫೭ರಲ್ಲಿ ಅನುವಾದಿಸಿದರು. ಇದನ್ನು ಇವರು ವಿದ್ಯಾರ್ಥಿಗಳಾಗಿ ಅನುವಾದಿಸಿದ್ದರು. ಇದನ್ನೇ ಹೊಸಗನ್ನಡದ ಪ್ರಥಮ ಅನುವಾದಿತ ಕಾದಂಬರಿಯೆಂದು ಗಣಿಸಬಹುದು. ೧೮೬೯ರಲ್ಲಿ ಮರಾಠಿಯಿಂದ ಅನುವಾದವಾದ ಬಾಬಾ ಪದಮಂಜಿಯ 'ಯಮುನಾ ಪರ್ಯಟನ' ಕೂಡ ಒಂದು ಮಿಶನರಿ ಕೃತಿಯಾಗಿದೆ. ಈ ಮೂಲ ಮರಾಠಿ ಕೃತಿಯಲ್ಲಿ ಹಿಂದು ಧರ್ಮದ ಲೋಪದೋಷಗಳನ್ನು ಎತ್ತಿ ತೋರಿಸಿದ್ದು, ವಿಧವೆಯ ಗೋಳಿನ ಚಿತ್ರಣವಿದೆ. ಇದನ್ನು

ಕನ್ನಡದಲ್ಲಿ ಅನುವಾದಗೊಂಡ ಪ್ರಥಮ ಸಾಮಾಜಿಕ ಕಾದಂಬರಿ ಯೆಂದು ಹೇಳಬೇಕಷ್ಟೆ. ಇಂಗ್ಲಿಷಿನಿಂದ ಮತ್ತೊಂದು ಕಾದಂಬರಿ 'ನಿರ್ಭಾಗ್ಯ ಮುರಾದ.' ಜಗತ್ತಿನಲ್ಲಿ ದೈವವೇ ಜಯಾಪಜಯಕ್ಕೆ ಕಾರಣವಲ್ಲ, ವಿವೇಕ ಮುಖ್ಯ ಎಂಬುದನ್ನು ಬಿಂಬಿಸಲು ಮಿಸ್ ಎಜ್‌ವರ್ಥ ಎಂಬವಳ ಕೃತಿಯನ್ನು ಬಾಪು ಸುಬ್ಬರಾಯರು ಕನ್ನಡದಲ್ಲಿ ತಂದರು. ಥಾಮಸ್ ಡೇ ಇವರ Sandford and Martin ಈ ಕೃತಿಯನ್ನು ಎಂ. ಎಸ್. ಪುಟ್ಟಣ್ಣ ಅನುವಾದಿಸಿದರು, ಇದರಲ್ಲಿ ಮಕ್ಕಳಿಗೆ ಸರಿಯಾದ ಶಿಕ್ಷಣ ದೊರೆತು ಅವರು ಸದಾಚಾರಿಗಳಾಗಬೇಕೆಂಬ ದೃಷ್ಟಿಯಿದೆ.

ಖಚಿತವಾದ ಕಾದಂಬರಿಯ ಸ್ವರೂಪವನ್ನು ಹೊತ್ತು ಬಂಗಾಲಿಯಿಂದ ಅನುವಾದಗೊಂಡ ಕೃತಿ ಎಂದರೆ ೧೮೮೫ರಲ್ಲಿ ಬಂದ ಬಂಕಿಮಚಂದ್ರರ 'ದುರ್ಗೇಶ ನಂದಿನಿ' ಬಿ. (ಬಿಂಡಿಗನವಲೆ) ವೆಂಕಟಾಚಾರ್ಯರು ಅನುವಾದ ಮಾಡಿದ ಬಂಕಿಮರ ಪ್ರಥಮ ಕೃತಿಯಿದು. ಅಪ್ರತ್ಯಕ್ಷ ಗುರುವಾದ ಬಂಗಾಲದ ಈಶ್ವರಚಂದ್ರ ವಿದ್ಯಾಸಾಗರರಿಂದ ಪ್ರೇರಿತರಾಗಿ, ಸ್ವತಃ ಬಂಗಾಲಿಯನ್ನು ಕಲಿತು, ಬಂಗಾಲಿಯಲ್ಲಿ ಆದೇ ಹೊಸದಾಗಿ ಮೂಡುತ್ತಿರುವ 'ನಾವೆಲ್'ಗಳಿಗೆ ಮನಸೋತು ವೆಂಕಟಾಚಾರ್ಯರು ಕನ್ನಡಕ್ಕೆ ಅನುವಾದ ಮಾಡಿದ ಪ್ರಥಮ ಗ್ರಂಥ ವಿದ್ಯಾಸಾಗರರ 'ಭ್ರಾಂತಿ ವಿಲಾಸ'. ಈ ಗ್ರಂಥವು ಮದ್ರಾಸ ವಿಶ್ವವಿದ್ಯಾಲಯಕ್ಕೆ ಪಠ್ಯವಾದಾಗ, ಉತ್ಸಾಹಗೊಂಡು ವಿದ್ಯಾಸಾಗರರ ಇನ್ನೊಂದು ಕೃತಿ 'ಸೀತಾ ವನವಾಸ' (೧೮೮೪) ಮತ್ತು 'ಶಕುಂತಲಾ' ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದರು.

ಇಂಗ್ಲಿಷಿನಿಂದ ಕನ್ನಡಕ್ಕೆ ತಡವಾಗಿಯಾದರೂ ಕಾದಂಬರಿಗಳು ಬಂದಿದ್ದು, ಇವುಗಳ ಅನುವಾದವನ್ನು ಪ್ರಕಟಿಸಲು ತೊಡಗಿದವರು ಮೈಸೂರಿನ ಜಿ. ಟಿ. ಎ. ಪ್ರೆಸ್ಸಿನವರು. ೧೮೯೦ರಲ್ಲಿ English Classics ಎಂಬ ಹೆಸರಿನಲ್ಲಿ ಪ್ರಕಟಮಾಡಲಾರಂಭಿಸಿದರು. ಆದರೆ ಇವರು ಉತ್ತಮ ಮಟ್ಟದ ಕೃತಿಗಳನ್ನು ಅನುವಾದಕ್ಕೆ ಆಯ್ಕೆಮಾಡಲಿಲ್ಲ. ಬಾಪು ಸುಬ್ಬರಾಯರ 'ನಿರ್ಭಾಗ್ಯ ಮುರಾದ', ಶ್ರೀಕಂಠೇಗೌಡರ 'ಕನ್ಯಾವಿತಂತು' (ಸರ್ ಹೇನ್ರಿ ಟೇಲರರ ಕೃತಿ A Sisilian Summer) ಸಾಧಾರಣ ಮಟ್ಟದ ಕಾದಂಬರಿಗಳು ಬಂದವು. ಇದೇ ಮಾಲಿಕೆಯಲ್ಲಿ, ಮುಂದೆ ಶ್ರೇಷ್ಠ ತರಗತಿಯ ಸ್ವತಂತ್ರ ಸಾಮಾಜಿಕ ಕಾದಂಬರಿಗಳನ್ನು ರಚಿಸಿದ ಎಂ. ಎಸ್. ಪುಟ್ಟಣ್ಣನವರ Thomas Dey ಈತನ Sandford and Martin ಕೃತಿಯನ್ನು ೧೮೯೩ರಲ್ಲಿ 'ಸುಮತಿ ಮದನ ಕುಮಾರ ಚರಿತ್ರ' ಎಂಬ ಹೆಸರಿನಿಂದ ಅನುವಾದಿಸಿದರು. ಇದು ಉತ್ತಮ ಮಟ್ಟದ ಕೃತಿಯಾಗಿದೆ.

೧೮೯೫ರಲ್ಲಿ ತೆಲುಗಿನ ಕೆ. ವೀರೇಶಲಿಂಗಂ ಪಂತುಲು ಅವರ ಕಾದಂಬರಿ 'ವಿವೇಕ ಚಂದ್ರಿಕೆ' ಯನ್ನು ಕನ್ನಡದ ಪ್ರಸಿದ್ಧ ನಾಟಕಕಾರರಾದ ಬೆಳ್ಳಾವೆ ನರಹರಿ ಶಾಸ್ತ್ರಿಗಳ ಅಣ್ಣಂದಿರಾದ ಬೆಳ್ಳಾವೆ ಸೋಮನಾಥಯ್ಯನವರು ಕನ್ನಡಕ್ಕೆ ಅನುವಾದಿಸಿದರು. ೧೮೯೯ರಲ್ಲಿ ಮಲೆಯಾಳಿಯಿಂದ ಕನ್ನಡಕ್ಕೆ ಅನುವಾದಗೊಂಡ ಪ್ರಥಮ ಕೃತಿ ಜೋಸೆಫ್ ಮೂಳಿಯಲ್ ಅವರ

ಕಾದಂಬರಿ ' ಸುಕುಮಾರಿ ' ಬಾಸೆಲ್ ಮಿಶನ್ ಅವರಿಂದ ಪ್ರಕಟಗೊಂಡಿದೆ.

ಬಾಣ ಕಾದಂಬರಿ :

ಇಷ್ಟೆಲ್ಲ ಕಾದಂಬರಿಗಳು ಕನ್ನಡಕ್ಕೆ ಅನುವಾದಗೊಂಡರೂ ಕೂಡ, ಕನ್ನಡಿಗರಲ್ಲಿ ನಿಜವಾಗಿಯೂ ಓದುವ ಅಭಿರುಚಿಯನ್ನು ಬೆಳೆಸಿದ ಕೃತಿಯೆಂದರೆ ೧೮೭೫ರ ಸುಮಾರಿಗೆ ಬಾಣಕವಿಯ ಸಂಸ್ಕೃತ ಆಖ್ಯಾಯಿಕೆ ಕನ್ನಡದಲ್ಲಿ ಗಂಗಾಧರ ಮಡಿವಾಳೇಶ್ವರ ತುರುಮರಿ ಅವರಿಂದ ಅನುವಾದವಾಗಿ ಬಂದ ಬಾಣ ಕಾದಂಬರಿ ಎಂದೇ ಹೇಳಬೇಕು. ತುರುಮರಿ ಅವರು ಪ್ರಥಮ ದಲ್ಲಿ ಅಂದಿನ ಪರಿಸ್ಥಿತಿಯಂತೆ ಮರಾಠಿಯಲ್ಲಿಯೇ ಪ್ರಾಥಮಿಕ ಶಿಕ್ಷಣ ಪಡೆದಿದ್ದರು. ಸಂಸ್ಕೃತ - ಕನ್ನಡವನ್ನು ಮನೆಯಲ್ಲಿ ಅಭ್ಯಸಿಸಿ ಮುಂಬಯಿ ಕರ್ನಾಟಕ ವಿಭಾಗದಲ್ಲಿ ಶಿಕ್ಷಣ ಖಾತೆಯಲ್ಲಿ ದುಡಿದವರು. ಬಾಣ ಕಾದಂಬರಿಯನ್ನು ತಿಳಿಯಾದ ಸುಂದರ ಶೈಲಿಯಲ್ಲಿ ಕನ್ನಡಿಸಿದರು. ಬಾಣನ ಕ್ಲಿಷ್ಟತರ ಭಾಷೆಯನ್ನು ಹದವಾದ ಕನ್ನಡದಲ್ಲಿ ಭಟ್ಟಿ ಇಳಿಸಿದ್ದು ಇದು ಮುಂದೆ ಗಳಗನಾಥರಂಥ ಕಾದಂಬರಿಕಾರರಿಗೂ ಸ್ಫೂರ್ತಿಯನ್ನಿತ್ತಿತು. ಹೊಸಗನ್ನಡ ಗದ್ಯದ ಪ್ರಥಮ ರೂವಾರಿ ಎಂದು ತುರುಮರಿ ಅವರು ಕರೆಯಿಸಿಕೊಂಡಿದ್ದು ನಿಜವಾದ ಮಾತೇ ಆಗಿದೆ. ಇದಕ್ಕೂ ಪೂರ್ವದಲ್ಲಿ ಯಾವ ಕನ್ನಡ ಲೇಖಕನೂ ಇಂಥ ಸುಂದರವಾದ ಗದ್ಯವನ್ನು ರಚಿಸಿರಲಿಲ್ಲ. ತುರುಮರಿ

ಯುವರ ಭಾಷೆ ದಿನಬಳಕೆಯ ನುಡಿಗಳಿಂದ ಕೂಡಿದ್ದು-ಹೆಚ್ಚು ತಿಳಿಯಾಗಿದೆ.

ಮೊದಲ ಘಟ್ಟದ ಸ್ವತಂತ್ರ ಕೃತಿಗಳು :

ಕನ್ನಡದಲ್ಲಿ ಮೊತ್ತಮೊದಲಿನ ಸ್ವತಂತ್ರ ಕಾದಂಬರಿ ೧೮೯೯ರಲ್ಲಿ ಪ್ರಕಟವಾದ ಗುಳವಾಡಿ ವೆಂಕಟರಾಯರ 'ಇಂದಿರಾ ಬಾಯಿ' ಎಂದು ಹೇಳುವುದುಂಟು. ಆದರೆ ಇದಕ್ಕೂ ಪೂರ್ವದಲ್ಲಿ ೧೮೯೫ರಲ್ಲಿ ಮದ್ರಾಸ ಹೈಕೋರ್ಟ ವಕೀಲರಾದ ಆಂಧ್ರ ಬ್ರಾಹ್ಮಣ ರೆಂಟಾಲ ವೆಂಕಟಸುಬ್ಬರಾವ್ ಇವರು ಬರೆದ 'ಕೇಸರಿ ವಿಲಾಸ' ಕನ್ನಡದ ಪ್ರಥಮ ಮೌಲಿಕ ಕಾದಂಬರಿ ಎಂದು ಗೋವಿಂದ ಪೈ ಅವರು ಹೇಳಿದ್ದಾರೆ. ವೆಂಕಟಸುಬ್ಬರಾವ್ ಇವರು 'ಆನಂದ ದೀಪಿಕೆ' ಎಂಬ ಕೃತಿಯನ್ನು ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಿದ್ದು, ಕೇಸರಿ ವಿಲಾಸವನ್ನು ಕೂಡ ತೆಲುಗಿನಿಂದಲೇ ಅನುವಾದಿಸಿದ ಸಂಭವವೂ ಉಂಟು.' ಒಂದು ವಿಚಿತ್ರ ನೂತನ ಪ್ರಬಂಧ ' ವೆಂದು ಕರೆಯಿಸಿಕೊಂಡ ಈ ಕೃತಿ ಅರ್ಧ ಸಾಮಾಜಿಕ ಅರ್ಧ ಐತಿಹಾಸಿಕ ವಾಗಿದೆ. ಈ ಪುಸ್ತಕ ಅಚ್ಚಾಗಿ ಪ್ರಕಟವಾದದ್ದು ಮದ್ರಾಸಿನಲ್ಲಿಯೆ.

೧೮೯೭ರಲ್ಲಿ ಗುಬ್ಬಿ ಮುರಿಗಾರಾಧ್ಯ ಸೋಮಾರಾಧ್ಯ ಅವರು 'ಶೃಂಗಾರ ಚಾತುರ್ಯೋಲ್ಲಾಸಿನಿ' ಎಂಬ ಕೃತಿಯನ್ನು ರಚಿಸಿದ್ದು, ಇದೇ ಮೈಸೂರು ಪ್ರದೇಶದ ಪ್ರಥಮ ಸ್ವತಂತ್ರ

ಕಾದಂಬರಿ ಎಂದು ಹೇಳಬಹುದು. ಆಗ ವಿದ್ಯಾರ್ಥಿಯಾಗಿದ್ದ ಮುರಿಗಾರಾಧ್ಯರು 'ಸನ್ಮಿತ್ರರ ಇಷ್ಟ ಪೂರ್ತಿಮಾಡಲೋಸುಗ ಈ ಕೃತಿಯನ್ನು ರಚಿಸಿದ್ದಾಗಿ' ಹೇಳಿಕೊಂಡಿದ್ದಾರೆ. ಅಲ್ಲದೆ ಯಾವುದಾದರೊಂದು ಇಂಗ್ಲಿಷ 'ನಾವೆಲ್' ಅನ್ನು ಕನ್ನಡಕ್ಕೆ ಅನುವಾದಿಸಬೇಕೆಂದು ಬಯಸಿದರೆ, ಅಲ್ಲಿನ ವಿಷಯಗಳು ಹಿಂದೂ ಮರ್ಯಾದೆಗೆ ಸರಿಹೊಂದದಿದ್ದು, ಹಿಂದೂ ಮರ್ಯಾದೆಯನ್ನೇ ಇಂಗ್ಲಿಷ್ ನಾವೆಲ್‌ಗೆ ಅನುಗುಣವಾಗಿ ಬರೆದುದಾಗಿ ತಿಳಿಸಿದ್ದಾರೆ. ಶೃಂಗಾರ, ಅದ್ಭುತ, ಕಾಲ್ಪನಿಕವಾದ ಈ ಕಥೆ ವಿಶೇಷವಾಗಿ ಸ್ತ್ರೀ ಪುರುಷರ ಹೆಚ್ಚಿನ ಶೃಂಗಾರ ವರ್ಣನೆಗಳಿಂದ ಕೂಡಿದ್ದಾಗಿದೆ. ಸ್ತ್ರೀಯರ ಸೌಂದರ್ಯ, ವಿರಹ, ಭೋಗಗಳ ವರ್ಣನೆ ವಿಸ್ತಾರವಾಗಿ ಬಂದಿವೆ. ತನ್ನ ಹೆಸರಿನ ತಕ್ಕ ಹಾಗೆ ಈ 'ಶೃಂಗಾರ ಚಾತುರ್ಯೋಲ್ಲಾಸಿನಿ' ಶೃಂಗಾರ ಚಮತ್ಕಾರಗಳಿಂದ ಒಡಗೂಡಿದೆ ಅಷ್ಟೆ.

ಆದರೆ 'ಕೇಸರಿ ವಿಲಾಸ' ಮತ್ತು 'ಶೃಂಗಾರ ಚಾತುರ್ಯೋಲ್ಲಾಸಿನಿ' ಈ ಎರಡೂ ಕಾದಂಬರಿಗಳು ಪ್ರಥಮ ಸ್ವತಂತ್ರ ಕೃತಿಗಳೆಂದು ಬೇರೆ ಬೇರೆಯವರಿಂದ ಹೇಳಿಸಿಕೊಂಡಿದ್ದರೂ, ಪ್ರಥಮ ಸ್ವತಂತ್ರ ಕೃತಿಯಾಗಿ ೧೮೯೭ರಲ್ಲಿ ಬಂದ ಲಕ್ಷ್ಮಣ ಭೀಮರಾವ್ ಗದಗಕರ ಅವರ ಕಾದಂಬರಿ 'ಸೂರ್ಯಕಾಂತ' ವೇ ನಿಲ್ಲಬೇಕು. ಈ ಕಾದಂಬರಿ ಕೂಡ ಅರ್ಧ ಐತಿಹಾಸಿಕ, ಅರ್ಧ ಸಾಮಾಜಿಕವಾಗಿದೆ. ಪೇಶ್ವೆ ಅರಸರ ಕಾಲದ ಜನಜೀವನ. ಬಡವನಾದ ಸೂರ್ಯಕಾಂತ ವಿದ್ಯಾಭ್ಯಾಸಕ್ಕಾಗಿ ಮನೆಬಿಟ್ಟು

ಅರಸನೊಬ್ಬನ ಆಶ್ರಯದಲ್ಲಿ ಸ್ವಂತ ಸಾಹಸದಿಂದ ಉನ್ನತ ದರ್ಜೆಗೇರುತ್ತಾನೆ. ಮುಂದೆ ತಂದೆ ತಾಯಿಯರನ್ನು ಕರೆಯಿಸಿ ಕೊಂಡು ಸುಖವಾಗಿ ಆ ಅರಸನ ಆಶ್ರಯದಲ್ಲಿರುತ್ತಾನೆ. ಈ ಕಾದಂಬರಿಯ ವಿಶೇಷ ಗುಣಗಳು ಹೇಳುವಂತಿಲ್ಲವಾದರೂ, ತಿಳಿಯಾದ ಹೊಸಗನ್ನಡದಲ್ಲಿ ಬಂದ ಸ್ವತಂತ್ರ ಕೃತಿಯಲ್ಲದೆ, ಪ್ರಥಮವಾಗಿ 'ಕಾದಂಬರಿ' ಎಂದು ಹೇಳಿಕೊಂಡ ಗ್ರಂಥ ವಾಗಿದೆ.

೧೮೯೭ರಲ್ಲಿ ಕನ್ನಡದಲ್ಲಿ ಪ್ರಪ್ರಥಮ ಪತ್ತೇದಾರಿ ಕಾದಂಬರಿ ಬಂದಿತು. ಆಗ ಮೈಸೂರಿನ ರಾಜಕೀಯ ಸಾಮಾಜಿಕ ಜೀವನ ವನ್ನು ರೂಪಿಸಿದವರೂ, ಮುಖ್ಯಾಧ್ಯಾಪಕರಾಗಿ ಶಿಕ್ಷಣ ಕ್ಷೇತ್ರ ದಲ್ಲಿ ಸೇವೆಸಲ್ಲಿಸಿದವರೂ, ಪತ್ರಿಕೋದ್ಯಮ ಪಿತಾಮಹರೂ, ಸಾರ್ವಜನಿಕರಲ್ಲಿ 'ತಾತಯ್ಯ' ಎಂದು ಚಿರಪರಿಚಿತರೂ ಆದ ಎಂ. ವೆಂಕಟಕೃಷ್ಣಯ್ಯ ಅವರು 'ಚೋರಗ್ರಹಣ ತಂತ್ರ' ಎಂಬ ಪತ್ತೇದಾರಿ ಕಾದಂಬರಿಯನ್ನು ಬರೆದದ್ದು ವಿಶೇಷ. ಓರ್ವ ಗಣ್ಯ ನಾಗರಿಕನ ದ್ವಿತೀಯ ಪತ್ನಿಯ ಅಪಹರಣ ವಾದಾಗ, ಭೀಮ ಮತ್ತು ಆತನ ಹಸ್ತಕಿಯಾದ ಸುಶೀಲೆ ಎಂಬವರು ಅದನ್ನು ಪತ್ತೆ ಹಚ್ಚಲು ಉದ್ಯುಕ್ತರಾಗುತ್ತಾರೆ. ಕೊನೆಯಲ್ಲಿ ಆ ಗಣ್ಯ ನಾಗರಿಕನ ಪತ್ನಿಯ ಮಗ ಮತ್ತು ಸ್ವತಃ ಆಕೆಯೇ ಕಳ್ಳರ ತಂಡದ ಸದಸ್ಯರಾಗಿದ್ದ ಅಂಶ ಹೊರ ಬೀಳುತ್ತದೆ. ಕಳವು, ಕೊಲೆ, ಮೋಸಗಳಲ್ಲಿ ತೊಡಗಿದವರನ್ನು ಕಂಡುಹಿಡಿಯಲು ಪೋಲಿಸರು ಅನುಸರಿಸಬೇಕಾದ ವಿಧಾನ

ಗಳನ್ನು ವಿವರಿಸಬೇಕೆನ್ನುವ ಆಶೆಯಿಂದ ಈ ಕೃತಿಯನ್ನು ರಚಿಸಲಾಯಿತೆಂದು ಲೇಖಕರೇ ಹೇಳಿಕೊಂಡಿದ್ದಾರೆ.

ಮರುವರ್ಷ ಅಂದರೆ ೧೮೯೮ರಲ್ಲಿ ಗಳಗನಾಥರ ಪ್ರಥಮ ಮತ್ತು ಸ್ವತಂತ್ರ ಕಾದಂಬರಿ 'ಪ್ರಬುದ್ಧ ಪದ್ಮನಯನೆ' ಬಂದದ್ದು. ಗಳಗನಾಥರು ತಮ್ಮ ಕಾದಂಬರಿ ಕೃಷಿಯನ್ನು ಪ್ರಖ್ಯಾತ ಮರಾಠಿ ಕಾದಂಬರಿಕಾರರಾದ ಹರಿ ನಾರಾಯಣ ಆಪ್ಟೆ ಇವರ ಮರಾಠಿ ಕಾದಂಬರಿಗಳ ಅನುವಾದಗಳಿಂದ ಆರಂಭಿಸುವ ಮುನ್ನ, ಪ್ರಥಮದಲ್ಲಿ ಅದ್ಭುತರಮ್ಯವಾದ ಸ್ವತಂತ್ರ ಕೃತಿ ನಿರ್ಮಿಸಿದ್ದು ವಿಶೇಷ.

ಕನೋಜದ ವೀರವರ್ಮನ ಮಗಳಾದ ಪದ್ಮನಯನೆ ಯನ್ನು ಸಿಂಹಳದ ರಾಕ್ಷಸ ಅಪಹರಿಸುತ್ತಾನೆ. ಆಗ ಮಾಳವದ ಕಮಲಾಕ್ಷ ಅವಳನ್ನು ಪಾರುಮಾಡಿ ಗಾಂಧರ್ವ ವಿವಾಹ ವಾಗುತ್ತಾನೆ. ರಾಕ್ಷಸನ ತಮ್ಮನ ಮಾಯದಿಂದ ಇಬ್ಬರೂ ಬೇರೆಯಾಗಿ, ಕಮಲಾಕ್ಷ ಇನ್ನೊಂದು ಹೆಸರಿನಿಂದ ಕನೋಜಕ್ಕೆ ಬಂದು, ಮಂತ್ರಿಕುಮಾರಿ ಜೀವನಕಲೆಯನ್ನು ಮದುವೆ ಯಾಗುತ್ತಾನೆ. ಆಕೆ ಪದ್ಮನಯನೆಯ ಜೀವದ ಗೆಳತಿ. ಇಬ್ಬರೂ ಪದ್ಮನಯನೆಯನ್ನು ಹುಡುಕುತ್ತಿರುವಲ್ಲಿ, ಆಕೆ ಪಾಂಡ್ಯ ದೇಶದಲ್ಲಿ ವಾಸವಾಗಿದ್ದು ತಿಳಿದು, ಎಲ್ಲರೂ ಸೇರಿ ದಾಗ ಕಥೆ ಮುಗಿಯುತ್ತದೆ. ಈ ಸುಂದರ ಅದ್ಭುತರಮ್ಯ ಕಾದಂಬರಿಯು 'ವಾಗ್ಭೂಷಣ'ದಲ್ಲಿ ಧಾರಾವಾಹಿಯಾಗಿ

ಪ್ರಕಟವಾಗತೊಡಗಿದಾಗ, ಅನೇಕ ಓದುಗರನ್ನು ಮರಳು ಗೊಳಿಸಿತ್ತು.

ಅನಂತರ ೧೮೯೯ರಲ್ಲಿ ಗೂಳಪ್ಪ ಕೊಟ್ರಪ್ಪ ಅರಳಿ ಇವರ 'ಕನ್ನಡ ಶೌರ್ಯಸಾಗರ' ಕಾದಂಬರಿಯು ವಾಗ್ಭೂಷಣ ಗ್ರಂಥಮಾಲೆಯಿಂದ ಪ್ರಕಟವಾಯಿತು. ಧಾರವಾಡ ಜಿಲ್ಲೆಯ ಗಜೇಂದ್ರಗಡದವರಾದ, ಕನ್ನಡ ಶಾಲೆಯ ಶಿಕ್ಷಕ ಗೂಳಪ್ಪ ಅವರ ಈ ಕಾದಂಬರಿ ಕೂಡ ಅದ್ಭುತರಮ್ಯ ಕಥೆಯನ್ನೇ ಒಳಗೊಂಡಿದೆ.

ಕನ್ನಡ ಕಾದಂಬರಿ ಕ್ಷೇತ್ರದ ಎರಡು ಧ್ರುವಗಳು :

ಕಳೆದ ಶತಮಾನದ ಕೊನೆಯಿಂದ, ಈ ಶತಮಾನದ ಆದಿಯವರೆಗೆ ಬಿ. ವೆಂಕಟಾಚಾರ್ಯರು ಬಂಗಾಲಿ ಭಾಷೆ ಯಲ್ಲಿನ ರಮ್ಯ ಕಾದಂಬರಿಗಳನ್ನು, ಮುಖ್ಯವಾಗಿ ಬಂಕಿಮ ಚಂದ್ರರ ಕಾದಂಬರಿಗಳನ್ನು ಕನ್ನಡಕ್ಕೆ ತಂದಂತೆ, ಗಳಗನಾಥರು ಹರಿನಾರಾಯಣ ಆಪ್ಟೆ ಅವರ ಮರಾಠಿ ಐತಿಹಾಸಿಕ ಕಾದಂಬರಿ ಗಳನ್ನು ಕನ್ನಡದಲ್ಲಿ ಭಾಷಾಂತರಿಸಿದರು. ಈ ಅನುವಾದಿತ ಕಾದಂಬರಿಗಳ ಪ್ರಭಾವದಿಂದ ಕನ್ನಡದಲ್ಲಿ ಸ್ವತಂತ್ರ ಕೃತಿ ಗಳು ನಿರ್ಮಾಣವಾಗುವಂತೆ ಹದವಾದ ಭೂಮಿ ಸಿದ್ಧ ವಾಯಿತು. ವೆಂಕಟಾಚಾರ್ಯರು ಬಂಗಾಲಿ ಪ್ರಭಾವದಿಂದ ಸಂಸ್ಕೃತಮಯ ಕನ್ನಡ ಭಾಷೆಯನ್ನು ಬಳಸಿದರೆ, ಗಳಗನಾಥರು ಉತ್ತರ ಕರ್ನಾಟಕದಲ್ಲಿ ರೂಢವಾಗಿದ್ದ ಶೈಲಿಯನ್ನು ಪ್ರಯೋ-

ಗಿಸಿದರು. ಗಳಗನಾಥರ ಶೈಲಿಯ ಮೇಲೆ ಗಂಗಾಧರ ತುರುಮರಿ ಅವರ ಪ್ರಭಾವವು ಎದ್ದು ಕಾಣುತ್ತದೆ.

ಮೈಸೂರು ಸಂಸ್ಥಾನದಲ್ಲಿ ಮುನ್ಸೀಫರಾಗಿದ್ದ ಬಿ. ವೆಂಕಟಾಚಾರ್ಯರು ಬಂಗಾಲಿ ಸಾಹಿತ್ಯದ ಶ್ರೀಮಂತಿಕೆ ಯನ್ನರಿತು ಅದಕ್ಕೆ ಮನಸೋತು, ಪತ್ರ ಮುಖಾಂತರ ಈಶ್ವರಚಂದ್ರ ವಿದ್ಯಾಸಾಗರರ ಪರಿಚಯ ಮಾಡಿಕೊಂಡು ಅವರ ಸಲಹೆಯಂತೆ ಬಂಗಾಲಿ ಕಲಿತವರು. ಪ್ರಥಮದಲ್ಲಿ ವಿದ್ಯಾಸಾಗರರ ಕೃತಿಗಳನ್ನೇ ಕನ್ನಡಕ್ಕೆ ತಂದರು. ಆದರೆ ಬಂಕಿಮರ 'ದುರ್ಗೇಶ ನಂದಿನಿ' ೧೮೮೫ ರಲ್ಲಿ ಕನ್ನಡದಲ್ಲಿ ಪ್ರಕಟವಾಗಿದ್ದು, ಇದೇ ಪ್ರಖ್ಯಾತಿಯನ್ನು ಪಡೆಯಿತು. ಬಂಕಿಮಚಂದ್ರರು ಆಗ ಬಂಗಾಲಿ ಸಾಹಿತ್ಯಲೋಕದಲ್ಲಿ ಸೂರ್ಯ ನಷ್ಟು ಪ್ರಭಾವಿತರಾದವರು. ವೆಂಕಟಾಚಾರ್ಯರು ಬಂಕಿಮರ 'ದುರ್ಗೇಶ ನಂದಿನಿ' ಅಲ್ಲದೆ 'ದೇವಿ ಚೌಧುರಾಣಿ' 'ನವಾಬ ನಂದಿನಿ', 'ಆನಂದಮಠ', 'ವಿಷವೃಕ್ಷ' ಮುಂತಾದ ಪ್ರಖ್ಯಾತ ಕೃತಿಗಳನ್ನು ಕನ್ನಡಕ್ಕೆ ತಂದರಲ್ಲದೆ, ವಿದ್ಯಾಸಾಗರರ ಕೃತಿಗಳಂತೆ, ಯೋಗೀಂದ್ರನಾಥ ಬಸು, ನನಿಲಾಲ ವಂದ್ಯೋಪಾಧ್ಯಾಯರ (ಅಮೃತ ಪುಲಿನ) ಕೃತಿ ಗಳನ್ನೂ ಕೂಡ ಕನ್ನಡಕ್ಕೆ ತಂದಿದ್ದಾರೆ.

ಈ ಅನುವಾದಿತ ಕೃತಿಗಳ ನವೀನ ದೃಷ್ಟಿಯ ಕಥಾ ವಸ್ತು, ಅದ್ಭುತ ರಮ್ಯ ಸನ್ನಿವೇಶಗಳು, ಚಮತ್ಕಾರಿಕ ಪ್ರಸಂಗ

ಗಳು ತನುಮನವನ್ನು ಸೂರೆಗೊಂಡವು. ವೆಂಕಟಾಚಾರ್ಯರ ಅನುವಾದ ಕೂಡ ಸ್ವತಂತ್ರ ಕೃತಿಗಳಿನ್ನುವಷ್ಟು ಸತ್ತ್ವಪೂರ್ಣ ವಾಗಿದೆ.

' ಗಳಗನಾಥ ' ಎಂಬ ಕಾವ್ಯನಾಮ ಪಡೆದ ವೆಂಕಟೇಶ್ ತಿರಕೋ ಕುಲಕರ್ಣಿ ಅವರು ಗಳಗನಾಥ ಗ್ರಾಮದವರು. ಧಾರವಾಡ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದರು, ಸ್ವತಂತ್ರ ಪ್ರವೃತ್ತಿಯ ಗಳಗನಾಥರು ನೌಕರಿಗೆ ಶರಣು ಹೊಡೆದು ಹಾವೇರಿ ಹತ್ತಿರದ ಅಗಡಿಯಲ್ಲಿ 'ಸದ್ಬೋಧ ಚಂದ್ರಿಕೆ' ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿ, ಅದರ ಮೂಲಕ ತಮ್ಮ ಸ್ವತಂತ್ರ ಮತ್ತು ಅನುವಾದಿತ ಕಾದಂಬರಿಗಳನ್ನು ಧಾರಾವಾಹಿಯಾಗಿ ಪ್ರಕಟಿಸತೊಡಗಿದರು. ಇವರ ಧಾರಾವಾಹಿ ಕಾದಂಬರಿಗಳು ಆಗ ಕರ್ನಾಟಕದಲ್ಲಿ ಅದೆಷ್ಟು ಜನಪ್ರಿಯ ವಾಗಿದ್ದುವೆಂದರೆ, ಹೆಣ್ಣು ಮಕ್ಕಳು ಅಡುಗೆ ಮಾಡುವದನ್ನು ಬಿಟ್ಟು, ಆ ತಿಂಗಳ ' ಸದ್ಬೋಧ ಚಂದ್ರಿಕೆ ' ಗಾಗಿ ಅಂಚೆ ಯವನನ್ನು ಕಾಯುತ್ತಿದ್ದರಂತೆ.

ಪ್ರಥಮದಲ್ಲಿ ಸ್ವತಂತ್ರ ಕೃತಿ 'ಪ್ರಬುದ್ಧ ಪದ್ಮನಯನೆ' ರಚಿಸಿದ ನಂತರ ಗಳಗನಾಥರು, ಇನ್ನೂ ಹಲವು ಸ್ವತಂತ್ರ ಕೃತಿಗಳಾದ ' ಕುಮುದಿನಿ ', ' ಮಾಧವ ಕರುಣಾ ವಿಲಾಸ ', 'ಸತ್ತ್ವಸಾರ' ಮೊದಲಾದವುಗಳನ್ನು ಬರೆದರು. 'ಕುಮುದಿನಿ'ಯ ಕಥಾವಸ್ತು ವಿಜಯನಗರದ ಇತಿಹಾಸಕ್ಕೆ ಸಂಬಂಧಿಸಿದುದು. ಸಾಮ್ರಾಜ್ಯ ಅಳಿದುಹೋದ ಬಳಿಕ ಮತ್ತೆ, ಅದನ್ನು ಕಟ್ಟಲು

ಯತ್ನಿಸಿದ ಎಚ್ಚಮನಾಯಕ ಈ ಕಾದಂಬರಿಯ ಪ್ರಮುಖ ಪಾತ್ರ. ಹಕ್ಕಬುಕ್ಕರು ವಿಜಯನಗರ ಸಾಮ್ರಾಜ್ಯವನ್ನು ಕಟ್ಟಿದ ಕಥೆ 'ಮಾಧವ ಕರುಣಾ ವಿಲಾಸ'ದ್ದು. 'ಸತ್ತ್ವಸಾರ' ರಾಣಾ ಪ್ರತಾಪನ ಜೀವನಕ್ಕೆ ಸಂಬಂಧಿಸಿದ ರಜಪೂತರ ಐತಿಹಾಸಿಕ ಕಾದಂಬರಿ. ಇನ್ನೊಂದು 'ದುರ್ಗದ ಬಿಚ್ಚುಗತ್ತಿ'. ಇದು ಚಿತ್ರದುರ್ಗ ನಾಯಕರ ಮನೆತನಕ್ಕೆ ಸಂಬಂಧಿಸಿದ ಐತಿಹಾಸಿಕ ಕೃತಿಯಾಗಿದೆ. 'ಭಗವತಿ ಕಾತ್ಯಾಯಿನಿ' ಎಂಬುದು ಗಳಗನಾಥರ ಸ್ವತಂತ್ರ ಪೌರಾಣಿಕ ಕಾದಂಬರಿ.

'ಈಶ್ವರೀ ಸೂತ್ರ' 'ಕನ್ನಡಿಗರ ಕರ್ಮಕಥೆ' 'ಕಮಲ ಕುಮಾರಿ' 'ಕ್ಷಾತ್ರತೇಜ' ಮೊದಲಾದ ಹರಿ ನಾರಾಯಣ ಆಪ್ಟೆ ಅವರ ಮರಾಠಿ ಕಾದಂಬರಿಗಳನ್ನು ಕನ್ನಡಕ್ಕೆ ತಂದವರು ಗಳಗನಾಥರು. ಆದರೆ ಇವರು ವೆಂಕಟಾಚಾರ್ಯರ ಬಂಗಾಲಿ ಅನುವಾದದಂತೆ ಯಥಾವತ್ತಾಗಿ ಮರಾಠಿ ಕೃತಿಗಳನ್ನು ಕನ್ನಡಕ್ಕೆ ತರದೆ ಕೆಲವು ಕಾದಂಬರಿಗಳನ್ನು ಸಂಕ್ಷೇಪಿಸಿದ್ದಲ್ಲದೆ, ಹಲವು ಪಾತ್ರಗಳಲ್ಲಿಯೂ ವ್ಯತ್ಯಾಸ ಮಾಡಿದ್ದಾರೆ. ತಾವು ಮೆಚ್ಚಿಕೊಂಡ ತಾತ್ತ್ವಿಕ ಅಭಿಪ್ರಾಯಗಳನ್ನು ಒತ್ತಾಯದಿಂದ ತುರುಕಿದಂತೆ ಮಾಡಿದ್ದಾರೆ. ಗಳಗನಾಥರ ಗ್ರಂಥಗಳಲ್ಲಿ ಕೆಲವೆಡೆ ಜೀವನ ವಿಮರ್ಶೆ ಕಡ್ಡಾಯವಾಗಿ ಬರುತ್ತಿದ್ದುದು, ಕಾದಂಬರಿಯ ಮೂಲ ಉದ್ದೇಶಕ್ಕೆ ಒಂದಿಷ್ಟು ಭಂಗ ವಾದಂತಾಗಿದೆ. ಇವೆಲ್ಲ ಅಗಣ್ಯ. ಆದರೆ ಗಳಗನಾಥರ ಗಂಡು ರಸಭರಿತ ವೀರಶೈಲಿ, ಎಂಥ ಹೇಡಿಗಳನ್ನು ಕೂಡ ಬಡಿದೆಬ್ಬಿಸು

ವಂತಹುದು. ರಾಜಪುತ್ರರ, ಮರಾಟರ, ಕನ್ನಡಿಗರ ದೇಶಾಭಿಮಾನ, ಸ್ವಾಭಿಮಾನ, ಸಾಹಸ, ಉತ್ಸಾಹ, ಸಾಮರ್ಥ್ಯ ಇವುಗಳ ವಿಚಾರವನ್ನು ಓದುತ್ತಿದ್ದಂತೆ ಮೈಯಲ್ಲಿ ವಿದ್ಯುತ್ ಸಂಚಾರವಾದಂತಾಗುವುದು. ಅಂಥ ವೀರವತ್ತಾದ ವರ್ಣನೆ ಗಳಗನಾಥರದು.

ಬಿ. ವೆಂಕಟಾಚಾರ್ಯ ಮತ್ತು ಗಳಗನಾಥ ಈ ಇಬ್ಬರೂ ಕಾದಂಬರಿಕಾರರು ಕನ್ನಡಕ್ಕೆ ಸಲ್ಲಿಸಿದ ಮಹೋಪಕಾರವೆಂದರೆ, ವಿಶೇಷವಾಗಿ ವೆಂಕಟಾಚಾರ್ಯರು ಮೈಸೂರು ಸಂಸ್ಥಾನ ಪ್ರದೇಶದಲ್ಲಿ, ಗಳಗನಾಥರು ಉತ್ತರ ಕರ್ನಾಟಕದಲ್ಲಿ ಜನತೆಯು ಓದುವ ಅಭಿರುಚಿಯನ್ನು ಹುಟ್ಟಿಸಿದ್ದು. ಈ ಬಗೆಯ ಕಾದಂಬರಿಗಳು ಹುಟ್ಟದೆ ಇದ್ದಿದ್ದರೆ, ಸಾಮಾನ್ಯ ಜನತೆಯ ಸಾಹಿತ್ಯದಲ್ಲಿನ ಆಸ್ಥೆ ಇನ್ನೂ ಕೆಲದಿನ ಮುಂದೆ ಹೋಗಬೇಕಾಗುತ್ತಿತ್ತು. ಸಾಹಿತ್ಯವೆಂದರೆ ಇನ್ನೂ ಪಂಡಿತರ ಸೊತ್ತಾಗಿದ್ದ ಕಾಲವದು. ಈ ಇಬ್ಬರ ಕಾದಂಬರಿಗಳು ಸಾಹಿತ್ಯ ಮತ್ತು ಜನಸಾಮಾನ್ಯರ ನಡುವೆ ಸೇತುವೆಯಾಗಿ ನಿಂತವು. ಇದಲ್ಲದೆ ಜನತೆಯಲ್ಲಿ ಅಪ್ರತ್ಯಕ್ಷವಾಗಿ ರಾಷ್ಟ್ರೀಯ ಜಾಗ್ರತೆ ಮೂಡುವಂತೆ ದೇಶಾಭಿಮಾನ, ಧರ್ಮಾಭಿಮಾನ ಬೆಳೆಯುವಂತೆ ಪರಿಣಾಮ ಮೂಡಿಸಿದವು. ಬಂಕಿಮಚಂದ್ರರ 'ಆನಂದಮಠ' ಕಾದಂಬರಿಯಲ್ಲಿನ 'ವಂದೇ ಮಾತರಂ' ಗೀತೆ ಸ್ವಾತಂತ್ರ್ಯಮಂತ್ರವನ್ನೇ ಊದಿತು.

ಈ ಐತಿಹಾಸಿಕ ಕಾದಂಬರಿಗಳ ಪ್ರಭಾವದಿಂದ ಅದೆಷ್ಟೋ ಲೇಖಕರು ಆ ಸಮಯ ಬೇರೆ ಐತಿಹಾಸಿಕವಲ್ಲದೆ, ಸಾಮಾಜಿಕ

ಕೃತಿ ನಿರ್ಮಾಣಕ್ಕೆ ತೊಡಗಿದರು. ಓದುವ ಅಭಿರುಚಿಯನ್ನು ಬೆಳೆಸಿದಂತೆ ಬರೆಯಲು ಕೆಲವರಲ್ಲಿ ಸ್ಫೂರ್ತಿಯನ್ನೂ ಈ ಕಾದಂಬರಿಗಳು ಇತ್ತವು.

ಆದ್ಯ ಸಾಮಾಜಿಕ ಕೃತಿ :

ಗಳಗನಾಥರ ಪ್ರಥಮ ಕಾದಂಬರಿ ' ಪ್ರಬುದ್ಧ ಪದ್ಮನಯನೆ ' ೧೮೯೮ ರಲ್ಲಿ ಪ್ರಕಟವಾದ ಮರುವರ್ಷವೇ ೧೮೯೯ ರಲ್ಲಿ ಗುಳವಾಡಿ ವೆಂಕಟರಾಯರ ಕಾದಂಬರಿ 'ಇಂದಿರಾಬಾಯಿ' ಪ್ರಕಟವಾದದ್ದು ವಿಶೇಷ. ಇದೇ ಕನ್ನಡದ ಪ್ರಥಮ ಸ್ವತಂತ್ರ ಸಾಮಾಜಿಕ ಕೃತಿಯಾಗಿ ವಿಶೇಷ ಗೌರವಕ್ಕೆ ಪಾತ್ರವಾಗಿದೆ. ರೆಂಟಾಲ ವೆಂಕಟಸುಬ್ಬರಾಯರ ಕಾದಂಬರಿ 'ಕೇಸರಿ ವಿಲಾಸ ' ೧೮೯೫ ರಲ್ಲಿ ಬಂದರೂ, ಅದು ಸಂಪೂರ್ಣ ಸಾಮಾಜಿಕ ಕೃತಿಯೆಂದು ಕರೆಯಿಸಿಕೊಳ್ಳುವುದಿಲ್ಲ. ಆ ಕಾರಣಕ್ಕಾಗಿ ಪ್ರಥಮ ಸಾಮಾಜಿಕ ಕನ್ನಡ ಕಾದಂಬರಿಯೆಂದರೆ ಗುಳವಾಡಿ ಅವರ ' ಇಂದಿರಾಬಾಯಿ ' ಎಂದೇ ಗ್ರಹಿಸಬೇಕು.

ದ. ಕ. ಜಿಲ್ಲೆಯ ಕುಂದಾಪುರದ ಗುಳವಾಡಿ ವೆಂಕಟರಾಯರು ಬಿ. ಎ. ಪದವೀಧರರಾಗಿ ಪೋಲಿಸ ಖಾತೆಯಲ್ಲಿ ಇನ್‌ಸ್ಪೆಕ್ಟರ್ ಆಗಿದ್ದು, ನಿವೃತ್ತರಾದ ನಂತರ ಸಾಹಿತ್ಯ ರಚನೆಗೆ ಆರಂಭಿಸಿದವರು.'ಇಂದಿರಾಬಾಯಿ'ಅಥವಾ' ಸದ್ಧರ್ಮ ವಿಜಯ ' ಇವರ ಪ್ರಥಮ ಕಾದಂಬರಿ. ಹಳೆಯ-ಹೊಸತುಗಳ ನಡುವಿನ ತಿಕ್ಕಾಟ ಈ ಕಾದಂಬರಿಯಲ್ಲಿ ಚಿತ್ರಿತವಾಗಿದೆ.

ವೆಂಕಟರಾಯರ ಪೋಲಿಸ್ ಖಾತೆಯ ಅನುಭವ ಇಲ್ಲಿ ಸಾಹಿತ್ಯ ಸ್ವರೂಪದಲ್ಲಿ ಒಡಮೂಡಿದೆ. ಈ ಕಾದಂಬರಿಯ ವಸ್ತು ಅಂದು ನಡೆದ ಕೆಲ ಘಟನೆಗಳನ್ನು ಆಧರಿಸಿದ ವಾಸ್ತವ ಸಂಗತಿ ಎಂದು ಹೇಳುತ್ತಾರೆ. ಇಂದಿರೆಯ ತಂದೆತಾಯಿಗಳು ಸ್ವಾರ್ಥಿಗಳು. ತಮಗೆ ಆಗದವರನ್ನು ವಿಷ ಹಾಕಿ ಕೊಲ್ಲಿಸುವುದಕ್ಕೂ ಹಿಂಜರಿಯರು. ಓರ್ವ ದುರ್ವ್ಯಸನಿಯೊಡನೆ ಇಂದಿರೆಯ ಮದುವೆಯಾದದ್ದು, ಅನಂತರ ಆಕೆ ಬಾಲವಿಧವೆಯಾಗಿ ಅಮೃತರಾಯನ ಆಸರೆಯಲ್ಲಿ ನಿಲ್ಲುತ್ತಾಳೆ. ಆತನ ಪೋಷಣೆಯಲ್ಲಿ ಇನ್ನೊಬ್ಬ ಅನಾಥ ಭಾಸ್ಕರನೆಂಬವನು ವಿದ್ಯೆ ಕಲಿಯುತ್ತಿರುತ್ತಾನೆ. ಭಾಸ್ಕರ ಇಂದಿರೆಯ ಮರುಮದುವೆಯಾಗುತ್ತದೆ. ಇದರಿಂದ ಸದ್ಧರ್ಮ ವಿಜಯವಾಯಿತೆಂದು ಲೇಖಕರ ಆಶಯ. ಈ ಕೃತಿ ಆಧುನಿಕ ಸಮಾಜದ ಚಿತ್ರಣವಾದ್ದರಿಂದ ಒಂದು ವಾಸ್ತವಿಕ ಕಾದಂಬರಿಯಾಗಿ ಬಂದಿದೆ. ಪೂರ್ವಾರ್ಧದಲ್ಲಿ ಭೀಮರಾಯ–ಅಂಬಾಬಾಯಿ ಇವರ ದುರ್ಬಲವಾದ ಜೀವನ ಚಿತ್ರಣವಿದ್ದರೆ, ಉತ್ತರಾರ್ಧದಲ್ಲಿ ಇಂದಿರೆ-ಭಾಸ್ಕರರ ಹೊಸ ಆದರ್ಶದ ಬದುಕಿನ ಚಿತ್ರಣವಿದೆ. ವಿಧವಾವಿವಾಹ ಸಮಸ್ಯೆ ಆಗಿನ ಸಮಾಜದಲ್ಲಿ ಒಂದು ಕ್ರಾಂತಿಯೇ ಆಗಿತ್ತು.

ಈ ಕಾದಂಬರಿಯ ಗುಣವನ್ನು ಮೆಚ್ಚಿ, ಆಗ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಯಾಗಿದ್ದ ಕೌ ಚ್ ಮ ನ್ ಎಂಬವನು ಇದನ್ನು ಇಂಗ್ಲೀಷಿಗೆ ಅನುವಾದಿಸಿದ್ದು ಹೆಮ್ಮೆಯ ಸಂಗತಿಯಾಗಿದೆ. ವೆಂಕಟರಾಯರು 'ಇಂದಿರಾಬಾಯಿ'

ಕಾದಂಬರಿಯನ್ನಲ್ಲದೆ 'ಭಾಗೀರಥಿ' ಮತ್ತು 'ಸೀಮಂತಿನೀ' ಎಂಬ ಇನ್ನೆರಡು ಕಾದಂಬರಿಗಳನ್ನೂ ಬರೆದಿದ್ದಾರೆ. ಇವರು 'ಮಿತ್ರೋದಯ' ಎಂಬ ಪತ್ರಿಕೆಯನ್ನೂ ಕೆಲಕಾಲ ನಡೆಸಿದರು.

ಪ್ರಾರಂಭದ ಇನ್ನಿತರ ಐತಿಹಾಸಿಕ ಕಾದಂಬರಿಕಾರರು :

ಬಿ. ವೆಂಕಟಾಚಾರ್ಯ ಮತ್ತು ಗಳಗನಾಥರ ಐತಿಹಾಸಿಕ ಕಾದಂಬರಿಗಳಿಂದ ಉಸ್ಫೂರ್ತರಾಗಿ ಇನ್ನೂ ಕೆಲವರು ಅದೇ ಸುಮಾರಿಗೆ ಐತಿಹಾಸಿಕ ಕೃತಿಗಳನ್ನು ನಿರ್ಮಿಸಿದರು. ಈ ಕಾದಂಬರಿಗಳ ಪ್ರವಾಹ ೨೦ನೆಯ ಶತಮಾನದ ಮೂರನೆಯ ದಶಕದ ವರೆಗೂ ಸಾಗಿಬಂತು. ಈ ಕಾದಂಬರಿಕಾರರಲ್ಲಿ ಮುದವೀಡು ಕೃಷ್ಣರಾಯರು, ಗದಿಗೆಯ್ಯ ಹೊನ್ನಾಪುರಮಠ, ಭೀ. ಪ. ಕಾಳೆ, ನಾಗೇಶ, ರಾಮಚಂದ್ರ ಕರ್ಪೂರ, ಬಿ. ಕೃಷ್ಣಪ್ಪ, ಡಿ. ಶ್ರೀನಿವಾಸ ಶರ್ಮ ಇವರು ಮುಖ್ಯರು.

ಕನ್ನಡ ನಾಡು ನುಡಿಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ ಮುದವೀಡು ಕೃಷ್ಣರಾಯರು 'ಕರ್ನಾಟಕ' ಎಂಬ ಗುಪ್ತನಾಮದಿಂದ 'ಚಿತ್ತೂರಿನ ಮುತ್ತಿಗೆ' ಎಂಬ ಐತಿಹಾಸಿಕ ಕಾದಂಬರಿಯನ್ನು ಬರೆದರು. ಗದಿಗೆಯ್ಯ ಹೊನ್ನಾಪುರಮಠ ಇವರು 'ಅದ್ಭುತ ಪ್ರೇಮ' ಎಂಬ ಅಕಬರನ ಕಾಲದ ವಸ್ತುವನ್ನು ಕುರಿತು ಒಂದು ಕಾದಂಬರಿ ರಚಿಸಿದ್ದಾರೆ.

ಭೀಕಾಜಿ ಪರಶುರಾಮ ಕಾಳೆ ಇವರು ಕೆಲವು ಐತಿಹಾಸಿಕ ಕಾದಂಬರಿಗಳನ್ನು ಮರಾಠಿಯಿಂದ ಕನ್ನಡಕ್ಕೆ

ಅನುವಾದಿಸಿದ್ದಾರಲ್ಲದೆ, ಸ್ವತಂತ್ರವಾಗಿಯೂ ಬರೆದಿದ್ದಾರೆ. ಪತ್ತೇದಾರಿ ಕಾದಂಬರಿಗಳನ್ನು ಕೂಡ ರಚಿಸಿದ್ದಾರೆ. ಬಹು ಸಂಖ್ಯೆಯಲ್ಲಿ ಪತ್ತೇದಾರಿ ಕಾದಂಬರಿಗಳನ್ನೇ ಬರೆದ ಕಾಳೆ ಅವರ ಕೃತಿಗಳ ಮೊತ್ತವೂ ಹೆಚ್ಚು. ಆದರೆ ಸತ್ತ್ವದಲ್ಲಿ ಗಳಗನಾಥರಂತೆ ಮೇಲೇರಲಿಲ್ಲ. ನಾಗೇಶ ಅವರು 'ಈಶ-ಸಂಕಲ್ಪ' ಮತ್ತು 'ಎಚ್ಚಮನಾಯಕ' ಎರಡು ಕಾದಂಬರಿಗಳನ್ನು ಕರ್ನಾಟಕದ ಇತಿಹಾಸದ ಮೇಲೆ ರಚಿಸಿದರು.

ರಾಮಚಂದ್ರ ತ್ರ್ಯಂಬಕ ಕರ್ಪೂರ ಅವರು ಗಳಗನಾಥರಿಂದ ಪ್ರಭಾವಿತರಾಗಿ, ಅಗಡಿಯಲ್ಲಿದ್ದುಕೊಂಡೇ ಮರಾಠರ ಇತಿಹಾಸಕ್ಕೆ ಸಂಬಂಧಿಸಿದಂತೆ 'ಚಿಮಣಾಜಿ ಅಪ್ಪಾ ಅಥವಾ ಕಲಿಯುಗದ ಪರಶುರಾಮ' 'ಮರಾಠರ ಅವನತಿ ಅಥವಾ ದೈವಲೀಲೆ' 'ರಾಜದಂಡ' ಇವೇ ಐತಿಹಾಸಿಕ ಕಾದಂಬರಿಗಳನ್ನು ಬರೆದಿದ್ದಾರೆ. ಬಿ. ಕೃಷ್ಣಪ್ಪ ಅವರ 'ರಾಯಚೂರು ವಿಜಯ' ಡಿ. ಶ್ರೀನಿವಾಸ ಶರ್ಮರ 'ನೀಲವಸನಾ ಸುಂದರಿ' ಇವು ಕೂಡ ಮುಖ್ಯವಾದವುಗಳು.

ಕೆಲವು ಪತ್ತೇದಾರಿ ಕಾದಂಬರಿಗಳು :

ಇದೇ ಸಮಯ ಕೆಲವು ಪತ್ತೇದಾರಿ ಕಾದಂಬರಿಗಳನ್ನು ಭೀ. ಪ. ಕಾಳೆ, ನಾಗೇಶ ಮತ್ತಿತರರು ಬರೆದರು. 'ಇಂದು-ಮುಖಿ' 'ಭಗವಾನ ದಾಸ' 'ಫಿರಂಗಿಯ ಪ್ರತಿಹಿಂಸೆ' 'ವಿಚಿತ್ರ ಜಟ' ಇವು ಕಾಳೆ ಅವರ ಪತ್ತೇದಾರಿ ಕೃತಿಗಳು.

ನರಹರಿ ಶರ್ಮಾ ಬಾಲಸರಸ್ವತಿಯವರು ಕೆಲವು ಬಂಗಾಲಿ ಪತ್ತೇದಾರಿಗಳನ್ನು ಕನ್ನಡಕ್ಕೆ ತಂದರು. ಪಾಂಚಕೋಡಿ ದೇ ಅವರ 'ಹತ್ಯಾಕಾರಿ' ಯನ್ನು 'ಕುಮುದಿನಿ' ಎಂದು ಅನುವಾದಿಸಿದರು. 'ಚಿತ್ರಗುಪ್ತನ ದಫ್ತರಗಳು' 'ಗುರುತು ಕಂಡ ಕಳ್ಳ' 'ನರಬಲಿ' ಇವು ಬಾಲಸರಸ್ವತಿ ಅವರ ಇತರ ಪತ್ತೇದಾರಿ ಕಾದಂಬರಿಗಳು. ಇವಲ್ಲದೆ ಇವರು 'ಕಂಠಾಭರಣ' 'ಕುಮಾರ ಕಂಠೀರವ' ಮುಂತಾದ ಸ್ವತಂತ್ರ ಕೃತಿಗಳನ್ನು ಕೂಡ ರಚಿಸಿದ್ದಾರೆ.

ಕನ್ನಡ ಸಾಮಾಜಿಕ ಕಾದಂಬರಿಗಳ ಬಾಲ್ಯ :

ಗುಳವಾಡಿ ವೆಂಕಟರಾಯರ 'ಇಂದಿರಾಬಾಯಿ' ಬಂದ ನಂತರ, ಸ್ವತಂತ್ರ ಸಾಮಾಜಿಕ ಕೃತಿಯೆಂದರೆ ಮೈಸೂರಿನ ಜಿ. ರಾಘವೇಂದ್ರರಾವ್ ಅವರ 'ಸೀತೆ' ಯನ್ನು ಹೆಸರಿಸ ಬೇಕು. ಈ ಶತಮಾನದ ಆದ್ಯ ಕನ್ನಡ ಕಾದಂಬರಿಯೆಂದರೂ ಸಲ್ಲುವುದು. ೧೯೦೨ರಲ್ಲಿ ಪ್ರಕಟವಾದ ಈ ಕಾದಂಬರಿ ಕಲ್ಪಿತ ಕಥೆ ಹಾಗೂ ಒಂದು Original novel ಎಂದು ಅಭಿದಾನ ಪಡೆದಿದೆ. ಇದೊಂದು ಕಿರುಕಾದಂಬರಿ. ಅನಂತರ ಬಂದ ಮಹತ್ವದ ಕೃತಿಯೆಂದರೆ ಬೋಳಾರ ಬಾಬುರಾಯರ 'ವಾಗ್ದೇವಿ'. ಇದು ೧೯೦೫ರಲ್ಲಿ ಪ್ರಕಟವಾಯಿತು. ದಕ್ಷಿಣ ಕನ್ನಡ ಜಿಲ್ಲೆಯ ತಹಶೀಲದಾರ ಮತ್ತು ಮಂಗಳೂರು ನಗರ ಮ್ಯಾಜಿಸ್ಟ್ರೇಟ್‌ರಾಗಿ ಸೇವೆ ಸಲ್ಲಿಸಿದ ಬಾಬೂರಾಯರು ಕನ್ನಡ ದಲ್ಲಿ 'ಲಘು ಸಾಹಿತ್ಯ' ರಚನೆಯಾಗಿಲ್ಲವೆಂದು ಈ ಕಾದಂಬರಿ

ಯನ್ನು ಬರೆದರು. ಕಾದಂಬರಿಯ ಭಾಷೆ, ಶೈಲಿ ಅಂದಿನ ಸಂಪ್ರದಾಯಕ್ಕೆ ಸೇರಿದ್ದರೂ, ಬಾಬೂರಾಯರು ಕಥಾವಸ್ತುವಿನ ಆಯ್ಕೆಯಲ್ಲಿ ದಿಟ್ಟತನ ತೋರಿದ್ದಾರೆ. ಅಂದಿನ ಸಂಪ್ರದಾಯದ ಕಾಲದಲ್ಲಿ ಮಠಮಾನ್ಯರ ದೋಷಗಳನ್ನು ಎತ್ತಿ ತೋರಿಸಿರುವುದು ಒಂದು ಎದೆಗಾರಿಕೆ. ಗುಳವಾಡಿಯವರ 'ಇಂದಿರಾಬಾಯಿ' ಯಂತೆ 'ವಾಗ್ದೇವಿ' ಕೂಡ ಆಗಿನ ಕಾಲದ ಪ್ರಸಂಗವನ್ನಾಧರಿಸಿ ಕಟ್ಟಿದ ಕಥೆ ಎಂದು ಹೇಳುತ್ತಾರೆ. ೩೦೮ ಪುಟಗಳ ಈ ಕಾದಂಬರಿ ಮಾಧ್ವ ಮಠದ ಮಠಾಧಿಪತಿಯೊಬ್ಬರ ಅನಾಚಾರದ ಕಥೆಯಾಗಿದೆ. ಕುಮುದಪುರದ ಮಠಾಧೀಶರಾದ ಚಂಚಲನೇತ್ರ ಶ್ರೀಪಾದಂಗಳು ಕಾಳಿಕಾನದಿಯಲ್ಲಿ ಸ್ನಾನಮಾಡುತ್ತಲಿದ್ದ ಅಲೌಕಿಕ ಸುಂದರಿ ವಾಗ್ದೇವಿಯನ್ನು ಕಂಡು ಚಂಚಲಚಿತ್ತರಾಗಿ, ಅವರು ಆ ಗರತಿಯನ್ನು ವಶಪಡಿಸಿಕೊಳ್ಳುವದರಲ್ಲಿ ಮಠದ ಪಾವಿತ್ರ್ಯ ಹೇಗೆ ಕಲುಷಿತಗೊಂಡಿತೆಂದು ಬೋಳಾರರು ಚಿತ್ರಿಸಿದ್ದಾರೆ. ಅಂದಿನ ಸಮಾಜದಲ್ಲಿಯ ಲೋಪದೋಷಗಳನ್ನು ಎತ್ತಿ ತೋರಿಸಿದ ಸಾಹಸಕ್ಕೆ ಕಾದಂಬರಿಕಾರರ ಧೈರ್ಯವನ್ನು ಮೆಚ್ಚಬೇಕು.

ಮುಂಬಯಿಯಲ್ಲಿ ನೆಲೆಸಿದ್ದ ಮಂಗಳೂರಿನ ವಕೀಲರಾದ ಅಣ್ಣಾಜಿರಾವ್ ಗುಳವಾಡಿ ಇವರ ಸಾಮಾಜಿಕ ಕಾದಂಬರಿ 'ರೋಹಿಣಿ' ಇಲ್ಲವೆ 'ಸಾರಸ್ವತ ಮಂಡಳ' ೧೯೦೬ ರಲ್ಲಿ ಬಂದಿತು. ೨೩೨ ಪುಟಗಳ ಈ ಕಾದಂಬರಿಯಲ್ಲಿ ಕೂಡ ದಕ್ಷಿಣ ಕನ್ನಡದ ಮುಂಚಿನ ಕಾದಂಬರಿಗಳಾದ 'ಇಂದಿರಾಬಾಯಿ'

'ವಾಗ್ದೇವಿ' ಯಲ್ಲಿನ ಕೆಲ ಸಮಸ್ಯೆಗಳೇ ಇವೆ. ಈ ಲೇಖಕರು ಇಂಗ್ಲಿಷಿನಲ್ಲಿ ಹೆಚ್ಚಿನ ಕೃತಿಗಳನ್ನು ರಚಿಸಿದ್ದು ಒಂದು ವಿಶೇಷ.

ಕನ್ನಡದ ಊಲ್ಟರ್ ಸ್ಕಾಟ್ ಎಂದು ಕರೆಯಿಸಿಕೊಂಡು ಬಾಗಿಲುಕೋಟೆಯ ವಕೀಲರೂ, ಪತ್ರಿಕಾಕರ್ತರೂ ಆದ ಕೆರೂರ ವಾಸುದೇವಾಚಾರ್ಯರ ಪ್ರಥಮ ಸ್ವತಂತ್ರ ಸಾಮಾಜಿಕ ಕಾದಂಬರಿ 'ಇಂದಿರೆ' ೧೯೦೮ರಲ್ಲಿ ಪ್ರಕಟವಾಯಿತು. ಸ್ವತಂತ್ರ ಕಾದಂಬರಿಗಳಲ್ಲಿ ಇದೊಂದು ಗಮನಾರ್ಹವಾದ ಕೃತಿ. ಕನ್ನಡ ಭಾಷೆಯ ಬಗೆಗೆ ತುಂಬಾ ಅಭಿಮಾನವಿರಿಸಿದ ವಾಸುದೇವಾಚಾರ್ಯರು, "ಕನ್ನಡ ಭಾಷೆಯು ಅಪೂರ್ಣ ವಾಗಿರುವುದಲ್ಲದೆ ಅದರಲ್ಲಿ ಕರ್ಕಶತೆಯೂ ಇರುವುದರಿಂದ ಆ ಭಾಷೆಯು, ಎಂದಿಗೂ ಊರ್ಜಿತಾವಸ್ಥೆಗೆ ಬರಲರಿಯ ದೆಂದು ಪರಭಾಷೆಯವರೂ, ಕೆಲವು ಜನ ಕನ್ನಡಿಗರೂ ಎನ್ನುತ್ತಿರುವರು" ಎಂದು ನೊಂದುಕೊಂಡ ಆಚಾರ್ಯರು ತಮ್ಮ ಅನೇಕ ಕೃತಿಗಳಿಂದ ಕನ್ನಡ ನುಡಿಗೆ ಉಪಕಾರವನ್ನೇ ಮಾಡಿದ್ದಾರೆ. ಉತ್ತರ ಕರ್ನಾಟಕದ ಭಾಷೆಯನ್ನು ಕಾದಂಬರಿಯ ಗದ್ಯಕ್ಕೆ ಒಳ್ಳೆಯ ರೀತಿಯಿಂದ ಅಳವಡಿಸಿ ದ್ದಾರೆ. ಕರ್ನಾಟಕದಲ್ಲಿ ಸಾಮಾಜಿಕ ಸುಧಾರಣೆಯ ಬೆಳಗಿನ ಗಾಳಿ ತೀಡುತ್ತಿರುವ ಈ ಕಾಲದಲ್ಲಿ ವಾಸುದೇವಾಚಾರ್ಯರು ಪುನರ್ವಿವಾಹ, ಸ್ತ್ರೀ ಶಿಕ್ಷಣ, ಸ್ತ್ರೀ ಸ್ವಾತಂತ್ರ್ಯ ಇವೇ ವಸ್ತು ಗಳನ್ನಾಶ್ರಯಿಸಿ 'ಇಂದಿರೆ' ಕಾದಂಬರಿಯನ್ನು ರಚಿಸಿದ್ದಾರೆ. ಆಚಾರ್ಯರು ಬಾಗಿಲುಕೋಟೆಯವರಾದರೂ ಬೆಂಗಳೂರು-

ಮೈಸೂರುಗಳನ್ನು ಸಂದರ್ಶಿಸಿ ಸ್ಫೂರ್ತಿಗೊಂಡು, ಈ ಕಾದಂಬರಿಯ ಕ್ಷೇತ್ರಗಳನ್ನು ಬೆಂಗಳೂರು-ಶ್ರೀರಂಗಪಟ್ಟಣಗಳನ್ನೇ ಮಾಡಿದ್ದಾರೆ. ಇಲ್ಲಿನ ಸಾಂಪ್ರದಾಯಿಕ, ಮೋಹಕ ವರ್ಣನೆಗಳು ಕಾದಂಬರಿಯ ಸೌಂದರ್ಯವನ್ನು ಹೆಚ್ಚಿಸಿವೆ.

'ಇಂದಿರೆ' ಸಾಮಾಜಿಕ ಕಾದಂಬರಿಯನ್ನು ಬರೆದ ಮೇಲೆ ವಾಸುದೇವಾಚಾರ್ಯರು, ಮೈಸೂರ ರಾಜಮನೆತನದ ಮೂಲಪುರುಷರನ್ನು ಕುರಿತಾದ 'ಯದು ಮಹಾರಾಜ' ಐತಿಹಾಸಿಕ ಕಾದಂಬರಿಯನ್ನಲ್ಲದೆ, ಮೊಘಲ್ ರಾಜಮನೆತನಕ್ಕೆ ಸೇರಿದ 'ಭ್ರಾತೃಘಾತಕನಾದ ಔರಂಗಜೇಬ' ಕೂಡ ಬರೆದಿದ್ದಾರೆ. 'ವಾಲ್ಮೀಕಿ ವಿಜಯ' ಆಚಾರ್ಯರ ಪೌರಾಣಿಕ ಕಾದಂಬರಿಯಾಗಿದೆ.

ಇತರ ಕೆಲವು ಅನುವಾದಗಳು :

ಪ್ರಾರಂಭದಲ್ಲಿ ಬಂಗಾಲಿ ಮರಾಠಿಗಳಿಂದ ಕನ್ನಡದಲ್ಲಿ ಅನುವಾದವಾಗಿ ಕಾದಂಬರಿಗಳು ಬಂದಂತೆ ಇನ್ನಿತರ ಭಾಷೆಗಳಿಂದ ಅಷ್ಟು ಗಮನಾರ್ಹವಾಗಿ ಬರಲಿಲ್ಲ. ತೆಲುಗಿನಲ್ಲಿ ವೀರೇಶಲಿಂಗಂ ಪಂತುಲು ಅವರು ರಚಿಸಿದ ನೂತನ ರೀತಿಯ ಕಲ್ಪನಾಕಥೆಗಳಾದ 'ರಾಜಶೇಖರ ಚರಿತ್ರೆ' 'ಸತ್ಯವತೀ ಚರಿತ್ರೆ' 'ಸತ್ಯರಾಜಾ ಪೂರ್ವದೇಶದ ಯಾತ್ರೆಗಳು' ಎಂಬ ಮೂರು ಕೃತಿಗಳನ್ನು ತೆಲುಗಿನಲ್ಲಿಯೂ ಎಂ. ಎ. ಮಾಡಿದ್ದ ಬೆನಿಗಲ್ ರಾಮರಾಯರು ೧೮೯೯ ರ ಸಮಯ ಕನ್ನಡದಲ್ಲಿ

ಭಾಷಾಂತರಿಸಿದ್ದರು. ಜೀವಾಜಿ ಗೋರೆ ಇವರು ಡಾ. ಜಾನ್ಸನ್ ಅವರ ಇಂಗ್ಲಿಷ 'ರಾಸೆಲಾಸ್' ಕಾದಂಬರಿಯನ್ನು ೧೯೦೫ ರಲ್ಲಿ ಅನುವಾದಿಸಿದ್ದರು.

ಕಲ್ಲೋ ಗಣೇಶ ಬಿಜಾಪುರಕರ ಇವರು ಬಿ. ಕಲ್ಯಾಣಶರ್ಮ ಎಂಬ ಕಾವ್ಯನಾಮದಿಂದ 'ಮಾನವೀ ಆಶಾ' ಎಂಬ ಮರಾಠಿ ಕಥಾ ವಸ್ತುವನ್ನಾಧರಿಸಿ ಕನ್ನಡದಲ್ಲಿ 'ಈಶ ಸಂಕಲ್ಪ' ಎಂಬ ಹೆಸರಿನ ಕಾದಂಬರಿಯನ್ನು ರಚಿಸಿದರು. ಮಲ್ಲೇಶ್ವರದ ಆರ್. ಅಣ್ಣಾಜಿರಾವ್ ಎಂಬವರು ಹೇನ್ರಿ ಫಿಲ್ಡಿಂಗನ 'ಟಾಮ್ ಜೋನ್ಸ್' ಕಾದಂಬರಿಯನ್ನು ಕನ್ನಡಕ್ಕೆ ತಂದಿದ್ದರು.

ಫ್ರೆಂಚ್ ಕಾದಂಬರಿಕಾರ ಅಲೆಕ್ಸಾಂಡರ್ ಡ್ಯೂಮಾನ ಇಂಗ್ಲಿಷ ಅನುವಾದ 'The Count of Monte Christo' ಕಾದಂಬರಿಯನ್ನು 'ರಾಜಾ ಮಲಯಸಿಂಹ' ಎಂಬ ಹೆಸರಿನಿಂದ ಮೈಸೂರಿನ ಎಂ. ವಿ. ಶ್ರೀನಿವಾಸಾಚಾರ್ಯರು ಎರಡು ಭಾಗಗಳಲ್ಲಿ ಕನ್ನಡದಲ್ಲಿ ಪ್ರಕಟಿಸಿದರು. ಡ್ಯೂಮಾನ ಇದೇ ಕಾದಂಬರಿಯನ್ನು ಮಂಗಳೂರಿನ ಉಳ್ಳಾಲ ಮಂಗೇಶರಾಯರು ಭಾರತೀಯ ವಾತಾವರಣಕ್ಕೆ ರೂಪಾಂತರಿಸಿ 'ವಿಧಿಯ ವೈಚಿತ್ರ್ಯ' ಎಂಬ ಹೆಸರಿನಿಂದ ಬರೆದರು. ಅಲ್ಲದೇ ಇದೇ ಲೇಖಕರು ಮೇರಿ ಕೊರೆಲಿಯ 'ದಿ ಟ್ರೇಜರ್ ಆಫ್ ಹೇವನ್' ಎಂಬ ಕಾದಂಬರಿಯ ಆಧಾರದಿಂದ 'ನಿಷ್ಕಾಮ ಪ್ರೇಮ' ಎಂಬ ಕೃತಿಯನ್ನು ನಿರ್ಮಿಸಿದರು. ಭೀ. ಪ. ಕಾಳೆಯವರು

ಗೋಲ್ಡ ಸ್ಮಿತ್‌ನ 'ವಿಕಾರ ಆಫ್ ವೇಕ್‌ಫೀಲ್ಡ್' ಕಾದಂಬರಿಯ ಮರಾಠಿ ಅನುವಾದವನ್ನು ಕನ್ನಡದಲ್ಲಿ 'ನನ್ನ ಗೃಹಿಣಿ' ಎಂಬ ಹೆಸರಿನಿಂದ ಪ್ರಕಟಿಸಿವರು.

ವಾಸ್ತವಕ್ಕೆ ಹತ್ತಿರದವರು :

ಅನುವಾದಿತ ಕಾದಂಬರಿಗಳ ಜತೆ 'ಇಂದಿರಾಬಾಯಿ' 'ವಾಗ್ದೇವಿ' 'ರೋಹಿಣಿ' 'ಇಂದಿರೆ' ಇಂಥ ಸ್ವತಂತ್ರ ಕಾದಂಬರಿಗಳು ಕೂಡ ತಲೆದೋರುತ್ತಲಿದ್ದು, ಆದರ್ಶದ ಅತಿರೇಕತೆಯಿದ್ದರೂ ವಾಸ್ತವ ಬದುಕಿಗೆ ಹತ್ತಿರವಾಗುತ್ತ ಲಿದ್ದವು. ಇವುಗಳಲ್ಲಿ ಆಧುನಿಕತೆ ತಲೆಹಾಕಿತ್ತು. ವಾಸ್ತವಿಕತೆ ಯನ್ನೇ ಕಾದಂಬರಿಗೆ ಆಧಾರವಾಗಿಟ್ಟುಕೊಂಡು ಪ್ರಥಮದಲ್ಲಿ ಕೃತಿ ರಚಿಸಿದವರು ಎಂ. ಎಸ್. ಪುಟ್ಟಣ್ಣನವರು. ಮೈಸೂರು ಸೂರ್ಯನಾರಾಯಣಶಾಸ್ತ್ರಿ ಪುಟ್ಟಣ್ಣನವರು ಚನ್ನಪಟ್ಟಣದವರು. ಶಿಕ್ಷಕ, ನ್ಯಾಯಾಲಯದ ಭಾಷಾಂತರಕಾರ, ಕೊನೆಗೆ ಸರಕಾರಿ ಅಮಲ್ದಾರರಾಗಿದ್ದ ಪುಟ್ಟಣ್ಣನವರ ಮೊದಲ ಕಾದಂಬರಿ 'ಮಾಡಿದ್ದುಣ್ಣೋ ಮಹಾರಾಯ' ೧೯೧೫ ರಲ್ಲಿ ಪ್ರಕಟವಾಗಿ ವಾಸ್ತವ ಕಾದಂಬರಿಗಳಿಗೆ ನಾಂದಿಯಾಯಿತು.

ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ನಡೆದದ್ದೆಂದು ಹೇಳಲಾದ ಪಲವು ಸಂಗತಿಗಳ ಆಧಾರದಿಂದ ಈ ಕೃತಿ ರಚಿತ ವಾಗಿದೆ. ಕಾದಂಬರಿಯ ಹೆಸರೇ ಹೇಳುವಂತೆ ಕೆಟ್ಟದ್ದನ್ನು ಮಾಡಿದವರಿಗೆ ಕೆಟ್ಟದ್ದು, ಒಳ್ಳೆಯದನ್ನು ಮಾಡಿದವರಿಗೆ

ಒಳ್ಳೆಯದು ಆಗುತ್ತದೆಂಬ ನಂಬಿಕೆಯೇ ಈ ಕಥೆಯ ವಸ್ತು.

'ಸಿಡಿಲುಮರಿ' ಎಂದು ಹೆಸರು ಪಡೆದ ಪಂಡಿತ ಸದಾಶಿವ ದೀಕ್ಷಿತನು, ಮೊದಲ ಹೆಂಡತಿ ಮಗು ಮಹದೇವನನ್ನು ಕೊಟ್ಟು ತೀರಿಹೋದ ನಂತರ ಸಂಜವಾಡಿ ಜೋಯಿಸರ ಮಗಳು ತಿಮ್ಮಮ್ಮನನ್ನು ವಿವಾಹವಾಗಿ ಮಾವನ ಮಾತಿನಂತೆ, ಅಲ್ಲಿನ ಮನೆತನದ ಆಡಳಿತ ನೋಡಲು ಅಲ್ಲಿಯೇ ವಾಸಿಸಲು ಹೋಗುತ್ತಾನೆ. ತನ್ನ ಸದ್ಗುಣ ಸದಾಚಾರಗಳಿಂದ ಎಲ್ಲರ ಪ್ರೀತಿಗೆ ಪಾತ್ರನಾಗುವನು. ಅಲ್ಲಿಯ ನಾರಪ್ಪಯ್ಯ ಎಂಬವನ ಮಠದಲ್ಲಿ ಮಹದೇವನ ಶಿಕ್ಷಣ ಸಾಗುವದು. ಈ ನಾರಪ್ಪಯ್ಯ ಮಹಾಕ್ರೂರಿ. ವಿದ್ಯಾರ್ಥಿಗಳೆಲ್ಲ ಸೇರಿ ಈತನನ್ನು ಅಪಾಯಕ್ಕೀಡುಮಾಡಿದಾಗ, ಸದಾಶಿವ ತನ್ನ ಮನೆಗೆ ತಂದು ನಾರಪ್ಪಯ್ಯನನ್ನು ಉಪಚರಿಸುತ್ತಾನೆ. ಆಗ ಸದಾಶಿವನ ಮನೆಯೇ ಈ 'ಗುರು'ವಿಗೆ ಆಶ್ರಯ. ದೀಕ್ಷಿತ ಗುರುವಿಗೆ ಬುದ್ಧಿಮಾತು ಹೇಳಿದರೆ, ನಾರಪ್ಪಯ್ಯ ಸದಾಶಿವನ ಮೇಲೆಯೇ ದ್ವೇಷ ಬೆಳೆಸುತ್ತಾನೆ. ಮಹಾದೇವನ ವಿವಾಹವಾಗುತ್ತದೆ. ಮೈಸೂರು ಮಹಾರಾಜರು ಬಂದು ವಧು-ವರರಿಗೆ, ಸದಾಶಿವ ತಿಮ್ಮಮ್ಮರಿಗೆ ಕಾಣಿಕೆಯನ್ನೀಯುತ್ತಾರೆ. ತನ್ನ ಪೈಕಿ ಹೆಣ್ಣನ್ನು ಮಹಾದೇವನಿಗೆ ತರಲಿಲ್ಲವೆಂದು ತಿಮ್ಮಮ್ಮ ಸೊಸೆ ಸೀತೆಗೆ ವಿಪರೀತ ತೊಂದರೆ ಕೊಡುತ್ತಾಳೆ. ಸಂಜವಾಡಿಯ ಲಕ್ಷ್ಮೀದೇವಿಯ ಪೂಜಾರಿ ಅಪ್ಪಾಜಿ ಮಂತ್ರಮಾಟ ಮಾಡುವಂಥ ಕೇಡಿ. ಅಲ್ಲದೆ

ಕಳ್ಳರ ಗುಂಪಿನ ಬೆಂಬಲವೂ ಆತನಿಗೆ. ಆತನಿಗೆ ಸುಂದರಿಯಾದ ಸೀತಮ್ಮನ ಮೇಲೆ ಕಣ್ಣು. ಅಪ್ಪಾಜಿಗೆ ನಾರಪ್ಪಯ್ಯನಿಂದ ಪ್ರೋತ್ಸಾಹ ಬೇರೆ. ಅಪ್ಪಾಜಿ ಸೀತಮ್ಮಳನ್ನು ಬುದ್ಧಿಹೀನಳನ್ನಾಗಿ ಮಾಡಿ ನೆಲಹಿಡಿಯುವಂತೆ ಮಾಡುತ್ತಾನೆ. ಯಾವ ಔಷಧದಿಂದಲೂ ಈಕೆಗೆ ಗುಣವಾಗದು. ಸೀತಮ್ಮ ಸಾಯುತ್ತಾಳೆ. ಅಂತ್ಯಕ್ರಿಯೆ ನಡೆದುಹೋದ ಮೇಲೆ, ಅದೇ ದಾರಿಯಿಂದ ಬಂದ ಭಟಜಿ ಎಂಬ ಮಂತ್ರವಾದಿ, ಮಾಟದ ಪ್ರತಿಕ್ರಿಯೆಯಿಂದ ಆಕೆಯನ್ನು ಬದುಕಿಸುತ್ತಾನೆ. ಭಟಜಿ ಅಪ್ಪಾಜಿಯ ಮಂತ್ರಮಾಟ ಶೂನ್ಯವಾಗುವಂತೆ ಮಾಡಿ ಆತನ ಹಲ್ಲು ಉದುರಿಸುತ್ತಾನೆ. ಅಪ್ಪಾಜಿಯ ಕಳ್ಳರ ತಂಡ ಪೋಲಿಸರ ಕೈವಶವಾಗುತ್ತದೆ. ಕಳ್ಳತನದ ಮುದ್ದೆಮಾಲು ಸರಕಾರದ ಪಾಲಾಗುತ್ತದೆ.

ಆರು ದಶಕಗಳ ಹಿಂದೆ ಈ ಕಾದಂಬರಿ ರಚಿತವಾದರೂ ಪುಟ್ಟಣ್ಣನವರ ಪ್ರಾಮಾಣಿಕವಾದ ಕಥನ ಶೈಲಿಯು ಮರೆಯಲಾರದು. ಸರಳವಾದ ವರ್ಣನೆಗಳು, ಗಾದೆಮಾತುಗಳನ್ನು ಸೇರಿಸಿ ಬರೆದ ಸಂಭಾಷಣೆಗಳು, ಅಚ್ಚಗನ್ನಡ, ರೂಢಿಗನ್ನಡ ಪದಗಳ ಇವುಗಳ ಬಳಕೆಯಿಂದ ಕಾದಂಬರಿಯ ಸತ್ತ್ವ ಹೆಚ್ಚಿದೆ. ಪುಟ್ಟಣ್ಣನವರು ಆಗಿನ ಜನಜೀವನವನ್ನು ವಾಸ್ತವಿಕವಾಗಿ ನಿರೂಪಿಸುವಲ್ಲಿ ಯಶಸ್ಸು ಸಾಧಿಸಿದ್ದಾರೆ.

ಪುಟ್ಟಣ್ಣನವರ ಇನ್ನೊಂದು ಕಾದಂಬರಿ 'ಮುಸುಕು ತೆಗೆಯೇ ಮಾಯಾಂಗನೆ' ೧೯೨೮ ರಲ್ಲಿ ಪ್ರಕಟವಾಯಿತು. ಈ

ಕೃತಿ ಜನಜೀವನಕ್ಕೆ ಮತ್ತೂ ಹತ್ತಿರವಾಯಿತು. ಪುಟ್ಟಣ್ಣನವರ ಮತ್ತೊಂದು ಕೃತಿ 'ಅವರಿಲ್ಲದೂಟ' ಕೂಡ ಮುಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಕಾಲದ ಕಥೆ. ತಮ್ಮ ಮಧ್ಯ ವಯಸ್ಸಿನನಂತರ ಕೃತಿರಚನೆಗೆ ತೊಡಗಿದ ಪುಟ್ಟಣ್ಣನವರ ಈ ಕೃತಿಗಳು, ಮೈಸೂರು ಅರಸರನ್ನು ಕುರಿತಾದ ಕೃತಿಗಳಾಗದೆ ಆ ಕಾಲದ ಜನಜೀವನದ ಬಿಂಬಗಳಾಗಿವೆ.

ಬೋಳಾರ ಬಾಬುರಾಯರ 'ವಾಗ್ದೇವಿ', ಕೆರೂರು ವಾಸುದೇವಾಚಾರ್ಯರ 'ಇಂದಿರೆ', ಎಂ. ಎಸ್. ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯಾ' ಈ ಮೂರೂ ಸಾಮಾಜಿಕ ಕಾದಂಬರಿಗಳು ಕನ್ನಡ ಕಾದಂಬರಿಯ ದಾರಿಯಲ್ಲಿ ಮೈಲು ಗಲ್ಲಾಗಿ ಮುಂದಿನವರಿಗೆ ದಾರಿತೋರಿದರೂ ಕೂಡ, ಆ ಮೇಲೆ ಬಿರುಸಾಗಿ ಕಾದಂಬರಿಯ ಕೃಷಿ ಸಾಗಲಿಲ್ಲ. ಅನಂತರದ ಗಮನಾರ್ಹವಾದ ಕಾದಂಬರಿಯೆಂದರೆ ೧೯೨೪ ರಲ್ಲಿ ಹೊರ ಬಂದ ಪಂಜೆ ಮಂಗೇಶರಾಯರ 'ಕೋಟಿ ಚೆನ್ನಯ್ಯ'. ಕೋಟಿ ಚೆನ್ನಯ್ಯ ಬಂಧುದ್ವಯರ ಕಥಾವಸ್ತು ಐತಿಹಾಸಿಕವಾಗಿದೆ. ಇದು ಒಂದು ಸಾಹಸದ ಕಥೆ. ಇಲ್ಲಿ ಪಂಜೆಯವರು ವಾತಾವರಣ, ಸನ್ನಿವೇಶ, ಮಾತುಕಥೆಗಳಲ್ಲೆಲ್ಲ ಪ್ರಾದೇಶಿ ಕತೆಯನ್ನು ಒಪ್ಪವಾಗಿ ತಂದಿದ್ದಾರೆ.

ಧಾರವಾಡ ಜಿಲ್ಲೆಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿ ಸುತ್ತಿದ್ದ ಬಸವಾರ್ಯ ಬೂದಪ್ಪಯ್ಯ ಬೂದಿಹಾಳಮಠ ಅವರು ಕೆಲವು ಪೌರಾಣಿಕ-ಸಾಮಾಜಿಕ ಕಾದಂಬರಿಗಳನ್ನು ಈ ಶತ

ಮಾನದ ಎರಡನೆಯ ದಶಕದಲ್ಲಿ ರಚಿಸಿದರು. ಇವರ ಸಾಮಾಜಿಕ ಕಾದಂಬರಿಗಳಿಗೆ ಪ್ರಣಯವೇ ಮುಖ್ಯ ವಸ್ತುವಾಗಿದ್ದರೂ ಅಂದಿನ ಸಾಮಾಜಿಕ ರೀತಿ ನೀತಿ, ಶಿಕ್ಷಣ ಸುಧಾರಣೆ, ವಿಷಯಾಸಕ್ತಿ, ದಾಂಪತ್ಯ ಬದುಕಿನ ಸರಸ-ವಿರಸ ಮೊದಲಾದವುಗಳನ್ನು ಉತ್ತಮ ಶೈಲಿಯಲ್ಲಿ ಚಿತ್ರಿಸಿದ್ದಾರೆ.

ಇದೇ ಸಮಯದಲ್ಲಿ ನಂಜನಗೂಡಿನ ಶ್ರೀಮತಿ ತಿರುಮಲಾಂಬಾ ಅವರು ಸಾಮಾಜಿಕ ಕಾದಂಬರಿಗಳನ್ನು ಬರೆದು ಕನ್ನಡದ ಪ್ರಥಮ ಕಾದಂಬರಿಕಾರ್ತಿ ಎಂಬ ಮನ್ನಣೆಗೆ ಪಾತ್ರರಾದರು. ' ಸತಿ ಹಿತೈಷಿಣಿ ' ಗ್ರಂಥಮಾಲೆಯನ್ನು ಪ್ರಾರಂಭಿಸಿ ಅಖಿಲ ಕರ್ನಾಟಕದಲ್ಲಿ ಏಕಮೇವ ಗ್ರಂಥ ಪ್ರಕಾಶಿಕೆ ಆದರು. ಇವರ ಕಾದಂಬರಿಗಳಲ್ಲಿ ವಿಶೇಷವಾಗಿ ಸೂಚಿಸಿ ಹೇಳುವಂಥದೇನಿಲ್ಲ.

ಕಾದಂಬರಿಯ ನವೋದಯಕ್ಕೆ ನಾಂದಿ :

ಈ ಶತಮಾನದ ಮೂರನೆಯ ದಶಕದಿಂದ ಇಂದಿನ ಹಳೆಯ ತಲೆಮಾರಿನ ಕಾದಂಬರಿಕಾರರ ಕೃತಿಗಳು ನಿರ್ಮಿತವಾಗಿ, ಕನ್ನಡ ಕಾದಂಬರಿಗಳು ಒಂದು ಹೊಸ ವಿಸ್ತಾರವಾದ ಹೆದ್ದಾರಿಯನ್ನು ಹಿಡಿದವು. ಇದರ ಪೂರ್ವದಲ್ಲಿ ಕನ್ನಡದ ಇಂದಿನ ಸಮರ್ಥ ಕಾದಂಬರಿಕಾರರಾದ ಶಿವರಾಮ ಕಾರಂತರು ' ವಿಚಿತ್ರ ಕೂಟ ' ಎಂಬ ಪತ್ತೇದಾರಿ ಕಾದಂಬರಿಯಿಂದ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಕಾಲಿರಿಸಿದುದು ಒಂದು ವಿಶೇಷ

ಸಂಗತಿ. ಈ ಕಾದಂಬರಿ ಕೂಡ ಹಿಂದಿನ ಪತ್ತೇದಾರಿಗಳಿಗಿಂತ ವಿಶಿಷ್ಟವಾದುದು. ಅನಂತರ ಕಾರಂತರ 'ಭೂತ' (೧೯೨೪) 'ನಿರ್ಭಾಗ್ಯ ಜನ್ಮ' (೧೯೨೧) 'ದೇವದೂತರು' (೧೯೨೯) 'ಸೂಳೆಯ ಸಂಸಾರ' ಪ್ರಕಟವಾದವು. 'ದೇವದೂತರು' ಕನ್ನಡದಲ್ಲಿ ಒಂದು ವಿಶೇಷ ಕಾದಂಬರಿಯಾಗಿದೆ. ಇದು ವಿಡಂಬನಕ್ಕೆ ಮೀಸಲಾದ ಕೃತಿ. ಇನ್ನಿತರ ಬೇರೆ ಕಾದಂಬರಿಗಳಲ್ಲಿ ಇದರಷ್ಟು ಹಾಸ್ಯವನ್ನು ಕಾರಂತರು ಸಮರ್ಥರೀತಿಯಿಂದ ಸಂಪೂರ್ಣವಾಗಿ ಬಳಸಿಲ್ಲ. ವಿಪರೀತವಾಗಿ ಪುರಾಣವನ್ನು ಪರಲೋಕವನ್ನು ಕಲ್ಪಿಸಿ, ಅದರ ಮೂಲಕ ಸಮಕಾಲೀನ ಅವ್ಯವಹಾರಗಳನ್ನು ಇಲ್ಲಿ ಟೀಕಿಸಿದ್ದಾರೆ.

೧೯೩೭ರಲ್ಲಿ ದೇವುಡು ಅವರ 'ಅಂತರಂಗ' ಒಳಮನಸ್ಸಿನ ತುಯ್ದಾಟವನ್ನು ಮಾರ್ಮಿಕವಾಗಿ ಬಣ್ಣಿಸಿದ ಹೊಸರೀತಿಯ ಕಾದಂಬರಿಯಾಗಿ ಬಂದಿತು. ಇಲ್ಲಿ ದೇವುಡು ಪ್ರಜ್ಞಾ ಪ್ರವಾಹದ ತಂತ್ರವನ್ನು ಬಳಸಿಕೊಂಡು ದಾಂಪತ್ಯ ಸಮಸ್ಯೆಯನ್ನು ಎಳೆಎಳೆಯಾಗಿ ಬಿಡಿಸಿದ್ದಾರೆ. ಕಾದಂಬರಿಕಾರರ ಕುಶಲವೃಷ್ಟಿ ಇಲ್ಲಿ ಎದ್ದು ಕಾಣುವಂತಿದೆ.

೧೯೩೩ರಲ್ಲಿ ಬೆಟಗೇರಿ ಕೃಷ್ಣಶರ್ಮರ 'ಸುದರ್ಶನ' ಮತ್ತು ಶಿವರಾಮ ಕಾರಂತರ 'ಚೋಮನದುಡಿ' ಪ್ರಕಟವಾದವು. 'ಸುದರ್ಶನ' ಕಾದಂಬರಿಯ ನಾಯಕ ಆದರ್ಶ ವ್ಯಕ್ತಿಯಾಗಿ ಜನಸೇವೆಯಲ್ಲಿ ಮುಕ್ತಿಯನ್ನು ಕಾಣುತ್ತಾನೆ. 'ಚೋಮನದುಡಿ' ಇದು ದಲಿತ ವರ್ಗದವರ ಕರುಣಾ

ಮಯ ಬದುಕನ್ನು ಸತ್ಯನಿಷ್ಠವಾಗಿ ಎತ್ತಿತೋರಿಸುವ ಹೊಸ ಗನ್ನಡದ ದಿಟ್ಟ ಕೃತಿಯಾಗಿ ಬಂದಿತು. ಹೊಲೆಯರ ಜಾತಿ ಯಲ್ಲಿ ಹುಟ್ಟಿದ ಚೋಮನ ಅನೇಕ ದುಃಖ ಪರಂಪರೆಯ ಹೃದಯವಿದ್ರಾವಕ ಜೀವನ ಚಿತ್ರಣ ಇದರಲ್ಲಿದೆ.

ಮರುವರ್ಷದಲ್ಲಿ ರಂ. ಶ್ರೀ. ಮುಗಳಿ ಅವರ 'ಬಾಳುರಿ' ಅನಕೃ ಅವರ ಮೊದಲ ಹೆಜ್ಜೆಗಳಾದ 'ಉದಯರಾಗ' ಮತ್ತು 'ಜೀವನ ಯಾತ್ರೆ' ಶ್ರೀರಂಗರ 'ವಿಶ್ವಾಮಿತ್ರನ ಸೃಷ್ಟಿ' ಸೃಷ್ಟಿಯಾದವು. 'ಬಾಳುರಿ' ಯಲ್ಲಿ ಸುಶಿಕ್ಷಿತರ ನಿರುದ್ಯೋಗದ ಸಮಸ್ಯೆಯಿದೆ. ನಿರುದ್ಯೋಗವೇ ಇಲ್ಲಿ ಬಾಳಿನ ಗುರಿಯಾಗಿದ್ದು ಕಥಾ ನಾಯಕನದು ಹೋರಾಟದ ಬದುಕು. ಆತ ತನ್ನ ಆದರ್ಶವನ್ನು ಕೊನೆಗೂ ತೊರೆಯುವುದಿಲ್ಲ.

ಕನ್ನಡದಲ್ಲಿ ತಮ್ಮದೇ ವಿಶಿಷ್ಟ ದಾರಿ ತುಳಿದ ಅ. ನ. ಕೃಷ್ಣರಾಯರು ವಾಸ್ತವ ಮಾರ್ಗದ ಪ್ರಜ್ಞೆವುಳ್ಳವರಾಗಿ ವೈವಿಧ್ಯಮಯ ಬದುಕಿನಲ್ಲಿಯ ವಿವಿಧ ಮುಖಗಳನ್ನು ಅರ ಸುತ್ತ ಕಾದಂಬರಿಯ ನಿರ್ಮಿತಿಗೆ ತೊಡಗಿದರು. ಪ್ರಥಮ ಕಾದಂಬರಿ 'ಉದಯರಾಗ' ವು ಚಹದಂಗಡಿಯ ಮಾಣಿ-ಯೊಬ್ಬನ ಚಿತ್ರಕಾರನಾಗುವ ಹೆಬ್ಬಯಕೆ, ಅದಮ್ಯ ಸಾಹಸ ವನ್ನು ವಿದಿತಪಡಿಸುತ್ತದೆ. ಪತಿತನಾಗಿ ಕೆಲಕಾಲ ಬಾಳಿದರೂ, ಕೊನೆಗೆ ಹೇಗೆ ಪಶ್ಚಾತ್ತಾಪದಿಂದ ಪುನೀತನಾದನೆಂಬುದು ಇಲ್ಲಿನ ಪ್ರಧಾನ ವಸ್ತು. 'ಜೀವನಯಾತ್ರೆ' ಯಲ್ಲಿ ದಾಂಪತ್ಯ ಜೀವನ ಮತ್ತು ವೇಶ್ಯಾ ಜೀವನದ ದಿಟ್ಟ ನಿರೂಪಣೆಯಿದೆ.

ಸೇರದ ಪತಿಯೊಡನೆ ಬದುಕುವದಕ್ಕಿಂತ ಪ್ರೀತಿಸಿದ ಪರ-ಪುರುಷನ ಜತೆ ಹೆಂಡತಿಯಂತೆ ಇರುವುದೇ ಮೇಲಾದ ದಾಂಪತ್ಯಯೋಗ ಎನ್ನುವಂತೆ, ಅನೀತಿಯ ಪ್ರೀತಿಯನ್ನು ಮೇಲಕ್ಕೆ ಎತ್ತರಿಸುವ ಸಾಹಸವಾಗಿದೆ.

'ವಿಶ್ವಾಮಿತ್ರನ ಸೃಷ್ಟಿ' ಶ್ರೀರಂಗರ ಪ್ರಥಮ ಕಾದಂಬರಿಯೊದರೂ ಕನ್ನಡಕ್ಕೆ ಒಂದು ಹೊಸಕಾಣಿಕೆಯಾಗಿ ಬಂದಿತು. ಇದನ್ನು ವಿಡಂಬನಾತ್ಮಕ ಕಾದಂಬರಿ ಎಂದೂ ಕರೆಯಬಹುದು. ಇದು ಪ್ರಜ್ಞಾ ಪ್ರವಾಹದ ತಂತ್ರದಿಂದೊಡಗೂಡಿದ ವಿನೂತನ ಕೃತಿಯಾಗಿದೆ. ಮನೋವಿಶ್ಲೇಷಣೆಯ ಪ್ರಯೋಗವನ್ನು ಮೊದಲಿಗೆ ಕಾದಂಬರಿಯಲ್ಲಿ ಒಡಮೂಡಿಸಿದವರು ಆದ್ಯರೇ (ಶ್ರೀರಂಗ) ಆದ್ಯರು. ತನಗೆ ಒಪ್ಪದ ಮದುವೆಯನ್ನು ಬಿಟ್ಟು ಓಡಿಹೋದ ಓರ್ವ ತರುಣನ ಅನುಭವ ಪರಂಪರೆಯ ಚಿತ್ರಣ ಈ ಕಾದಂಬರಿಯಲ್ಲಿದೆ. ಇಲ್ಲಿನ ವರ್ಣನೆಗಳು ಅಪೂರ್ವವಾಗಿವೆ. ಇಲ್ಲಿ ಸಮಾಜದ ವಿಡಂಬನೆಯನ್ನು, ಜನ ಸಾಮಾನ್ಯರ ಚಿತ್ರಣವನ್ನು ಶ್ರೀರಂಗರ ಚುಚ್ಚು ಹಾಸ್ಯವನ್ನು ಮೆಚ್ಚಬೇಕು.

ಮೇಲಿನ ಕಾದಂಬರಿಗಳ ಬೆನ್ನಿಗೆ ವಿ. ಕೃ. ಗೋಕಾಕರ 'ಇಜ್ಜೋಡು', ಅನಕೃ ಅವರ 'ಸಂಧ್ಯಾರಾಗ', ಜಿ. ಬಿ. ಜೋಶಿ ಅವರ 'ಧರ್ಮಸೆರೆ' ಪ್ರಕಟವಾದವು. ಇದರಂತೆ ಬೆಟಗೇರಿ ಕೃಷ್ಣಶರ್ಮರ ಐತಿಹಾಸಿಕ ಕಾದಂಬರಿಗಳಾದ 'ರಾಜಯೋಗಿ' 'ಅಶಾಂತಿಪರ್ವ' ಕೂಡ ಪ್ರಕಟವಾದವು.

ಕೇಶವ-ಪದ್ಮಾವತಿಯರ ' ಇಜ್ಜೋಡು ' ಎರಡು ಮನೆತನಗಳಲ್ಲಿ ವಿಷಮತೆಯನ್ನು ಬೆಳೆಸಿ ವಿರಸ ಮರಣವನ್ನು ತೋರಿಸುವಂತಹುದಾಗಿದೆ. ' ಸಂಧ್ಯಾರಾಗ ' ಕಾದಂಬರಿ ಅನಕೃ ಅವರ ಪ್ರಾತಿನಿಧಿಕ ಕಾದಂಬರಿ ಎಂದು ಹೇಳಬಹುದು. ' ಉದಯರಾಗ ' ವು ಚಿತ್ರಕಲಾವಿದನ ಬದುಕಾಗಿದ್ದರೆ ' ಸಂಧ್ಯಾರಾಗ ' ಸಂಗೀತಗಾರನ ಜೀವನವಾಗಿದೆ. ಕಥಾನಾಯಕ ಲಕ್ಷ್ಮಣನ ಸಂಗೀತ ಜೀವನದ ಜತೆಯಲ್ಲಿ, ಅವನ ಸುತ್ತಲಿನ ಬದುಕಿನ ಪ್ರತಿಕ್ರಿಯೆಗಳನ್ನು ಚಿತ್ರಿಸುವುದು ಈ ಕಾದಂಬರಿಯ ಉದ್ದೇಶವಾಗಿದೆ. ಅನಕೃ ಅವರ ಲಲಿತ ಶೈಲಿ, ಹಿತಮಿತ ವರ್ಣನೆ, ಕಥೆ ಸಾಗುವ ನೇರಮಾರ್ಗ, ಚತುರ ಸಂಭಾಷಣೆ ಈ ಕೃತಿಯನ್ನು ಒಂದು ಪರಿಪೂರ್ಣ ಕಾದಂಬರಿಯನ್ನಾಗಿ ಮಾಡಿವೆ. ಈ ಕೃತಿಯಿಂದಲೇ ಅನಕೃ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಭದ್ರಪಟ್ಟವನ್ನು ಹಿಡಿದುಕೊಂಡರು.

' ರಾಜಯೋಗಿ ' ' ಅಶಾಂತಿ ಪರ್ವ ' ಕಾದಂಬರಿಗಳು ವಿಜಯನಗರದ ಕಾಲದ ರಾಜಕೀಯ, ಸಾಮಾಜಿಕ ಬದುಕನ್ನು ಪ್ರಾಮಾಣಿಕವಾಗಿ ಚಿತ್ರಿಸುತ್ತಿವೆ. ಬೆಟಗೇರಿ ಅವರದು ಬೆಡಗಿನ ಶೈಲಿ. ವಿಜಯನಗರದ ಕಾಲದ ವೈಭವವನ್ನು ಸಾಹಸಮಯ ಜೀವನವನ್ನು ಯಥಾವತ್ತಾಗಿ ಕಾಣಬಹುದು. ಬೆಟಗೇರಿ ಯವರ ಇತಿಹಾಸ ಪ್ರಜ್ಞೆಯನ್ನು ಮೆಚ್ಚಬೇಕು.

ಕಾನೂರು ಸುಬ್ಬಮ್ಮ ಹೆಗ್ಗಡಿತಿ :

೧೯೩೬ ರಲ್ಲಿ ಪ್ರಕಟವಾದ ಕೆ. ವಿ. ಪುಟ್ಟಪ್ಪನವರ ಬೃಹತ್ ಕಾದಂಬರಿ ' ಕಾನೂರು ಸುಬ್ಬಮ್ಮ ಹೆಗ್ಗಡಿತಿ ' ಕನ್ನಡ

ಕಾದಂಬರಿ ಲೋಕಕ್ಕೆ ಒಂದು ಮಹಾನ್ ಕಾಣಿಕೆಯಾಗಿ ಬಂದಿತು. ಮಲೆನಾಡು ಪ್ರಾದೇಶಿಕ ಹಿನ್ನೆಲೆಯಲ್ಲಿನ ಬೃಹತ್ಕೃತಿ ಗಾತ್ರದಂತೆ ವಸ್ತು ವಿಸ್ತಾರದಲ್ಲಿಯೂ ಕನ್ನಡಕ್ಕೆ ಪ್ರಥಮವಾಗಿ ಲಭಿಸಿತು. ಮಲೆನಾಡಿನ ಸಕಲ ಚರಾಚರ ಸೃಷ್ಟಿಯನ್ನು ಸಮಗ್ರವಾಗಿ ಸೆರೆಹಿಡಿದ, ಪ್ರಕೃತಿಪ್ರಿಯ 'ಕುವೆಂಪು' ಅವರ ಸಾಹಿತ್ಯಶಕ್ತಿ ಅದ್ಭುತವಾದದ್ದು. ಆಧುನಿಕ ಕಾದಂಬರಿ ಯುಗದ ಮಹಾಕಾವ್ಯ ಎಂಬುದಕ್ಕೆ ಈ ಮಲೆನಾಡಿನ ಮಹಾಭಾರತ ಪ್ರತ್ಯಕ್ಷ ಸಾಕ್ಷಿಯಾಗಿ ನಿಂತಿದೆ. ಒಂದು ಜನಾಂಗದ ಸಮಗ್ರ, ಪರಿಪೂರ್ಣ ಜೀವನವನ್ನು ನಾವಿಲ್ಲಿ ಕಾಣಬಹುದಾಗಿದೆ. ವಿವಿಧ ಪಾತ್ರಗಳ ಶಿಷ್ಟ-ದುಷ್ಟ ಸ್ವಭಾವ ದರ್ಶನ, ಮಲೆನಾಡಿನ ರೂಢಿಸಂಪ್ರದಾಯಗಳು, ಕಾಡು ಮೇಡುಗಳು, ಬೇಟೆಭಯಾನಕತೆಗಳು, ರೂಢಿಗತ ಮತ್ತು ಸಂಸ್ಕೃತ ಭೂಯಿಷ್ಠ ಸುಂದರ ಭಾಷೆ, ಈ ಕಾದಂಬರಿಯ ಭವ್ಯತೆಯನ್ನು ಇನ್ನಿಷ್ಟು ಹೆಚ್ಚಿಸಿದ್ದು, ಇದೊಂದು ಕನ್ನಡದಲ್ಲಿ ಮಹಾಕಾದಂಬರಿಯಾಗಿದೆ.

ಕಾದಂಬರಿ ಭಾಂಡಾರದ ಬೀಗಮುದ್ರೆ ಒಡೆದವರು :

ಅ. ನ. ಕೃಷ್ಣರಾಯರು :

ಬಂಗಾಲಿ-ಮರಾಠಿ ಭಾಷೆಗಳಿಂದ ಕನ್ನಡದಲ್ಲಿ ಕಾದಂಬರಿ ಗಳು ಬರುವ ಸುಗ್ಗಿ ಮುಗಿದು, ಅದ್ಭುತ ರಮ್ಯ ದೃಶ್ಯ ಮಸುಕಾದ ಮೇಲೆ ಕನ್ನಡ ಕಾದಂಬರಿಕಾರರು ವಾಸ್ತವದತ್ತ

ದೃಷ್ಟಿ ಹೊರಳಿಸಿದ್ದು. ಆರಂಭದಲ್ಲಿಯೇ ಅನಕೃ ಅವರು ಕಾದಂಬರಿಯ ವಾಸ್ತವ ಸಂಪ್ರದಾಯದಲ್ಲಿ ಮಹತ್ವದ ಸ್ಥಾನ ಗಳಿಸಿದರು. 'ಉದಯರಾಗ' ಹಾಡಿದ ಮೇಲೆ ತಮ್ಮ ಜೀವನದ ಅಸ್ತಮಾನದ ವರೆಗೆ ನೂರಕ್ಕೂ ಹೆಚ್ಚು ಕಾದಂಬರಿ ಗಳನ್ನು ಕನ್ನಡಕ್ಕೆ ಕೊಟ್ಟು ಒಂದು ವಿಕ್ರಮವನ್ನೇ ಸ್ಥಾಪಿಸಿದರು. ಕಲೆ, ಇತಿಹಾಸ, ಧರ್ಮ, ಸಾಹಿತ್ಯ, ರಾಷ್ಟ್ರೀಯತೆ, ಸಂಸ್ಕೃತಿ, ಸ್ತ್ರೀ ಸ್ವಾತಂತ್ರ್ಯ, ರಾಜಕೀಯ, ಜಾತಿಯ ಭೂತ, ವೇಶ್ಯಾ ಸಮಸ್ಯೆ, ಸುರಾಪಾನ ಸಮಸ್ಯೆ, ಇನ್ನೂ ಅನೇಕ ವಿಷಯ ವಿಚಾರಗಳು ಇವರ ಕಾದಂಬರಿಗಳಲ್ಲಿ ಹಾಸುಹೊಕ್ಕಾಗಿವೆ.

ಸರಳಸುಂದರ ಶೈಲಿ, ಕಥನಕೌಶಲ, ಸಂಭಾಷಣೆಯ ಚಾತುರ್ಯ ಇವುಗಳಿಂದ ಅನಕೃ ಅವರು ಕನ್ನಡದ ಓದುಗರನ್ನು ಸೆರೆಹಿಡಿದು ತಮ್ಮ ಕಾಲದ ಅತ್ಯಂತ ಜನಪ್ರಿಯ ಲೇಖಕ ರೆಂದೆನಿಸಿಕೊಂಡರು. ಕೃಷ್ಣರಾಯರು ಲಕ್ಷಾವಧಿ ಸಂಖ್ಯೆಯಲ್ಲಿ ಓದುಗರನ್ನು ನಿರ್ಮಿಸಿದಂತೆ, ಪುಸ್ತಕ ಪ್ರಕಾಶಕರನ್ನೂ ಗಣನೀಯ ಲೆಕ್ಕದಲ್ಲಿ ಬೆಳೆಸಿದರು.

ಕಲಾವಿದರನ್ನು ಕುರಿತ ಪ್ರಾರಂಭದ 'ಉದಯರಾಗ' 'ಸಂಧ್ಯಾರಾಗ' 'ನಟಸಾರ್ವಭೌಮ' ವೇಶ್ಯಾ ಜೀವನ ಕುರಿತ 'ನಗ್ನಸತ್ಯ' 'ಶನಿಸಂತಾನ' 'ಸಂಜೆಗತ್ತಲು' 'ಅಪರಂಜಿ' ಕೌಟುಂಬಿಕ ಕಾದಂಬರಿಗಳಾದ 'ಮಂಗಳಸೂತ್ರ' 'ಗೃಹ ಲಕ್ಷ್ಮಿ' 'ರುಕ್ಮಿಣಿ' ಸಾಹಿತಿಗಳ ಜೀವನ ಕುರಿತಾದ 'ಸಾಹಿತ್ಯ ರತ್ನ' 'ಗಾಜಿನಮನೆ' 'ಕನ್ನಡಮ್ಮನ ಗುಡಿಯಲ್ಲಿ' ಈ

ಮೊದಲಾದ ಕಾದಂಬರಿಗಳು ಪ್ರಖ್ಯಾತವಾದವು. ಇವುಗಳಲ್ಲದೆ ವಿಜಯನಗರದ ಸಾಮ್ರಾಜ್ಯ ಕುರಿತು ಐತಿಹಾಸಿಕ ಕಾದಂಬರಿಗಳ ಮಾಲಿಕೆ, ಕೆಂಪೇಗೌಡ ಮತ್ತು ಕಿತ್ತೂರ ಚೆನ್ನಮ್ಮನನ್ನು ಕುರಿತ ಕಾದಂಬರಿಗಳು ಜನಪ್ರಿಯವಾಗಿವೆ. ಬಹಳಷ್ಟು ಕೃತಿಗಳಲ್ಲಿ ಆದರ್ಶದ ಅತಿರೇಕತೆ ಹೆಚ್ಚು ಮೂಡಿದಂತಾದರೂ 'ಸಂಧ್ಯಾರಾಗ' 'ಮಂಗಳಸೂತ್ರ' 'ಕಣ್ಣೀರು' ಇವು ಅನಕೃ ಅವರ ಎತ್ತಿಹೇಳಬಹುದಾದ ಕೃತಿಗಳು. ಸಮಸ್ಯೆಗಳನ್ನು ಎತ್ತಿ ತೋರಿಸುವ ಕಲಾನೈಪುಣ್ಯ, ಸಂವಾದದಲ್ಲಿಯೇ ಕಥೆಗೆ ಓಟ ಕೊಡುವ ಚಾತುರ್ಯ, ಇವು ಅನಕೃ ಅವರಲ್ಲಿ ಒಡಮೂಡಿವೆ. ಅನಕೃ ಅವರು ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯ ಚಳುವಳಿಯ ಪ್ರವರ್ತಕರು. ಪ್ರಗತಿಶೀಲ ಗುಂಪನ್ನು ಕಟ್ಟಿ, ಆ ಸಮಯ ಹೊಸ ಲೇಖಕರ ಬಳಗ ನಿರ್ಮಿಸಿ, ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ತಿರುವನ್ನು ಕೊಟ್ಟರು.

ಶಿವರಾಮ ಕಾರಂತರು :

'ವಿಚಿತ್ರಕೂಟ' ಎಂಬ ಪತ್ತೇದಾರಿ ಕಾದಂಬರಿಯಿಂದ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಕಾಲಿರಿಸಿದ ಬಹುಮುಖ ಪ್ರತಿಭೆಯ ಕಾರಂತರು, ಪ್ರಾರಂಭದಲ್ಲಿಯೇ 'ಚೋಮನ ದುಡಿ' ಯಂಥ ಶಕ್ತಿಯುತ ಕಾದಂಬರಿಯನ್ನು ಒದಗಿಸಿದಂತೆ, ಈಗಲೂ ಕೂಡ ಯಾವ ಮೌಲಿಕ ಸತ್ತ್ವವನ್ನು ಕಳೆದುಕೊಳ್ಳದೆ, ಅತೀ ಸಮರ್ಥ ಕೃತಿಗಳನ್ನು ಕೊಡುತ್ತಲಿರುವುದು ವಿಶೇಷವಾಗಿದೆ.

ಕಾರಂತರ ಕಾದಂಬರಿಗಳ ಸಂಖ್ಯೆ ಐವತ್ತನ್ನು ಮೀರುತ್ತವೆ. ಪ್ರಾರಂಭದಿಂದಲೇ ಕಾರಂತರು ಸಮಕಾಲೀನ ಬದುಕನ್ನು ಆಳವಾಗಿ ಒಳಹೊಕ್ಕು ನೋಡಿದರು.

ಕಾರಂತರ 'ದೇವದೂತರು' ವಿಡಂಬನೆಗೆ ಮೀಸಲಾದ ಕೃತಿಯೆಂದು ಹಿಂದೆಯೇ ಹೇಳಿದೆ. 'ಸರಸಮ್ಮನ ಸಮಾಧಿ' ಯಲ್ಲಿ ದಾಂಪತ್ಯ ಜೀವನದ ವಿಷಮತೆಯನ್ನು ಕಾರಂತರು ವಿಡಂಬನೆಯ ದೃಷ್ಟಿಯಿಂದ ನೋಡಿದ್ದಾರೆ. ಇಂದು ಸಾಹಿತ್ಯ ಕ್ಷೇತ್ರದಲ್ಲಿ ಜ್ವಲಂತ ವಿಷಯವಾಗಿ ಬಂದ 'ದಲಿತ' ಸಮಸ್ಯೆ ಯನ್ನು ಕಾರಂತರು 'ಚೋಮನದುಡಿ' ಕಾದಂಬರಿಯಲ್ಲಿ ಅಂದೇ ತೆರೆದಿಟ್ಟಿದ್ದಾರೆ. ಅನಂತರ ಬಂದ 'ಮರಳಿ ಮಣ್ಣಿಗೆ' ಕನ್ನಡದ ಶ್ರೇಷ್ಠ ಕಾದಂಬರಿಗಳ ಸಾಲಿಗೆ ನಿಂತು ಒಂದು ಮಹಾಕಾದಂಬರಿ ಎಂದೆನಿಸಿಕೊಂಡಿತು. ದಕ್ಷಿಣ ಕನ್ನಡದ ಕರಾವಳಿ ಪ್ರದೇಶದ ಹಿನ್ನೆಲೆಯಲ್ಲಿನ ಬಡತನ ಬಾಳುವೆಯ ನೂರು ವರ್ಷಗಳ ಅವಧಿಯ ಮೂರು ತಲೆಮಾರಿನ ಚಿತ್ರ ಈ ಬೃಹತ್ ಕಾದಂಬರಿ.

ಮೊದಲ ತಲೆಮಾರಿನಲ್ಲಿ ಬರುವ ರಾಮ ಐತಾಳರು, ಸರಸೋತಿ, ಪಾರೋತಿ, ಸತ್ಯಭಾಮೆ, ಸೂರ, ಬಚ್ಚಿ ಇವರೆಲ್ಲ ಕಡಲು, ಆರಾಲು, ಹೊನ್ನೆಮರಗಳ ಜತೆ ತಮ್ಮ ಬದುಕನ್ನು ಹೊಂದಿಸಿಕೊಂಡವರು. ತಮ್ಮ ಸೀಮೆ ಬಿಟ್ಟು ಬೇರೆ ಹೊರ ಜಗತ್ತನ್ನು ಅರಿಯದವರು. ಅವರ ಮನಸ್ಸು, ಭಾವನೆ ಉದಾತ್ತ ವಾದವುಗಳು. ಬಾಳಿನಲ್ಲಿ ನೋವನ್ನೇ ರುಚಿಮಾಡಿಕೊಂಡು

ಉಂಡವರು. ಇವರ ಜತೆಗೆ ವಂಶ ಪರಂಪರೆ ಮಾಸದೆ ಬಂದಿರುತ್ತದೆ.

ಎರಡನೆಯ ತಲೆಮಾರಿನಲ್ಲಿ ಹೊಸತನದ ಸಂಘರ್ಷ, ನೆಲದೊಡನೆ ಅಗಲಿಕೆಯನ್ನು ಕಾಣುತ್ತೇವೆ. ಇವೇ ಈ ತಲೆಮಾರಿನವರ ದುಃಖಕ್ಕೆ ಕಾರಣ. ಲಚ್ಚ-ನಾಗವೇಣಿಯರ ವಿಷಮ ದಾಂಪತ್ಯದ ಮೂಲಕ ಇದು ವೇದ್ಯವಾಗುತ್ತದೆ. ಇಲ್ಲಿನ ಜೀವನಕ್ರಮ ಹೆಚ್ಚು ಜಟಿಲವಾಗಿದೆ. ಅದರಂತೆ ಪ್ರತ್ಯೇಕತೆ ಬೆಳೆದುಬರುತ್ತದೆ. ಪಾರೋತಿ-ಸರಸೋತಿ ಇವರು ಮಣ್ಣಿನ ಜತೆ ಹೋರಾಡಿವರೆ, ನಾಗವೇಣಿಗೆ ಇದರಲ್ಲಿ ಆಸ್ಥೆಯಿಲ್ಲ.

ಮೂರನೆಯ ತಲೆಮಾರಿನ ರಾಮು, ತೀರ ಬೇರೆಯವನಾಗಿ ಮನೆ ಬಿಟ್ಟು ನೌಕರಿಗಾಗಿ ಮುಂಬಯಿಗೆ ಬರುತ್ತಾನೆ. ನಿರಾಶನಾಗಿ ಮತ್ತೆ ಊರಿಗೆ ಮರಳುತ್ತಾನೆ. ಮುಂಬಯಿಯ ನಿರಾಶ್ರಿತರ ಬದುಕು ಆತನ ಮೇಲೆ ಪರಿಣಾಮ ಬೀರುತ್ತದೆ. ತಾಯಿಯ ಮೇಲಿನ ಆಳವಾದ ಪ್ರೀತಿ ಆತನನ್ನು ಮರಳಿ ತನ್ನ ನೆಲಕ್ಕೆ ಕರೆಯಿಸುತ್ತದೆ. ಈ ಮೂರು ತಲೆಮಾರುಗಳಲ್ಲಿ ಸಾಂಪ್ರದಾಯಿಕ ಬದಲಾವಣೆಯನ್ನು ಸೂಕ್ಷ್ಮವಾಗಿ ಕಾಣುತ್ತೇವೆ.

'ಬೆಟ್ಟದ ಜೀವ'ಕ್ಕೆ ನಿಸರ್ಗವೇ ಹಿನ್ನೆಲೆಯಾಗಿದೆ. ಇದರಲ್ಲಿ ಮಾನವೀಯ ಅಂತಃಕರಣದ ಸೂಕ್ಷ್ಮ ಸಮಸ್ಯೆಗಳು

ಸುಂದರವಾಗಿ ಚಿತ್ರಿತವಾಗಿವೆ. 'ಮರಳಿ ಮಣ್ಣಿಗೆ' ಕಾದಂಬರಿಗಿಂತ 'ಬೆಟ್ಟದ ಜೀವ' ದಲ್ಲಿ ಪ್ರಕೃತಿ ಹೆಚ್ಚಿಗೆ ಪಾತ್ರವಹಿಸಿದೆ. ಇಲ್ಲಿನ ಗೋಪಾಲಯ್ಯ ಓರ್ವ ವ್ಯಕ್ತಿಯಾಗಿರದೆ ಕಾದಂಬರಿಯ ಸಮಗ್ರ ಜೀವನವಾಗಿದ್ದಾರೆ. ಬೆಟ್ಟದ ಒಂದು ಕೋಡುಗಲ್ಲಿನಂತೆ ಅವರ ವ್ಯಕ್ತಿತ್ವ ಗಟ್ಟಿಯಾಗಿದೆ. ಗೋಪಾಲಯ್ಯ ಮಾನವೀಯ ಅಂತಃಕರಣದ ಒಂದು ಉತ್ತಮ ಉದಾಹರಣೆ. ಗೋಪಾಲಯ್ಯನ ನಂತರ ಈ ಕಾದಂಬರಿಯಲ್ಲಿ ಮಹತ್ವದ ವಸ್ತು ಬೆಟ್ಟಗುಡ್ಡಗಳಿಂದ ತುಂಬಿದ ಪ್ರಕೃತಿಯಾಗಿದೆ. 'ಕುಡಿಯರ ಕೂಸು' 'ಮುಗಿದ ಯುದ್ಧ' 'ಔದಾರ್ಯದ ಉರುಳಲ್ಲಿ' 'ಜಾರುವ ದಾರಿಯಲ್ಲಿ' 'ಬತ್ತದ ತೊರೆ' 'ಕರುಳಿನ ಕರೆ' 'ಚಿಗುರಿದ ಕನಸು' 'ಮೊಗ ಪಡೆದ ಮನ' 'ಸಮೀಕ್ಷೆ' 'ಅಳಿದ ಮೇಲೆ' 'ಆಳ ನಿರಾಳ' 'ಇದ್ದರೂ ಚಿಂತೆ' 'ಇನ್ನೊಂದೇ ದಾರಿ' 'ಮೂಕಜ್ಜಿಯ ಕನಸುಗಳು' 'ವೈಮನಗಳ ಸುಳಿಯಲ್ಲಿ' ಇವು ಕಾರಂತರ ಹೆಸರಾಂತ ಕಾದಂಬರಿಗಳು. ಕಾರಂತರ ಬರವಣಿಗೆ ದಿನದಿನಕ್ಕೆ ಹೇಗೆ ವೈಚಾರಿಕವಾಗತೊಡಗಿದೆ ಎಂಬುದಕ್ಕೆ 'ಕೇವಲ ಮನುಷ್ಯರು' ಸಾಕ್ಷಿ. ಆಧ್ಯಾತ್ಮದ ಬಗೆಗೆ ಹೊಸ ವಿಚಾರ ಇಲ್ಲಿ ಒಡಮೂಡಿದೆ. ಇತ್ತೀಚಿನ 'ಮೂಜನ್ಮ' ಸ್ವಾತಂತ್ರ್ಯದ ಪೂರ್ವಾರ್ಧ ಉತ್ತರಾರ್ಧದ ಕತೆಯಾಗಿ, ಭಾರತದ ಎರಡು ನಿರ್ಭಾಗ್ಯ ಪೀಳಿಗೆಗಳಲ್ಲಿನ ವಿಚಾರವಂತರ ಆತ್ಮವೃತ್ತವಾಗಿದೆ.

ಅನಕೃ, ಕಾರಂತರು ಕಾದಂಬರಿಗಳನ್ನು ನಿರ್ಮಿಸುತ್ತಿದ್ದಂತೆಯೇ ಕಾದಂಬರಿಕಾರರ ಸಂಖ್ಯೆಯೂ ಗಣನೀಯವಾಗಿ

ಹೆಚ್ಚತೊಡಗಿತು. ಮಿರ್ಜಿ ಅಣ್ಣಾರಾಯರು, ವಿ. ಎಂ. ಇನಾಂದಾರ, ಬಸವರಾಜ ಕಟ್ಟೀಮನಿ, ತರಾಸು, ನಿರಂಜನ, ಕೃಷ್ಣಮೂರ್ತಿ ಪುರಾಣಿಕ, ರಾವಬಹಾದ್ದೂರ, ಶ್ರೀರಂಗ, ರಾಮಚಂದ್ರ ಕೊಟ್ಟಲಗಿ, ನಾಡಿಗೇರ ಕೃಷ್ಣರಾಯ, ವ್ಯಾಸರಾಯ ಬಲ್ಲಾಳ, ಎಸ್. ಅನಂತನಾರಾಯಣ, ಭಾರತೀಸುತ, ಬೀಚಿ, ಶ್ರೀನಿವಾಸರಾವ್ ಕೊರಟಿ, ತ್ರಿವೇಣಿ, ಅನುಪಮಾ ನಿರಂಜನ ಇನ್ನೂ ಅನೇಕರು ಕಾದಂಬರಿಯ ಹದವಾದ ಕೃಷಿಯನ್ನು ಕೈಗೊಂಡರು.

ಮಿರ್ಜಿ ಅಣ್ಣಾರಾಯರ ಪ್ರಥಮ ಕಾದಂಬರಿ 'ನಿಸರ್ಗ' ಬೆಳಗಾವಿ ಜಿಲ್ಲೆಯ ಉತ್ತರ ತುದಿಯ ಜೈನ ಮನೆತನಗಳ ಹಿನ್ನೆಲೆಯಲ್ಲಿನ ವಿಫಲ ಪ್ರಣಯಕಥೆ, ತನ್ನದೇ ಆದ ಸತ್ತ್ವದಿಂದ ಕನ್ನಡದ ಉತ್ತಮ ಕಾದಂಬರಿಗಳ ಮಾಲಿಕೆಯಲ್ಲಿ ನಿಲ್ಲಬಲ್ಲುದಾಗಿದೆ. ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ 'ರಾಷ್ಟ್ರಪುರುಷ' 'ಪ್ರತಿ ಸರಕಾರ' ನಿರ್ಮಾಣವಾದವು. ಹಳ್ಳಿಯ ಮಾಸ್ತರನ ಗೋಳಿನ ಚಿತ್ರ 'ರಾಮಣ್ಣ ಮಾಸ್ತರ' ಗ್ರಾಮೀಣ ಬಡ ಒಕ್ಕಲಿಗರ ಅಜ್ಞಾನದ ಬಲದ ಮೇಲೆ ಚೆಲ್ಲಾಟ ನಡೆಸಿದ ಸಿರಿವಂತರ ವಿಷವರ್ತುಲ ಕುರಿತಾದ 'ಅಶೋಕ ಚಕ್ರ' ಗಾಂಧೀ ಹತ್ಯೆಯ ನಂತರ ತಾಳಿದ ದಳ್ಳುರಿ ದರ್ಶನ 'ಭಸ್ಮಾಸುರ', ಇಂದು ಹದಗೆಟ್ಟುಹೋದ ಹಳ್ಳಿಯ ಬದುಕು 'ಹದಗೆಟ್ಟ ಹಳ್ಳಿ' ಇವು ಅಣ್ಣಾರಾಯರ ಹಲವು ಕಾದಂಬರಿಗಳು. ಮಹಾರಾಷ್ಟ್ರ–ಕರ್ನಾಟಕ ಗಡಿಯಲ್ಲಿನ

ಒಂದು ವಿಶಿಷ್ಟ ಕನ್ನಡ ಭಾಷೆಯನ್ನು ತಮ್ಮ ಕಾದಂಬರಿಗಳಲ್ಲಿ ಅಣ್ಣಾರಾಯರು ಸಮರ್ಥವಾಗಿ ಬಳಸಿದ್ದಾರೆ.

ವಿ. ಎಂ. ಇನಾಂದಾರರ ಕಾದಂಬರಿಯ ಶೈಲಿ ಮೋಹಕವಾದುದು. ನಗರ ಜೀವನ, ಬುದ್ಧಿಜೀವಿಗಳ ಹೋರಾಟ ಇವುಗಳನ್ನು ಇನಾಮದಾರರ ಕಾದಂಬರಿಗಳಲ್ಲಿ ನೋಡುತ್ತೇವೆ. ೧೯೪೨ ರ ಆಗಷ್ಟ ಚಳುವಳಿಯ ಕಥೆ ಮುಂಬಯಿ ನಗರದ ಹಿನ್ನೆಲೆಯಲ್ಲಿ ಇವರ 'ಮೂರಾಬಟ್ಟೆ'ಯಲ್ಲಿ ಚಿತ್ರಿತವಾಗಿದೆ. 'ಕನಸಿನ ಮನೆ' 'ಕಟ್ಟಿದ ಮನೆ' 'ಶಾಪ' 'ಈ ಪರಿಯ ಸೊಬಗು' 'ಮುಗಿಯದ ಕಥೆ' 'ಮಂಜು ಮುಸುಕಿದ ದಾರಿ' 'ನವಿಲು ನೌಕೆ' ಇವು ಇನಾಮದಾರರ ಒಳ್ಳೆಯ ಕೃತಿಗಳು. 'ಶಾಪ' ಆನುವಂಶಿಕತೆಯ ದುರಂತ ಚಿತ್ರಿಸುವ ಉತ್ತಮ ಕಾದಂಬರಿಯಾಗಿದೆ.

ಕ್ರಾಂತಿಕಾರಕ ಬಸವರಾಜ ಕಟ್ಟೀಮನಿ :

ಭಾರತೀಯ ಸ್ವಾತಂತ್ರ್ಯ ಚಳುವಳಿಯ ಅದೂ ಬೆಳಗಾವಿ ಜಿಲ್ಲೆಯ ಕುಂದರನಾಡಿನ ಪರಿಸರದಲ್ಲಿನ ಹೋರಾಟದ ಹಿನ್ನೆಲೆಯಲ್ಲಿ ಬಂದ 'ಸ್ವಾತಂತ್ರ್ಯದೆಡೆಗೆ' ಕಾದಂಬರಿಯಿಂದಲೇ ಕಟ್ಟೀಮನಿಯವರು ದಿಟ್ಟತನದಿಂದ ಈ ಕ್ಷೇತ್ರದಲ್ಲಿ ನಿಂತರು. ಕಟ್ಟೀಮನಿಯವರು ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಿ ಶಿಕ್ಷೆಗೆ ಗುರಿಯಾಗಿ ೧೯೪೨ ರಲ್ಲಿ ಬೆಳಗಾವಿಯ ಹಿಂಡಲಗಿ ಸೆರೆಮನೆಯಲ್ಲಿದ್ದಾಗಲೇ 'ಸ್ವಾತಂತ್ರ್ಯದೆಡೆಗೆ' ಮತ್ತು ಇನ್ನೊಂದು ಸ್ವಾತಂತ್ರ್ಯ ಚಳುವಳಿ ಕುರಿ

ತಾದ ಅತ್ಯಂತ ಜನಪ್ರಿಯ ಕಾದಂಬರಿ 'ಮಾಡಿ ಮಡಿದವರು' ಇವುಗಳ ಬಗೆಗೆ ಹೊಳಹು ಹಾಕಿದ್ದು.

ರಶಿಯಾದ ಕ್ರಾಂತಿಯ ವಿಚಾರಗಳನ್ನು ಎರವಲು ಪಡೆಯದೆ ಕರ್ನಾಟಕದ ಔದ್ಯೋಗಿಕ ನಗರವಾದ ದಾವಣಗೆರೆಯ ಕಾರ್ಮಿಕರ ಬದುಕನ್ನು ಕಣ್ಣಾರೆ ಕಂಡು ಲೇಖನಿಯಲ್ಲಿಳಿಸಿದ ವಾಸ್ತವಚಿತ್ರವೇ 'ಜ್ವಾಲಾಮುಖಿಯ ಮೇಲೆ' ಯಾಗಿ ಮೂಡಿಬಂತು. ಕನ್ನಡಕ್ಕೆ ಹೊಸಬಗೆಯಾಗಿ ಬಂದ ಈ ಕೃತಿಗೆ ಅಂತರಾಷ್ಟ್ರೀಯ ಮಾನ್ಯತೆ ದೊರಕಿತು.

ಮಠಾಧೀಶರ, ಅವರ ಅನುಯಾಯಿಗಳ ಮುಸುಕಿನ ಬದುಕಿಗೆ ಕ್ಷ ಕಿರಣ ಬೀರಿದ 'ಮೋಹದ ಬಲೆಯಲ್ಲಿ' 'ಜರತಾರಿ ಜಗದ್ಗುರು' ಇವು ಧಾರ್ಮಿಕ ಸೋಗಿನವರ ಸತ್ಯ ಚಿತ್ರಗಳಾಗಿ ಮೂಡಿದವು. 'ಬೀದಿಯಲ್ಲಿ ಬಿದ್ದವಳು' ಈ ಕಾದಂಬರಿಯಲ್ಲಿ ಹಳ್ಳಿಯ ಬಡ ಹುಡುಗಿಯೊಬ್ಬಳು ಪರಿಸ್ಥಿತಿಯ ಒತ್ತಡದಿಂದ ಸೂಳೆಯಾಗಬೇಕಾದ ಕರುಣಕಥೆಯಿದೆ. 'ಮಣ್ಣು ಮತ್ತು ಹೆಣ್ಣು' ಇದು, ಇವೇ ಸಮಸ್ಯೆಗಳನ್ನು ಕುರಿತ ಕೃತಿಯಾಗಿದೆ. 'ಖಾನಾವಳಿ ನೀಲಾ' ಬದುಕಿನ ವಾಸ್ತವ ಪ್ರಜ್ಞೆಗೆ ಒಂದು ಉತ್ತಮ ಉದಾಹರಣೆ. 'ಜಲತರಂಗ' ಯೌವನಪೂರ್ವ ವಯಸ್ಸಿನ ಮಾನಸಿಕ ಹೋರಾಟದ ಒಂದು ಸುಂದರ ಚಿತ್ರ. 'ಜನಿವಾರ ಮತ್ತು ಶಿವದಾರ' 'ನೀ ನನ್ನ ಮುಟ್ಟಬೇಡ' ಜಾತಿಯ ಸಮಸ್ಯೆ ಕುರಿತಾದ ಕಾದಂಬರಿಗಳು. 'ನಾನು ಪೋಲಿಸನಾಗಿದ್ದೆ' ಪೋಲಿಸ ಪೇದೆ

ಯೊಬ್ಬನ ಬದುಕಿನ ಕಥೆ. ' ಸಾಕ್ಷಾತ್ಕಾರ ' ಇಂದಿನ ಪ್ರಜ್ಞಾವಂತರಲ್ಲಿ ಬೆಳೆದುನಿಂತ ಉದರ ವೈರಾಗ್ಯದ ಬಗೆಗೆ ಕ್ಷ ಕಿರಣ ಬೀರುವ ಕೃತಿ. ವೈಚಾರಿಕ ದೃಷ್ಟಿಯಿಂದ ಅಕ್ಕಮಹಾದೇವಿಯ ಬದುಕನ್ನು ಕಟ್ಟೀಮನಿಯವರು ' ಗಿರಿಯ ನವಿಲು ' ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

'ಸಮರ ಭೂಮಿ' 'ಪೌರುಷ ಪರೀಕ್ಷೆ' ಸಂಗೊಳ್ಳಿ ರಾಯನಾಯಕ ಇವು ಕಟ್ಟೀಮನಿ ಅವರ ಐತಿಹಾಸಿಕ ಕಾದಂಬರಿಗಳು. 'ಸಮರ ಭೂಮಿ' ನರಗುಂದ ಬಂಡಾಯವನ್ನು ಚಿತ್ರಿಸುವ ಕೃತಿಯಾದರೆ 'ಪೌರುಷ ಪರೀಕ್ಷೆ' ಮತ್ತು 'ಸಂಗೊಳ್ಳಿ ರಾಯನಾಯಕ' ಕಿತ್ತೂರಿನ ಇತಿಹಾಸಕ್ಕೆ ಸಂಬಂಧಿಸಿದ ಕಾದಂಬರಿಗಳಾಗಿವೆ. ಕಟ್ಟೀಮನಿಯವರ ಸಾಮಾಜಿಕ ಪ್ರಜ್ಞೆಯಂತೆ ಐತಿಹಾಸಿಕ ಪ್ರಜ್ಞೆಯೂ ಮೆಚ್ಚುವಂತಹುದು.

ಕನ್ನಡದ ಸಮರ್ಥ ಕಾದಂಬರಿಕಾರರಲ್ಲಿ ಒಬ್ಬರಾದ ತ. ರಾ. ಸು ಅವರ ಮೊದಲ ಕಾದಂಬರಿ 'ಮನೆಗೆ ಬಂದ ಮಹಾಲಕ್ಷ್ಮಿ' ದೇವುಡು ಅವರ 'ಅಂತರಂಗ' ದಂತೆ ಮನೋವಿಶ್ಲೇಷಣಾತ್ಮಕವಾಗಿ ಬಂತು. ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ತ.ರಾ.ಸು. ಅವರದೂ ದಿಟ್ಟಹೆಜ್ಜೆ. 'ರಕ್ತತರ್ಪಣ' ಸ್ವಾತಂತ್ರ್ಯ ಚಳುವಳಿಯಕಥೆಯಾಗಿದೆ.'ಮಸಣದಹೂವು'ವೇಶ್ಯಾಸಮಸ್ಯೆಯ ಮೇಲಿನ ಕನ್ನಡ ಕೃತಿಗಳಲ್ಲಿ ಹೆಚ್ಚಿನದು. 'ಬಿಡುಗಡೆಯ ಬೇಡಿ' ಸ್ತ್ರೀಸ್ವಾತಂತ್ರ್ಯವನ್ನು ಕುರಿತದ್ದಾಗಿದೆ. ಹಳ್ಳಿಯ ಬದುಕಿನ ನೈಜ ಚಿತ್ರಣ 'ಚಂದವಳ್ಳಿಯ ತೋಟ' ದಲ್ಲಿದೆ. ಇತಿಹಾಸ ಕಾಲದ

ನಿಷ್ಠಾವಂತ ಸಂಗೀತಗಾರನ ಕಥೆಯಾದ 'ಹಂಸಗೀತೆ' ಅದ್ಭುತ ಕಾದಂಬರಿ. ಅದರಂತೆ ಚಿತ್ರದುರ್ಗದ ಇತಿಹಾಸ ಮಾಲಿಕೆಗಳಾದ 'ಕಂಬನಿಯ ಕುಯಿಲು' 'ತಿರುಗು ಬಾಣ' 'ಹೊಸ ಹಗಲು' ಚಿತ್ರ ದುರ್ಗದ ಬಲವಾದ ಕೋಟೆಯಷ್ಟೆ ಸತ್ತ್ವಯುತವಾಗಿವೆ. ಕನ್ನಡ ಐತಿಹಾಸಿಕ ಕಾದಂಬರಿಗಳಿಗೆ ಇವು ವಿಶೇಷ ಕೊಡುಗೆ. 'ಸರ್ಪಮತ್ಸರ' 'ನಾಗರಹಾವು' 'ಎರಡು ಹೆಣ್ಣು ಒಂದು ಗಂಡು' ಇವು ತಾರುಣ್ಯದ ಅದಮ್ಯಶಕ್ತಿಯ ಹೋರಾಟವನ್ನು ದಿಟ್ಟವಾಗಿ ಚಿತ್ರಿಸಿದಂತೆ ಅಲ್ಲಮಪ್ರಭುವಿನ ದಿವ್ಯಬದುಕು 'ಅಗ್ನಿರಥ ಮುಕ್ತಪಥ'ದಲ್ಲಿ ಮೂಡಿಬಂದಿದೆ. ನಚಿಕೇತನನ್ನು ಕುರಿತ ಕಥೆ 'ಬೆಳಕು ತಂದ ಬಾಲಕ' ಪೌರಾಣಿಕ ಕಾದಂಬರಿಗೆ ಉತ್ತಮ ಉದಾಹರಣೆ. ಭವ್ಯಮೂರ್ತಿ ಗೊಮ್ಮಟೇಶನ ಶಿಲ್ಪ ಸೃಷ್ಟಿಗೆ ಕಾರಣನಾದ ಚಾವುಂಡರಾಯನ ಜೀವನದ ಆಧಾರದ ಮೇಲೆ ರಚಿತವಾದ' 'ಶಿಲ್ಪ ಶ್ರೀ'ಶ್ರೇಷ್ಠ ಕೃತಿಯಾಗಿದೆ. ತರಾಸು ಅವರು ಇನ್ನೂ ಸತ್ವಪೂರ್ಣವಾದ ಕಾದಂಬರಿಗಳನ್ನು ಕೊಡುತ್ತಿರುವುದು ಕನ್ನಡಕ್ಕೆ ಉಪಕಾರವಾಗಿದೆ.

ಕನ್ನಡದ ಉತ್ತಮ ಕಾದಂಬರಿಕಾರರಲ್ಲಿ ನಿರಂಜನರೂ ಒಬ್ಬರು. ಅವರ 'ದೂರದ ನಕ್ಷತ್ರ' ಶಿಕ್ಷಕನೊಬ್ಬನ ಬದುಕಿನ ವಾಸ್ತವ ಚಿತ್ರವಾಗಿದೆ. ಕಯ್ಯೂರಿನ ಹುತಾತ್ಮರ ಹೋರಾಟದ ವಾಸ್ತವಚಿತ್ರಣ ' ಚಿರಸ್ಮರಣೆ ' ನಿರಂಜನರ ಅವಿಸ್ಮರಣೀಯ ಕೃತಿಯಾಗಿದೆ. ನಿರಂಜನ ಹೋರಾಟದ ಬದುಕಿನಂತೆ ಅವರ ಕಾದಂಬರಿಗಳು ಕೂಡ ಕ್ರಾಂತಿಯ ಕೂಸುಗಳೇ ಆಗಿವೆ.

'ರಂಗಮ್ಮನ ವಠಾರ' ಅಕ್ಕಪಕ್ಕದವರ ಬದುಕಿನ ಕಥೆಯ ವಸ್ತು ನಿರೂಪಣೆ ಮತ್ತು ತಂತ್ರದಿಂದ ಕನ್ನಡದಲ್ಲಿ ಗಮನಾರ್ಹ ಕೃತಿಯಾಗಿದೆ. ಒಂದೇ ವಠಾರದಲ್ಲಿಯ ಹದಿನಾಲ್ಕು ಕುಟುಂಬಗಳ ನೋವು ನಲಿವಿನ ಚಿತ್ರ ತುಂಬ ಯಥಾವತ್ತಾದುದು. ಇವರ 'ವಿಮೋಚನೆ' ರಶಿಯನ್ ಭಾಷೆಯಲ್ಲಿ ಅನುವಾದಗೊಂಡು ಪ್ರಥಮ ಕನ್ನಡ ಕಾದಂಬರಿಯೆಂದು ಕನ್ನಡಕ್ಕೆ ಕೀರ್ತಿ ತಂದು ಕೊಟ್ಟಿದೆ. 'ನೂರು ಜುಟ್ಟು ಮೂರು ಜಡೆ' ಗ್ರಾಮವೊಂದು ಸುಧಾರಣೆಯ ಬೆಳಕನ್ನು ಕಂಡ ಕೃತಿಯಾಗಿದೆ. 'ಕಲ್ಯಾಣ ಸ್ವಾಮಿ' ಮತ್ತು 'ಸ್ವಾಮಿ ಅಪರಂಪಾರ' ಐತಿಹಾಸಿಕ ಕೃತಿಗಳಾಗಿದ್ದು ಕೊಡಗಿನ ಇತಿಹಾಸಕ್ಕೆ ಸಂಬಂಧಿಸಿದವುಗಳು. 'ಅಭಯಾಶ್ರಮ' 'ವಿಲಾಸಿನಿ' 'ಹೆಣ್ಣಾಗಿ ಕಾಡಿತ್ತು ಮಾಯೆ' 'ಅಂಜನ' 'ಬಂಗಾರದ ಜಿಂಕೆ' ಇವು ಹೆಸರಿಸಬಹುದಾದ ನಿರಂಜನರ ಇತರ ಕೃತಿಗಳು.

ವಿಶೇಷವಾಗಿ ಮಧ್ಯಮ ವರ್ಗದ ಸುಖದುಃಖಗಳನ್ನು ಕುರಿತು ಕಾದಂಬರಿಗಳನ್ನು ಸೃಷ್ಟಿಸುತ್ತಿರುವ ಕೃಷ್ಣಮೂರ್ತಿ ಪುರಾಣಿಕರು ಹೈಸ್ಕೂಲ ಶಿಕ್ಷಕರಾಗಿದ್ದುಕೊಂಡು ನೂರರಷ್ಟು ಕಾದಂಬರಿಗಳನ್ನು ರಚಿಸಿದ್ದು ವಿಶೇಷವೆಂದೇ ಹೇಳಬೇಕು. 'ಮುಗಿಲು ಮಲ್ಲಿಗೆ' 'ಕೊನೆಯ ದಾರಿ' 'ಮುತ್ತೈದೆ' 'ಮಣ್ಣಿನ ಮಗಳು' ಮೊದಲಾದ ಕಾದಂಬರಿಗಳು ಮಧ್ಯಮ ವರ್ಗದ ಅನೇಕ ಸಮಸ್ಯೆಗಳನ್ನು ಚಿತ್ರಿಸುತ್ತವೆ. ಕನ್ನಡನಾಡಿನ ಗೃಹಿಣಿಯ ಬದುಕು ಪುರಾಣಿಕರ ಕಾದಂಬರಿಗಳಲ್ಲಿ ಹಾಸು ಹೊಕ್ಕಾಗಿ ಚಿತ್ರಣವಾಗುತ್ತಿರುವುದು ವಿಶೇಷ.

ಒಂದು ವಿಶಿಷ್ಟ ಕೃತಿ ಗ್ರಾಮಾಯಣ

ಆಂಗ್ಲ ಲೇಖಕ ಡೇನಿಯಲ್ ಡೇಫೋನಂತೆ ಒಂದಿಷ್ಟು ತಡವಾಗಿ ಕಾದಂಬರಿಗೆ ಕೈಹಾಕಿದ ರಾವಬಹಾದ್ದೂರ ಎಂದು ಸ್ನೇಹಿತರಿಂದ ವಿನೋದಕ್ಕಾಗಿ ಕರೆಯಿಸಿಕೊಂಡು, ಅದನ್ನೇ ಕೃತಿ ನಾಮವೆಂದು ಸ್ವೀಕರಿಸಿದ ಆರ್. ಬಿ. ಕುಲಕರ್ಣಿ ಅವರು ಮೊದಲಿಗೆ 'ಗ್ರಾಮಾಯಣ' ನಿರ್ಮಿಸಿ, ತತ್‌ಕ್ಷಣ ಅದನ್ನು ಕೀರ್ತಿಯ ಶಿಖರಕ್ಕೆ ಏರಿಸಿದರು. ಊರನ್ನೇ ಒಂದು ಕೇಂದ್ರ ವಾಗಿಟ್ಟುಕೊಂಡ ಕೃತಿಯ ಜೀವನ ಪ್ರಜ್ಞೆ ನಿತ್ಯನೂತನ ವಾದುದು. ೭೫ ವರ್ಷಗಳ ಹಿಂದಿನ ಕೃಷ್ಣಾತೀರದ ಒಂದು ಕುಗ್ರಾಮದ ಸಮಗ್ರ ಜೀವನದ ಆಗು-ಹೋಗುಗಳ ಸೂಕ್ಷ್ಮ ಚಿತ್ರಣ ಅತ್ಯದ್ಭುತವಾದದ್ದು. 'ಗ್ರಾಮಾಯಣ' ಪಾದಳ್ಳಿ ಗ್ರಾಮದ ಅವನತಿಯ ಕಥೆ. ಕಾದಂಬರಿಯ ಹಳೆಯ ಸಂಪ್ರದಾಯಕ್ಕನುಗುಣವಾಗಿ ಇಲ್ಲಿ ನಾಯಕ,ನಾಯಕಿ, ಖಳನಾಯಕ-ಖಳನಾಯಕಿ ಎಂದು ವಿಶಿಷ್ಟವಾಗಿ ಯಾರೂ ಬರುವುದಿಲ್ಲ. ಇಡೀ ಗ್ರಾಮದ ದುಷ್ಟ-ಶಿಷ್ಟ ಜನರು ಬಂದಂತೆ ಒಳಿತು ಕೆಡಕುಗಳು ಗ್ರಾಮ ಜೀವನದಲ್ಲಿ ಹಾಸುಹೊಕ್ಕಾಗಿ ಬರುತ್ತವೆ. ಈ ಹಿಂದಿನ ಯಾವ ಕಾದಂಬರಿಯಲ್ಲಿಯೂ ಸಾರ್ವಜನಿಕ ಜನಜೀವನ ಇಷ್ಟು ವಿಸ್ತೃತವಾಗಿ ಮೂಡಿಬಂದಿಲ್ಲ.

ಈ ಕಾದಂಬರಿಯ ಹುಟ್ಟು ಕೂಡ ಆಕಸ್ಮಿಕ. ರಾವ ಬಹಾದ್ದೂರ ಅವರು ತಮ್ಮೂರಿನ (ಹಿರೇಪಡಸಲಗಿ) ದಾದಾ ಎಂಬವನ ವಿಷಯ ಕುರಿತು ಬರೆಯಬೇಕೆಂದು ಹೊರಟಾಗ

ಕಥೆಯು ರೂಪರೇಷೆ ಮಾತ್ರ ಅವರ ಮನಸ್ಸಿನಲ್ಲಿತ್ತು. ಮುಂದೆ ಪಾತ್ರಗಳೇ ಕಥೆಯನ್ನು ಬೆಳೆಸಿಕೊಂಡು ಹೋಗಿ ಕನ್ನಡದ ಒಂದು ಮಹಾ ಕಾದಂಬರಿಯನ್ನಾಗಿ ರೂಪಿಸಿದವು.

ಧಾರ್ಮಿಕ ಶ್ರದ್ಧೆಯೇ ನಮ್ಮನ್ನು ಉದ್ಧರಿಸುವುದು. ವಿವೇಕ ಇಲ್ಲದಿದ್ದರೆ ವಿನಾಶ ಸಿದ್ಧ ಎನ್ನುವ ಮಾತನ್ನು ತಮ್ಮ ಮತ್ತೊಂದು ಬೃಹತ್ ಕಾದಂಬರಿ 'ವೃಂದಾವನ'ದಲ್ಲಿ ರಾವ ಬಹಾದ್ದೂರ ಹೇಳಿಕೊಂಡಿದ್ದಾರೆ. ಒಳಿತು ಕೆಡಕುಗಳ ತುಮುಲ ಇನ್ನೂ ಸೂಕ್ಷ್ಮವಾಗಿ ಇಲ್ಲಿ ಕಾಣಿಸಿಕೊಂಡಿದೆ. ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಹಿಂದುಳಿದ ಕೆಲಸಮಾಜಗಳಲ್ಲಿ ಇನ್ನೂ ಜೀವಂತವಾಗಿರುವ ದೇವದಾಸಿ ಪದ್ಧತಿ ನಡೆದುಬಂದ ರೀತಿ, ಅದಕ್ಕೆ ಪ್ರೇರಕರಾದ ಹಳ್ಳಿಯ ಮುಖಂಡರು, ಈ ಕೊಳೆಯಿಂದ ಪಾರಾಗಲೆತ್ನಿಸುವ ಪ್ರಜ್ಞಾವಂತರು, 'ಮುತ್ತು ಕಟ್ಟಿದಳು' ಮತ್ತು 'ದೇವದಾಸಿ'ಯಲ್ಲಿ ಮೂಡಿನಿಂತಿದ್ದಾರೆ. 'ಧೂಮಕೇತು' ಕಾದಂಬರಿಯಲ್ಲಿ ಇಂದಿನ ! ಚುನಾವಣೆ ನಾಟಕದ ರಂಗಮಂದಿರದ ಹಿಂದಿನ 'ಗ್ರೀನರೂಮಿ' ನಲ್ಲಿಯ ಆಗುಹೋಗುಗಳು ಸ್ವಾನುಭವದಿಂದ ವಾಸ್ತವವಾಗಿ ಚಿತ್ರಿತ ವಾಗಿವೆ.

ಅಖಂಡ ಭಾರತ ರಾಷ್ಟ್ರ ಒಡೆದುಹೋಗುವ ಸಂಕೇತ ವಾಗಿ 'ಬಿತ್ತಿ ಬೆಳೆದವರು' ಕಾದಂಬರಿಯಲ್ಲಿ ಒಂದು ಗ್ರಾಮದ ಮನೆತನ ಛಿದ್ರವಾಗುವ ಬಗೆಯನ್ನು ಕಾಣುತ್ತೇವೆ. ಭಾರತದ ಸ್ವಾತಂತ್ರ್ಯ ಪೂರ್ವ ರಾಜಕೀಯವನ್ನೇ ಆಧಾರವಾಗಿಟ್ಟುಕೊಂಡು

ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. 'ಗ್ರಾಮಾಯಣ' ನಂತರದ ರಾವಬಹಾದ್ದೂರರ ಗಮನಾರ್ಹವಾದ ಕೃತಿಯಾಗಿದೆ ಇದು.

ಕಾದಂಬರಿಗಳ ಇನ್ನಿತರ ಕಾರಣಪುರುಷರು

'ವಿಶ್ವಾಮಿತ್ರನ ಸೃಷ್ಟಿ' ಎನೂತನ ಕಾದಂಬರಿ ನಿರ್ಮಿಸಿದ ಬಳಿಕ ಶ್ರೀರಂಗರು ಇನ್ನೂ ಹಲವು ಕಾದಂಬರಿಗಳನ್ನು ಬರೆದರು. ತಮ್ಮ ನಾಟಕಗಳಂತೆ ಶ್ರೀರಂಗರು ಕಾದಂಬರಿ ಕ್ಷೇತ್ರದಲ್ಲಿಯು ತಮ್ಮದೇ ಆದ ವಿಶಿಷ್ಟ ದಾರಿ ತುಳಿದಿದ್ದಾರೆ. ಅವರ 'ಪುರುಷಾರ್ಥ' ದಲ್ಲಿ ನಿಷ್ಠ ಸ್ವಾತಂತ್ರ್ಯ ಹೋರಾಟಗಾರನ ಚಿತ್ರವಿದೆ. 'ಅನಾದಿ' 'ಅನಂತ' 'ಪ್ರಕೃತಿ' 'ಪುರುಷ' 'ಕುಮಾರಸಂಭವ' 'ವಿಷಚಕ್ರವ್ಯೂಹ' 'ಗೌತಮನ ಶಾಪ' 'ಸೌಜನ್ಯದ ಬೆಲೆ' ಮುಂತಾದ ಇತರ ಒಳ್ಳೆಯ ಕೃತಿಗಳನ್ನಿತ್ತ ಶ್ರೀರಂಗರು 'ಭರಮಪ್ಪನ ಭೂತ' ಎಂಬ ಹೊಸಬಗೆಯ ಪತ್ತೇದಾರಿ ಕಾದಂಬರಿಯನ್ನೂ ಬರೆದಿದ್ದಾರೆ.

'ಬಾಳುರಿ'ಯ ನಂತರ ರಂ.ಶ್ರೀ.ಮುಗಳಿ ಅವರ 'ಕಾರಣ ಪುರುಷ' ಕಾದಂಬರಿಯಲ್ಲಿ ಕರ್ನಾಟಕ ಪ್ರಾಂತೀಯ ಸಮಸ್ಯೆಯಿದೆ. ನಾಡು ಹಂಚಿಹೋದ ಆ ಸಮಯ ಈ ಸಮಸ್ಯೆ ಹೊಸದಾಗಿತ್ತು. ವಿಜಾಪುರ ಜಿಲ್ಲೆಯ ಬರಗಾಲ ಕುರಿತಾದ 'ಅನ್ನ' ಉತ್ತಮ ಕಾದಂಬರಿಗಳ ಸಾಲಿಗೆ ನಿಲ್ಲುವಂತಹುದು.

ನಾ.ಕಸ್ತೂರಿ ಅವರ 'ಗಾಳಿಗೋಪುರ' 'ಚಕ್ರದೃಷ್ಟಿ' ಮತ್ತು 'ಶಂಖವಾದ್ಯ' ಕಾದಂಬರಿಗಳು ಕನ್ನಡದಲ್ಲಿ ಹೊಸ

ಪೂರಿತವಾಗಿ ಬಂದವು. ಇವು ಮುಖ್ಯವಾಗಿ ವಿಡಂಬನಾತ್ಮಕ ಕೃತಿಗಳು. ಕಡೆಂಗೋಡ್ಲು ಶಂಕರಭಟ್ಟರ 'ಧೂಮಕೇತು' ಕಥಾ ಸರಣಿಯಿಂದ ಓದುಗರ ಮನಸ್ಸನ್ನು ಸೆರೆಹಿಡಿಯಿತು. ಪ್ರಾಮಾಣಿಕನ ಬದುಕನ್ನು ಹಾಳುಗೆಡುವಲು ಯತ್ನಿಸಿದ ಹಿತಶತ್ರುಗಳ ಮಧ್ಯದಲ್ಲಿ ದೇವತಾಸ್ವರೂಪಿಯಾಗಿ ನಿಂತ ಶ್ರೀನಿವಾಸರಾಯರ ಬದುಕಿನ 'ದೇವತಾ ಮನುಷ್ಯ' ಕಾದಂಬರಿಯ ಶೈಲಿ ಸುಂದರವಾಗಿದೆ. 'ಲೋಕದ ಕಣ್ಣು' ಶಂಕರಭಟ್ಟರ ಇನ್ನೊಂದು ಒಳ್ಳೆಯ ಕೃತಿ.

ಮನೋವಿಶ್ಲೇಷಣಾತ್ಮಕ ಕಾದಂಬರಿ 'ಅಂತರಂಗ' ತೋರಿದ ನಂತರ ದೇವುಡು ಅವರ ಸಾಮಾಜಿಕ ಕೃತಿಗಳೆಂದರೆ 'ಮಲ್ಲಿ' 'ಎರಡನೆಯ ಜನ್ಮ' 'ಡಾ.ವೀಣಾ' ಈ ಕಾದಂಬರಿಗಳು ಕಾಮಜೀವನದ ಅನೇಕ ಸಮಸ್ಯೆಗಳನ್ನು ಕುರಿತಾಗಿವೆ. ವೈದಿಕ ಸಾಹಿತ್ಯವನ್ನು ಅರಗಿಸಿಕೊಂಡ ದೇವುಡು ಅವರು 'ಮಹಾಬ್ರಾಹ್ಮಣ' 'ಮಹಾಕ್ಷತ್ರಿಯ' 'ಮಹಾದರ್ಶನ' ಈ ಮೂರು ಕಾದಂಬರಿಗಳಲ್ಲಿ ಪುರಾಣ ಕಾಲದ ಜನಜೀವನ, ಸಂಸ್ಕೃತಿ, ರೀತಿನೀತಿಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ವಿಶ್ವಾಮಿತ್ರನ ಕಥೆ 'ಮಹಾಬ್ರಾಹ್ಮಣ' ದಲ್ಲಿಯೂ, ನಹುಷನ ಕಥೆ 'ಮಹಾಕ್ಷತ್ರಿಯ' ದಲ್ಲಿಯೂ, ಯಾಜ್ಞವಲ್ಕ್ಯರ ಕಥೆ 'ಮಹಾದರ್ಶನ'ದಲ್ಲಿಯೂ ಇವೆ. ಕದಂಬ ಮಯೂರ ಶರ್ಮನ ಕುರಿತ 'ಮಯೂರ'ಕಾದಂಬರಿ ದೇವುಡು ಅವರ ಸುಂದರ ಐತಿಹಾಸಿಕ ಕೃತಿಯಾಗಿದೆ.

ಮಾಸ್ತಿ ವೆಂಕಟೇಶ ಅಯ್ಯಂಗಾರರ ' ಸುಬ್ಬಣ್ಣ ' ಕಿರು ಕಾದಂಬರಿಯಾದರೂ ಶ್ರೇಷ್ಠ ಕೃತಿಯು. ಸಂಗೀತಗಾರ ಸುಬ್ಬಣ್ಣನದು ತುಂಬ ಸಾತ್ತ್ವಿಕ ಜೀವನ. ಆತನ ಬದುಕು ಅತ್ಯಂತ ಹೃದಯಂಗಮವಾಗಿ ಚಿತ್ರಿತವಾಗಿದೆ. ಕೆಳದಿ ರಾಜ ಮನೆತನದ ಅಳಿಗಾಲ ಸಮಯ ಕುರಿತಾದ ಕಾದಂಬರಿ 'ಚೆನ್ನ ಬಸವನಾಯಕ' ವಾದರೆ ಕೊಡಗಿನ ಕೊನೆಯ ಅರಸನ ದುರಂತ ಚಿತ್ರವನ್ನು ತೋರಿಸುವುದು'ಚಿಕವೀರ ರಾಜೇಂದ್ರ'-ಈ ಎರಡೂ ಒಳ್ಳೆಯ ಐತಿಹಾಸಿಕ ಕೃತಿಗಳು.

ಎಂ. ಆರ್. ಶ್ರೀನಿವಾಸ ಮೂರ್ತಿಯವರು ಕನ್ನಡಿಗರ ಆಚಾರವಿಚಾರಗಳ ಹಿನ್ನೆಲೆಯಲ್ಲಿ ಪ್ರಥಮವಾಗಿ ' ಸಾವಿತ್ರಿ ' ಎಂಬ ಕಾದಂಬರಿಯನ್ನು ಬರೆದಿದ್ದರು. ಅನಂತರ ಅವರ ಶ್ರೇಷ್ಠಕೃತಿ 'ರಂಗಣ್ಣನ ಕನಸಿನ ದಿನಗಳು.' ಅವರು ಶಾಲಾ ಇನ್ಸಪೆಕ್ಟರ್ ಆಗಿದ್ದಾಗಿನ ಅನುಭವಗಳ ಹಂದರದ ಮೇಲೆ ಇದನ್ನು ನಿರ್ಮಿಸಿದ್ದು. ಆಗಿನ ಗ್ರಾಮೀಣ ಶಿಕ್ಷಕರ ಸ್ಥಿತಿಗತಿಗಳು ನವಿರಾದ ನಗೆಯನ್ನು ತರುವವು. ಎಂ.ಆರ್.ಶ್ರೀ ಅವರು ದಿವಂಗತರಾದ ಮೇಲೆ ಬೆಳಕುಕಂಡ ' ಮಹಾತ್ಯಾಗ ' ಕೂಡ ಒಂದು ಉತ್ತಮ ಕೃತಿಯಾಗಿದೆ.

ಎನ್ಕೆಯವರ ' ಸಾವಿನ ಉಡಿಯಲ್ಲಿ ' 'ಎರಡನೆಯ ಸಂಬಂಧ' ದಾಂಪತ್ಯ ಜೀವನದ ಸರಸವಿರಸಗಳ ಕೌಟುಂಬಿಕ ಕೃತಿಗಳಾಗಿವೆ. 'ಗೌರೀಶಂಕರ' ದಲ್ಲಿ ಅರವಿಂದರ ಆಧ್ಯಾತ್ಮವಿದೆ. 'ವೈನಿ' ಉತ್ತಮ ತರಗತಿಯ ಕೌಟುಂಬಿಕ ಕೃತಿಗೆ ಉದಾಹರಣೆ.

ಗೋಕಾಕರ ಬೃಹತ್ ಕಾದಂಬರಿ: 'ಸಮರಸವೇ ಜೀವನ'

೧೯೩೪ರಲ್ಲಿ ಸ್ವತಂತ್ರಕಾದಂಬರಿಯಾಗಿ ಬಂದ 'ಇಜ್ಜೋಡು' ಪ್ರಕಟವಾದ ಮೇಲೆ ಗೋಕಾಕರು ಅದನ್ನೇ ಮತ್ತೆ ಸಾವಿರ ಪುಟಗಳಿಗೆ ಹಿಗ್ಗಿಸಿ ಸುಮಾರು ಇಪ್ಪತ್ತು ವರ್ಷಗಳ ಅವಧಿಯವರೆಗೆ ಬೆಳೆಸಿದರು. ನಾಲ್ಕು ಪೀಳಿಗೆಗಳ ಸಮಗ್ರ ಕಥೆಯುಳ್ಳ ಈ ಕೃತಿಯೂ ಕೂಡ ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಯಂತೆ ಮಹಾಕಾದಂಬರಿಯಾಗಿ ನಿಂತಿದೆ. ಕುವೆಂಪು ಅವರು ಒಂದೇ ಪಟ್ಟಿಗೆ ತಮ್ಮ ಕಾದಂಬರಿಯನ್ನು ಮುಗಿಸಿದ್ದು 'ಏಕಬಂಧ' ಅವರ ಕಾದಂಬರಿಯಲ್ಲಿದ್ದು, ದೀರ್ಘಾವಧಿಯ ಈ ಕೃತಿಯಲ್ಲಿ ವಸ್ತು ಹಾಗೂ ಶೈಲಿಗಳಲ್ಲಿ ಭಿನ್ನತೆ ಕಾಣಬಹುದು. ಏಳು ವ್ಯಕ್ತಿಗಳ ಬದುಕಿನ ಹರವು, ಜೀವನ ವಿಕಾಸ ಈ ಕಾದಂಬರಿಯಲ್ಲಿ ಮೂಡಿ ನಿಂತಿವೆ. ಆಧುನಿಕ ಕಾದಂಬರಿಯ ಹೊಸ ಪ್ರಯೋಗ, ಪರಂಪರಾಗತ ಜೀವನ ಕಥನ, ಪ್ರಾದೇಶಿಕತೆ ವೈಚಾರಿಕ ಹಿನ್ನೆಲೆ ಇವೆಲ್ಲ ಮನೋವಿಶ್ಲೇಷಣೆಯನ್ನು ಮೇಳವಿಸಿಕೊಂಡು ಇದನ್ನು ಒಂದು ವಿಶಿಷ್ಟ ಕೃತಿಯನ್ನಾಗಿ ಮಾಡಿವೆ.

ವ್ಯಾಯಾಮ ಪಟುಗಳಾದ ಕೆ. ವಿ. ಅಯ್ಯರ್ ಅವರ 'ದೆವ್ವದ ಮನೆ' ಕನ್ನಡ ಕಾದಂಬರಿಗಳಲ್ಲಿ ಹೊಸ ಬಗೆಯದು. ದೆವ್ವಿನ ಅಸ್ತಿತ್ವದ ಬಗೆಗೆ ಮೋಜಿನ ಸ್ಪರ್ಧೆಯ ದುರಂತ ಚಿತ್ರಣ ಎದೆ ನಡುಗಿಸುವಂತಿದೆ. ಇಟಲಿಯ ಖ್ಯಾತ ಚಿತ್ರಕಾರನಾದ ಮೈಕಲ್ ಎಂಜಲೋ ಅವರ ಜೀವನದಲ್ಲಿ ನಡೆದ ಒಂದು ಘಟನೆಯನ್ನು ಕುರಿತಾದ, ಅತೀ ಚಿಕ್ಕದಾದ ಕಥೆಯೊಂದನ್ನು

ಅರಳಿಸಿ ' ರೂಪದರ್ಶಿ ' ಎಂಬ ಶ್ರೇಷ್ಠ ದರ್ಜೆಯ ಕಾದಂಬರಿಯನ್ನು ಅಯ್ಯರ್ ರಚಿಸಿದರು. ಮನುಷ್ಯನ ಪಾಪಪುಣ್ಯಗಳ ಹಾಸುಹೊಕ್ಕಿನ ಕಥೆಯನ್ನು ಕರುಳು ಕಲಕುವಂತೆ ಚಿತ್ರಿಸಿದ್ದಾರೆ. ಅಯ್ಯರರ ಇನ್ನೊಂದು ಕೃತಿ 'ಶಾಂತಲಾ.' ಹೊಯ್ಸಳ ವಿಷ್ಣುವರ್ಧನನ ಅರಸಿ ಶಾಂತಲಾ ದೇವಿಯ ಬದುಕನ್ನು ಚಿತ್ರಿಸುವ ಈ ಸಮತೂಕದ ಕೃತಿ ಕನ್ನಡ ಐತಿಹಾಸಿಕ ಕಾದಂಬರಿಗಳಿಗೆ ಒಂದು ಉತ್ತಮ ಉದಾಹರಣೆಯಾಗಿ ಎತ್ತಿ ಹೇಳಬಹುದಾಗಿದೆ. ಅಯ್ಯರ್ ಅವರ ಇತ್ತೀಚಿನ 'ಸಮುದ್ಯತಾ' ' ಲೀನಾ ' ಕೂಡ ಕಾದಂಬರಿಕಾರರ ಉತ್ತಮ ಪರಂಪರೆಯನ್ನು ಕಾಯ್ದುಕೊಂಡು ಬಂದಿವೆ.

' ದೀಪ ನಿರ್ವಾಣ' ದಿಂದ ಮೊದಲುಗೊಂಡು 'ದೀಪ ಹತ್ತಿತು ' ಎರಡನೆಯ ಭಾಗದ ವರೆಗೆ ಹಲವು ಕಾದಂಬರಿಗಳನ್ನಿತ್ತ ರಾಮಚಂದ್ರ ಕೊಟ್ಟಲಗಿ ಅವರು ಸಮರ್ಥ ಕಾದಂಬರಿಕಾರರು. ಲೈಂಗಿಕ ಸಮಸ್ಯೆಯಿಂದ ದಾಂಪತ್ಯಜೀವನದಲ್ಲಿ ವಿರಸವಾಗಿ, ಕೊನೆಗೆ ವೈದ್ಯನಾಗಿ ತನ್ನ ಬದುಕನ್ನು ರೂಪಿಸಿಕೊಳ್ಳುವ ಓರ್ವ ದಿಟ್ಟ ತರುಣನ ಕಥೆ ' ದೀಪ ನಿರ್ವಾಣ '. ' ದೀಪ ಹತ್ತಿತು ' ಮೂರು ತಲೆಮಾರಿನ ಸಶಕ್ತವಾದ ಬೃಹತ್ ಕಾದಂಬರಿ. ' ವಿಲಾಪಿಕಾ ' ' ನಾನು ಬಾಳ್ಯಾ ಜೋಶಿ ' ' ವೈನಿ ಸತ್ತಾಗ ನಾನ್ಯಾ ಅತ್ತ ' ಇವು ಕೊಟ್ಟಲಗಿ ಅವರ ದಿಟ್ಟ ಪ್ರಯೋಗಗಳು. ಉತ್ತರದ ಗಡಿನಾಡಿನ ಕನ್ನಡವನ್ನು, ಆಡುಮಾತನ್ನು ಸಮರ್ಥವಾಗಿ ಬಳಸಿದ್ದಾರೆ ಕೊಟ್ಟಲಗಿಯವರು.

ವ್ಯಾಸರಾಯ ಬಲ್ಲಾಳರ ‘ ಅನುರಕ್ತೆ ’ ‘ಹೇಮಂತಗಾನ’ ‘ ವಾತ್ಸಲ್ಯ ಪಥ ’ ಈ ಕಾದಂಬರಿಗಳು ಮಹಾನಗರದ ಮಧ್ಯಮ ವರ್ಗದ ಜೀವನವನ್ನು, ಅಲ್ಲಿನ ಯಾಂತ್ರಿಕ ಬದುಕಿಗೆ ಈಡಾದ ಪ್ರೀತಿ ಪ್ರೇಮಗಳ ಹೊಸ ಮುಖಗಳನ್ನೂ ಸಮರ್ಥ ರೀತಿಯಿಂದ ಚಿತ್ರಿಸುತ್ತವೆ.

ಚದುರಂಗರು ತಮ್ಮ ‘ಸರ್ವಮಂಗಳೆ’ ‘ಉಯ್ಯಾಲೆ’ ಕಾದಂಬರಿಗಳಲ್ಲಿ ಗಂಡು ಹೆಣ್ಣಿನ ಸಮಸ್ಯೆಯ ಸೂಕ್ಷ್ಮ ಎಳೆಗಳನ್ನು ಕಲಾತ್ಮಕವಾಗಿ ಬಿಡಿಸಿದ್ದಾರೆ.

ಸಂಖ್ಯೆಯಲ್ಲಿ ಹೆಚ್ಚಿನ ಕಾದಂಬರಿಗಳನ್ನು ಬರೆಯದಿದ್ದರೂ, ಕೆಲವರು ಕನ್ನಡ ಕಾದಂಬರಿಗೆ ಗಮನಾರ್ಹವಾದ ಕಾಣಿಕೆಯನ್ನಿತ್ತಿದ್ದಾರೆ. ಹ. ಪೀ. ಜೋಶಿಯವರ ‘ಮಾವಿನ ತೋಪು’ ಅತೃಪ್ತ ಕಾಮದ ದಾರುಣತೆಯನ್ನು ತೋರಿಸ ಹೊರಟ ಕೃತಿಯಾಗಿದೆ. ಹೇಮಂತರ ‘ ಭಗ್ನಮಂದಿರ ’ ಕಾಲೇಜು ಯುವಕ ವಿದ್ಯಾರ್ಥಿಗಳ ಜೀವನದ ಕಥೆ. ಬೆಳ್ಳಿ ರಾಮಚಂದ್ರರಾಯರ ‘ ಚಿರವಿರಹಿ ’ ಪ್ರೀತಿಯ ಸಮಸ್ಯೆಯೇ ಆಗಿದೆ. ಎಸ್. ಅನಂತನಾರಾಯಣರ ‘ ಅತ್ತಿಗೆ’ ಅತ್ತಿಗೆ-ಮೈದುನರ ವೈಮನಸ್ಸಿನ ಕಥೆಯನ್ನು ಮನೋವಿಶ್ಲೇಷಣೆಯಲ್ಲಿ ಚಿತ್ರಿಸಿದೆ. ವರಗಿರಿಯವರ ‘ ಗಂಗಾಸಾನಿ ’, ಬಾ. ಕೃ. ಲಕ್ಷ್ಮೇಶ್ವರರ ‘ ಗ್ರಾಮ ಪಂಚಾನನ ’, ಶೆ. ಗೋ. ಕುಲಕರ್ಣಿ ಅವರ ‘ ಬೆಳುವಲದ ಭಾಗ್ಯಲಕ್ಷ್ಮಿ ’, ಎಚ್. ದೇವೀರಪ್ಪನವರ ‘ಬೆಳುವಲದ ಮಡಿಲಲ್ಲಿ ’ ಈ ಕೃತಿಗಳಲ್ಲಿ ಗ್ರಾಮೀಣ ಬದು

ಕೆನ್ನು ಕಾಣುತ್ತೇವೆ. ಅಶ್ವತ್ಥರ 'ಮುನಿಯನ ಮಾದರಿ' ಎಂ. ವ್ಹಿ. ಸೀತಾರಾಮಯ್ಯ ಅವರ 'ಮಾದನ ಮಗಳು' ದಲಿತ ಸಮಸ್ಯೆಯನ್ನು ಕುರಿತಾದ ಕಾದಂಬರಿಗಳಾಗಿವೆ. ಅಶ್ವತ್ಥರ ಇನ್ನೊಂದು ಕಾದಂಬರಿ 'ಹಂಬಲ' ರಾಷ್ಟ್ರದ ಪುನರ್ನಿರ್ಮಾಣಕ್ಕೆ ಹಂಬಲಿಸಿದ ತರುಣನೊಬ್ಬನ ಆದರ್ಶ ಜೀವನವಾಗಿದೆ.

ನಾ. ಕಸ್ತೂರಿ ಅವರಂತೆ ಬೀಚಿ, ನಾಡಿಗೇರ ಕೃಷ್ಣರಾಯ ದಾಶರಥಿ ದೀಕ್ಷಿತ, ಎ. ಎಸ್. ಮೂರ್ತಿ ಇವರು ವಿಡಂಬನಾತ್ಮಕ ಹಾಸ್ಯ ಕಾದಂಬರಿಗಳನ್ನು ಕೊಟ್ಟಿದ್ದಾರೆ. ಅದರಂತೆ ಹಲವು ಅನೇಕ ಸಮಸ್ಯೆಗಳ ಸಾಮಾಜಿಕ ಕಾದಂಬರಿಗಳೂ ಇವೆ.

ಬಿ. ಪುಟ್ಟಸ್ವಾಮಯ್ಯನವರು ಹಲವು ಪೌರಾಣಿಕ ಐತಿಹಾಸಿಕ ಕೃತಿಗಳನ್ನು ಕೊಟ್ಟಂತೆ ಬಸವಣ್ಣನವರ ಸಮಕಾಲೀನ ಬದುಕನ್ನು ಚಿತ್ರಿಸುವ 'ಕ್ರಾಂತಿ ಕಲ್ಯಾಣ' ಕಾದಂಬರಿ ಮಾಲಿಕೆಗಳು ಯಶಸ್ವಿ ಕೃತಿಗಳಾಗಿವೆ. ಬಸವಣ್ಣನವರ ಸಮಕಾಲೀನ ಸಾಹಿತ್ಯ, ಸಂಸ್ಕೃತಿ, ರಾಜಕೀಯ, ಧರ್ಮ, ಸಾಮಾಜಿಕ ಜೀವನ, ಆಡಳಿತ ಇವುಗಳನ್ನು ಕುರಿತಾಗಿ ಕಂಡ ಪುಟ್ಟಸ್ವಾಮಯ್ಯನವರ ದೃಷ್ಟಿಯನ್ನು ಮೆಚ್ಚಬೇಕು.

ಭಾರತೀಸುತರು ಕೊಡಗಿನ ಜನಜೀವನವನ್ನು ತಮ್ಮ ಕಾದಂಬರಿಗಳಲ್ಲಿ ಸಮರ್ಥವಾಗಿ ಚಿತ್ರಿಸಿದ್ದಾರೆ. 'ಗಿರಿಕನ್ಯೆ

ಯಲ್ಲಿ ಪೈನಾಡಿನ ಗಿರಿಜನರ ಒಂದು ಪಂಗಡವಾದ ಫಣಿಯರ ಜನಜೀವನ ಯಥಾವತ್ತಾಗಿ ಮೂಡಿದೆ. 'ಹುಲಿಯ ಬೋನು' 'ಚಿಗುರು ಹಾಸಿಗೆ' ಇವುಗಳಲ್ಲಿ ಕೊಡಗು–ಕೇರಳದ ಗಡಿನಾಡಿನ ಜನರ ಬದುಕಿನ ಚಿತ್ರಗಳಿವೆ. ಇವರ ಕಾಮದ ಮತ್ತೊಂದು ಮುಖವನ್ನು ತೋರಿಸುವ, ಮಾನಸಿಕ ತುಮುಲವನ್ನು ಚಿತ್ರಿಸುವ 'ಎಡಕಲ್ಲು ಗುಡ್ಡದ ಮೇಲೆ' ಕಾದಂಬರಿ ಒಂದು ವಿಶಿಷ್ಟ ಕೃತಿಯಾಗಿದೆ.

ಕನ್ನಡದಲ್ಲಿ ಪ್ರಗತಿಶೀಲ ಕಾದಂಬರಿ ಸಾಹಿತ್ಯ :

"ಸಾಹಿತ್ಯ ಮತ್ತು ಕಲಾರಂಗ ನಿತ್ಯ ಜೀವನದ ಅಂಗವಾಗಬೇಕು. ಕಲೆಗಾಗಿ ಕಲೆ, ಕಲೆ ದೈವಿಕವಾದದ್ದು, ಅದು ಮನಸ್ಸಿಗೆ ನೆಮ್ಮದಿ ತರುವ ಸಾಧನ ಎಂಬ ಕಲ್ಪನೆಗಳನ್ನು ನಾವು ಒಪ್ಪುವದಿಲ್ಲ. ಕೃತಿಯಲ್ಲಿ ವ್ಯಕ್ತವಾಗುವ ಅಭಿಮತಕ್ಕೆ ಅಧಿಕ ಪ್ರಾಧಾನ್ಯ. ಮಹಾರಾಜರ ಮೇಲಿನ ಮಹಾಕಾವ್ಯಕ್ಕಿಂತ ದುಡಿವ ಬಡವನ ವಿಚಾರದ ಲಾವಣಿ ನಮ್ಮ ದೃಷ್ಟಿಯಲ್ಲಿ ಶ್ರೇಷ್ಠವಾದುದು" ಇದು ಪ್ರಗತಿಶೀಲ ಸಾಹಿತಿಗಳ ಅಭಿಪ್ರಾಯ. ಈ ಶತಮಾನದ ಮೂರನೆಯ ನಾಲ್ಕನೆಯ ದಶಕದಲ್ಲಿ ಪ್ರಗತಿಶೀಲ ಸಾಹಿತ್ಯ ನಿರ್ಮಾಣದ ಪ್ರಯತ್ನ ಭರದಿಂದ ಸಾಗಿತು.

ಹಿಂದಿನ ಸಂಪ್ರದಾಯಬದ್ಧ ಸಾಹಿತ್ಯದ ಸುಳಿಯಿಂದಲೇ ಹೊರಬಂದು ಹೊಸ ಹಾದಿಯನ್ನು ಈ ಪ್ರಗತಿಶೀಲ ಸಾಹಿತ್ಯ

ತುಳಿಯಿತು. ಭಾರತದ ಸ್ವಾತಂತ್ರ್ಯ ಆಂದೋಲನ, ಮಾರ್ಕ್ಸ್, ಲೆನಿನ್ನರ ತತ್ತ್ವಗಳು, ಮ್ಯಾಕ್ಸಿಂ ಗಾರ್ಕಿ, ಮಯೋವಸ್ಕಿ ಕೃತಿಗಳು ಪ್ರಗತಿಶೀಲ ಸಾಹಿತ್ಯ ರಚನೆಗೆ ಪ್ರೇರಕವಾದವು. ಹಿಂದಿನ ಬಂಗಾಲಿ, ಇಂಗ್ಲೀಷ್, ಉರ್ದು ಈ ಸಾಹಿತ್ಯಗಳಿಂದ ಕನ್ನಡದ ಮೇಲೂ ಪ್ರಗತಿಶೀಲದ ಪ್ರಭಾವ ಮೂಡಿತು. ಉರ್ದು ಭಾಷೆ ಯಲ್ಲಿ ಕೆ. ಎ. ಅಬ್ಬಾಸ್, ಹರೀಂದ್ರನಾಥ ಚಟ್ಟೋಪಾಧ್ಯಾಯ ಕೃಷ್ಣಚಂದ್ರ, ಮುಲ್ಕರಾಜ್ ಆನಂದ ಪ್ರಗತಿಶೀಲದ ಪ್ರವರ್ತಕ ರಾದರು. ಹೊಸ ರಕ್ತದ ಕೆಚ್ಚಿನವರು ಈ ಪ್ರಗತಿಶೀಲ ವಾದಕ್ಕೆ ತೀವ್ರ ಚಾಲನೆಯನ್ನಿತ್ತರು. ಕನ್ನಡದಲ್ಲಿ ಅನಕೃ ಬಸವರಾಜ ಕಟ್ಟೀಮನಿ, ನಿರಂಜನ, ತರಾಸು ಇಂಥ ಸಮರ್ಥ ಕಾದಂಬರಿಕಾರರು ಪ್ರಗತಿಶೀಲದ ಅಮೃತಮಂಥನದಲ್ಲಿ ಮೂಡಿಬಂದರು.

ಸಂಪ್ರದಾಯವಾದಿಗಳಿಂದ ಕಟುವಾದ ವಿರೋಧ ಬಂದರೂ, ಪ್ರಗತಿಶೀಲ ಚಳವಳಿಯಿಂದ ಕನ್ನಡ ಕಾದಂಬರಿ ಗಳ ಮೇಲೆ ಗಣನೀಯ ಪರಿಣಾಮವಾಯಿತು. ಕಾದಂಬರಿ ಗಳು ನಿಜ ಜೀವನಕ್ಕೆ ಹೆಚ್ಚು ಸಮೀಪವಾದವು. ನಿರೂಪಣೆ ಯಲ್ಲಿ ವಾಸ್ತವತೆ ಬೆಳೆಯಿತು. ಪ್ರಗತಿಶೀಲವಾದವು ಅನಂತರ ಕಡಿಮೆಯಾಯಿತಾದರೂ, ಅದರ ದೃಷ್ಟಿ, ನಿಲುವು ಇನ್ನೂ ಉಳಿದಿದ್ದು, ಅನಂತರ ಕನ್ನಡ ಕಾದಂಬರಿ ಹೊಸದೊಂದು ತಿರುವಿಗೆ ಒಳಗಾಗಿ 'ನವ್ಯ'ಕ್ಕೆ ಪಕ್ಕಾಯಿತು.

ಸಂಪ್ರದಾಯವಾದಿಗಳಲ್ಲಿ ಇನ್ನೂ ಹಲವರು :

ಗೊರೂರ ರಾಮಸ್ವಾಮಿ ಅಯ್ಯಂಗಾರರ 'ಮೆರವಣಿಗೆ', 'ಹೇಮಾವತಿ' ವೀರಕೇಸರಿ, ಕೊರಟಿ ಶ್ರೀನಿವಾಸರಾಯರ, ಮ.ನ.ಮೂರ್ತಿ ಅವರ ಕರ್ನಾಟಕ ಮತ್ತು ಭಾರತೀಯ ಇತಿಹಾಸ ಕುರಿತಾದ ಐತಿಹಾಸಿಕ ಕಾದಂಬರಿಗಳು, ರಾ. ಶಿ. ಅವರ ಸಾಮಾಜಿಕ ಕೃತಿಗಳು, ಗೋಪಾಲಕೃಷ್ಣ ಅಡಿಗರ 'ಅನಾಥೆ', ಕೋ. ಚೆನ್ನಬಸಪ್ಪನವರ 'ಪೂರ್ಣಪತಿ', ಜಿ. ಎಸ್. ಶಿವರುದ್ರಪ್ಪ ಅವರ 'ಕರ್ಮಯೋಗಿ' ಸಮೇತನಹಳ್ಳಿ ರಾಮರಾಯರ ಐತಿಹಾಸಿಕ ಕಾದಂಬರಿಗಳು, ಮಾ. ನಾ. ಚೌಡಪ್ಪನವರ 'ಶ್ರೀಕೃಷ್ಣ ಭೂಪಾಲ', ಪ. ಸು. ಭಟ್ಟರ 'ಆತ್ಮಾರ್ಪಣೆ', ನರೇಂದ್ರ ಬಾಬು ಅವರ 'ನಾಲ್ಕನೆಯ ಮನೆ', ಇಂದಿರಾತನಯ, ಭಾರತೀಪ್ರಿಯ, ಸೇವನಮಿರಾಜ ಮಲ್ಲ, ಎನ್. ಸೂರಪ್ಪ ಅವರ ಕೃತಿಗಳು ಬಿಂದುಮಾಧವ ಕುಲಕರ್ಣಿ ಅವರ 'ಬಲೀ ಪೀಠ', 'ಬನವಾಸಿ', 'ಪರದೇಶಿ', 'ಗಂಗೆ ಗೌರಿ', ಸತ್ಯಕಾಮರ ಪೌರಾಣಿಕ ಕಾದಂಬರಿಗಳಾದ 'ಕಪಿಲವಸ್ತು', 'ಋಷಿಪಂಚಮಿ', 'ಬೆಂಕಿಯ ಮಗಳು', 'ಉತ್ತರಾಯಣ', 'ಕೃಷ್ಣಾರ್ಪಣ' ಮತ್ತು ಸಾಮಾಜಿಕ ಕಾದಂಬರಿಗಳಾದ 'ಚಂಡ ಪ್ರಪಂಚ', 'ಪುರುಷ ಸೂಕ್ತ', ಸಿ. ವ. ಚೆನ್ನಬಸವೇಶ್ವರರ 'ಕಲಾಪ್ರಪೂರ್ಣ', ಕಡಿದಾಳ ಮಂಜಪ್ಪನವರ 'ಪಂಜ್ರುವಳ್ಳಿಯ ಪಂಜು', ಶೇಷನಾರಾಯಣರ ಪ್ರಾಣಿ ಜೀವನದ ವಿಶಿಷ್ಟ ಕೃತಿಗಳಾದ

'ಕಪಿಲೆ', 'ಪದ್ಮರಂಗು', 'ಮಹಾಮಲ್ಲರು' ಸಾಮಾಜಿಕ ಕೃತಿಗಳಾದ 'ಮೂಲಾ ನಕ್ಷತ್ರ', 'ನೊರೆ', 'ಎರಡು ಉಂಗುರ', ಜನಾರ್ದನ ಗುರ್ಕಾರರ 'ದಂಬದ ನಾಯಿ' ಇನ್ನೂ ಅನೇಕ ಕಾದಂಬರಿಕಾರರನ್ನು ಕಾದಂಬರಿಗಳನ್ನು ಹೆಸರಿಸಬಹುದು.

ಕುವೆಂಪು ಅವರ ಇತ್ತೀಚಿನ ಮಹಾಕೃತಿ 'ಮಲೆಗಳಲ್ಲಿ ಮದುಮಗಳು' ಕೂಡ ಅವರ ಮುಂಚಿನ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಅಂತೆ ಮಲೆನಾಡಿನ ಒಂದು ಅದ್ಭುತ ಕಥೆಯ ಮಹತ್ತ್ವದ ಕಾದಂಬರಿಯಾಗಿದೆ. ಪುಟ್ಟಪ್ಪನವರ ಅನುಭವದ ವಿಸ್ತಾರ, ಭಾಷೆಯ ಕಸುವು, ಪಾತ್ರಗಳ ವೈವಿಧ್ಯ ವನ್ನು ಇದರಲ್ಲಿ ದಟ್ಟಾಗಿ ಕಾಣುತ್ತೇವೆ.

ಇದು ಎಪ್ಪತ್ತು ವರ್ಷಗಳ ಹಿಂದಿನ ಮಲೆನಾಡು ಜೀವನಕ್ಕೆ ಸಂಬಂಧಿಸಿದ್ದು. ಇದರ ಶೈಲಿ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಅಂತೆಯೇ ಇದ್ದರೂ ಇಲ್ಲಿ ಬರವಣಿಗೆಯ ಸಂಯಮ, ಅರಿವಿನ ಸಾರ್ಥಕ ಉದ್ದೇಶವನ್ನು ಕಾಣುತ್ತೇವೆ. ಈ ಕಾದಂಬರಿಯಲ್ಲಿಯೂ ಕೂಡ ಮಣ್ಣಿನ ವಾಸನೆ ಚೆನ್ನಾಗಿ ಹೊಡೆಯುತ್ತದೆ. ಬೇಸರು ಬರದಂತೆ ಪ್ರಕೃತಿ ವರ್ಣನೆ ಹಿತಮಿತವಾಗಿದೆ. ಪ್ರಕೃತಿಯ ಚೆಲುವು, ಭಯಂಕರತೆ, ಕ್ರೌರ್ಯವನ್ನು ಕುವೆಂಪು ಕಣ್ಣಿಗೆ ಕಟ್ಟುವಂತೆ ಹೆಣೆದಿದ್ದಾರೆ. ಈ ನಿಸರ್ಗದ ಪರಿಸರಕ್ಕೆ ಹೊಂದಿ ಬದುಕುವ ಮಾನವನ ಆಚಾರ, ರೀತಿ, ನೀತಿ, ಲೈಂಗಿಕ ಹಸಿವು, ಸಾಮಾಜಿಕ ಆಗು

ಹೋಗುಗಳ ಬಗೆಗೆ ಇಲ್ಲಿನವರ ನಿಷ್ಕಾಳಜಿ, ಇವುಗಳನ್ನು ಸುಂದರವಾಗಿ ಚಿತ್ರಿಸಿದ್ದಾರೆ. ಆದರೆ ಕಾದಂಬರಿಯ ಉತ್ತರಾರ್ಧದಲ್ಲಿ ಬರುವ, ಮಾಯವಾಗುವ ಸಂನ್ಯಾಸಿ, ಅಮೇರಿಕೆಯಲ್ಲಿರುವ ವಿವೇಕಾನಂದರಿಗೆ ಅಂತಜ್ಞಾನದಿಂದಾಗುವ ಇಲ್ಲಿನ ಅರಿವು, ಪೂರ್ವಜನ್ಮದ ಸ್ಮರಣೆ ಇವು ಕೃತ್ರಿಮವೆನಿಸುತ್ತವೆ.

ಕಾದಂಬರಿ ಭೂಮಿಯಲ್ಲಿ ಮಹಿಳೆಯರ ಕೃಷಿ :

ಕನ್ನಡದ ಆದ್ಯ ಕಾದಂಬರಿಕಾರ್ತಿ ನಂಜನಗೂಡಿನ ತಿರುಮಲಾಂಬಾ ಅವರ ನಂತರ ಮಹಿಳೆಯರು ಒಂದಿಷ್ಟು ವಿಲಂಬ ಮಾಡಿ ಕಾದಂಬರಿ ಕೃಷಿಗೆ ತೊಡಗಿದರು. ದೇಶಕ್ಕೆ ಸ್ವಾತಂತ್ರ್ಯ ಬಂದ ಬಳಿಕವೇ ಹೆಚ್ಚಾಗಿ ಸ್ತ್ರೀಯರು ಕಾದಂಬರಿ ನಿರ್ಮಿತಿಗೆ ಗಮನ ಹರಿಸಿದ್ದು ವಿಶೇಷ. ಇಂದಿನ ಕಾದಂಬರಿಕಾರ್ತಿಯರ ಸಂಖ್ಯೆ ಗಣನೀಯವಾಗಿದ್ದು ಒಮ್ಮೊಮ್ಮೆ ಪುರುಷ ಕಾದಂಬರಿಕಾರರನ್ನು ಮೀರಿಸಬಹುದೇನೋ ಎನ್ನುವಂತೆ, ಮಹಿಳೆಯರು ಭರದಿಂದ ಬರೆಯತೊಡಗಿದ್ದಾರೆ. ಕನ್ನಡ ಪತ್ರಿಕೆಗಳು ಧಾರಾವಾಹಿ ಕಾದಂಬರಿ ವಿಭಾಗ ಪ್ರಾರಂಭಿಸಿ ಮಹಿಳೆಯರಿಗೆ ತುಂಬ ಅನುಕೂಲತೆ ಒದಗಿಸಿವೆ. ಒಮ್ಮೆ ಆಕಸ್ಮಿಕ ಎಂಬಂತೆ ಧಾರಾವಾಹಿ ಪ್ರಕಟಿಸುವ ಎಲ್ಲ ಹತ್ತಾರು ಪತ್ರಿಕೆಗಳನ್ನು ಮಹಿಳೆಯರೇ ಆಕ್ರಮಿಸಿಕೊಂಡಿದ್ದುಂಟು.

ಗಂಡು ಹೆಣ್ಣಿನ ಮನೋವೈಜ್ಞಾನಿಕ ಸಮಸ್ಯೆಗಳು, ಹೆಣ್ಣಿನ ಮನಸ್ಸಿನ ಒಳ ಪದರಗಳನ್ನು ತೆರೆ-ತೆರೆಯಾಗಿ ತೆರೆದಿಟ್ಟ

ರೀತಿ, ಗಂಡಿನ ಅನ್ಯಾಯವನ್ನು ಪ್ರತಿಭಟಿಸುವ ಹೆಣ್ಣಿನ ಎದೆಗಾರಿಕೆ, ಹೆಣ್ಣಿನ ಛಲ, ಹಟ ಇವುಗಳನ್ನು ನಾವು ತ್ರಿವೇಣಿ ಅವರ ಕಾದಂಬರಿಗಳಲ್ಲಿ ಕಾಣುತ್ತೇವೆ. ಶ್ರೀಮತಿ ತ್ರಿವೇಣಿ ಅವರು ಹೆಣ್ಣಿನ ಹಲವು ಮುಖದಿಂದ ತೋರಿದ ನಿಷ್ಠುರ ಸತ್ಯ ಒಪ್ಪುವಂತಹುದು. 'ಅಪಸ್ವರ' 'ಬೆಕ್ಕಿನ ಕಣ್ಣು' 'ಬೆಳ್ಳಿ ಮೋಡ' 'ಹಣ್ಣೆಲೆ ಚಿಗುರಿದಾಗ' 'ಶರಪಂಜರ' 'ಕೀಲು ಗೊಂಬೆ' ಮೊದಲಾದ ಕಾದಂಬರಿಗಳು ತ್ರಿವೇಣಿ ಅವರು ಕನ್ನಡಕ್ಕೆ ಕೊಟ್ಟ ಕಾಣಿಕೆಗಳಾಗಿವೆ. ತ್ರಿವೇಣಿ ಅವರ ಅಲ್ಪಾಯುಷ್ಯ ಕನ್ನಡ ಕಾದಂಬರಿ ಕ್ಷೇತ್ರಕ್ಕೆ ತುಂಬಿ ಬಾರದ ಹಾನಿ.

ಹುಡುಗಿಯರ ಹಾಸ್ಟೇಲ್ ಜೀವನ ಚಿತ್ರಿಸುವ 'ಕನಸಿನ ಕಡೆ' ಸಾಮಾಜಿಕ ಸಮಸ್ಯೆಗಳನ್ನು ವಿಶ್ಲೇಷಿಸುವ 'ನಿಂದೆಯ ನೆಲೆ' 'ಮಾಯದ ಬಲೆ' ಇನ್ನೂ ಕೆಲ ಕಾದಂಬರಿಗಳನ್ನಿತ್ತ ಎಂ. ಕೆ. ಜಯಲಕ್ಷ್ಮಿ ಅವರ ಅಕಾಲ ಮರಣ ಕೂಡ ಕನ್ನಡಕ್ಕಾದ ಒಂದು ಹಾನಿ.

ಅನುಪಮಾ ನಿರಂಜನರು ಸ್ವತಃ ವೈದ್ಯರು. ವೈದ್ಯಕೀಯ ಕ್ಷೇತ್ರದ ವಿವಿಧ ಮುಖಗಳ ಪರಿಚಯವನ್ನು ಅವರು 'ಶ್ವೇತಾಂಬರಿ' ಯಲ್ಲಿ ಸಮರ್ಥ ರೀತಿಯಲ್ಲಿ ಮಾಡಿದ್ದಾರೆ. ಗಂಡು ಹೆಣ್ಣಿನ ಸ್ವಾತಂತ್ರ್ಯ ಕಡಿದ ಮೇಲೆ ನರಳುತ್ತಿರುವ ಹೆಣ್ಣಿನ ಸಮಸ್ಯೆಯನ್ನು, ಸ್ತ್ರೀ ಸ್ವಾತಂತ್ರ್ಯ ಸಮಸ್ಯೆಯನ್ನು 'ಸಂಕೋಲೆಯೊಳಗಿಂದ' ಈ ಕಾದಂಬರಿಯಲ್ಲಿ ಕಾಣಬಹುದು.

ನಗರಕ್ಕೆ ಬೇಸತ್ತು ಹಳ್ಳಿಗೆ ಹೋಗುವ ನೇಕಾರನ ಜೀವನ ಚಿತ್ರ 'ನೂಲು ನೇಯ್ದ ಚಿತ್ರ'ದಲ್ಲಿದೆ. 'ರೂವಾರಿ ಲಕ್ಷ್ಮಿ' 'ಸ್ನೇಹ ಪಲ್ಲವಿ' 'ಹೃದಯವಲ್ಲಭ' ಇವು ಅನುಪಮಾ ನಿರಂಜನ ಅವರ ಒಳ್ಳೇ ಕೃತಿಗಳು.

ಎಂ. ಕೆ. ಇಂದಿರಾ ಅವರು ವಿಲಂಬ ಮಾಡಿ ಕಾದಂಬರಿ ಕ್ಷೇತ್ರದಲ್ಲಿ ಕಾಲಿರಿಸಿದರೂ ಅಂತಃಸತ್ವ ತುಂಬಿದ ಕಾದಂಬರಿ-ಗಳನ್ನೇ ಕೊಟ್ಟಿದ್ದಾರೆ. ಅವರು 'ತುಂಗಭದ್ರ' 'ಸದಾನಂದ' 'ಮುಸುಕು' 'ಬಿದಿಗೆ ಚಂದ್ರಮ ಡೊಂಕು' 'ನಾಗವೀಣಾ' ಇನ್ನೂ ಹತ್ತಾರು ಕಾದಂಬರಿಗಳನ್ನು ಬರೆದಿದ್ದು ವೇಶ್ಯಾ ಜೀವನದ ವಿಷ ವರ್ತುಲದಿಂದ ಹೊರಗೆ ಪಾರಾಗಲೆತ್ನಿಸುವ ತರುಣಿಯ ಚಿತ್ರ 'ಗೆಜ್ಜೆಪೂಜೆ' ಪ್ರಖ್ಯಾತಿ ಪಡೆಯಿತು.

ಸಣ್ಣ ಕಥೆಗಳ ನಂತರ ಕಾದಂಬರಿಗೆ ಕೈಯಿಕ್ಕಿದ ಗೀತಾ ಕುಲಕರ್ಣಿ ಅವರ 'ಕಂಬನಿ ಒರೆಸಿದ ಕೈ' 'ಸ್ವಪ್ನ ಮಂದಿರ' 'ದೀಪ ಮಿಂಚಿತು' 'ಶೋಭನಾ' ಇವು ಕೌಟುಂಬಿಕ ಬದು-ಕನ್ನು ಚಿತ್ರಿಸುವ ಒಳ್ಳೆಯ ಕಾದಂಬರಿಗಳಾಗಿವೆ. ವಾಣಿಯವರ 'ಎರಡು ಕನಸು' 'ಹೊಸ ಬೆಳಕು' 'ಕಾವೇರಿಯ ಮಡಿ-ಲಲ್ಲಿ' ತ್ರಿವೇಣಿ ಅವರ ಸಹೋದರಿ ಆರ್ಯಾಂಬ ಪಟ್ಟಾಭಿಯವರ 'ಕಪ್ಪು ಬಿಳುಪು' 'ಆ ಹಾಡು' 'ಸವತಿಯ ನೆರಳು' 'ಬದುಕಿನ ಬವಣೆ' ಇವುಗಳಲ್ಲಿಯೂ ಗಂಡು ಹೆಣ್ಣಿನ ಸಮಸ್ಯೆ-ಗಳ ವಿಶ್ಲೇಷಣೆಯಿದೆ.

'ಮುಡಿಯೇರಿದ ಹೂವು' 'ಮೊಗ್ಗಿನ ಜಡೆ' 'ಮುರಿದ ಸರಪಳಿ' 'ಹೃದಯ ಬೆಳಗಿತು' ಮುಂತಾದ ಹತ್ತೆಂಟು ಕಾದಂಬರಿಗಳನ್ನು ರಚಿಸಿದ ಉಷಾದೇವಿಯವರು ಮಾನಸಿಕ ವಿಪರೀತ ಸಮಸ್ಯೆಗಳನ್ನು ಯಶಸ್ವಿಯಾಗಿ ವಿಶ್ಲೇಷಿಸಿದ್ದಾರೆ.

ನೀಳಾದೇವಿಯವರ 'ಕಾಗದದ ಚೂರು' ಎಂ. ಸಿ. ಪದ್ಮ ಅವರ 'ಸುಪ್ರಭಾತ' ರೇವತಿ ಕಲ್ಯಾಣ ಕುಮಾರ ಅವರ 'ಭಾವ', ಪ್ರೇಮಾ ಭಟ್ಟರ 'ಮಲ್ಲಿಗೆ ಮುಡಿಗೇರಿತು' 'ಹೂಬಿಸಿಲು', ಎಚ್. ಎಸ್. ಪಾರ್ವತಿ ಅವರ 'ನೇಸರು ನೆರಳು' ಎಸ್. ಪಂಕಜಾ ಅವರ 'ಇನ್ನು ಬರಲೇ ಯಮುನೆ' ಎಂ. ಪಂಕಜಾ ಅವರ 'ಕಾಗದದ ದೋಣಿ', ವಸಂತಾದೇವಿ ಅನಕೃ ಅವರ 'ಜೀವರಥ', ಆನೇಕಲ್ ಶಾರದಾ ಅವರ 'ವಕೀಲ ವೈದೇಹಿ', ಇವಲ್ಲದೆ ಇದೇ ಲೇಖಕಿಯರು ಬರೆದ ಇನ್ನೂ ಅನೇಕ ಕಾದಂಬರಿಗಳು, ಇನ್ನೂ ಅನೇಕ ಲೇಖಕಿಯರ ಪಟ್ಟಿ ದೀರ್ಘವಾಗುವಂತೆ ಬೆಳೆಯುತ್ತ ಬಂದಿವೆ.

ಸರೋಜಾ ನಾರಾಯಣರಾವ್, ಕೆ. ಸರೋಜಾರಾವ್, ಲಲಿತಾಂಬಾ ಚಂದ್ರಶೇಖರ್, ಶ್ರೀಮತಿ ಕಡಿದಾಳ ಮಂಜಪ್ಪ, ಸಾವಿತ್ರಿದೇವಿ ನಾಯ್ಡು, ಪಂಕಜ ಶ್ರೀನಾಥ, ಕೆ. ಶಾಂತಾ, ಟಿ. ಶಾಂತ, ಸರಿತಾಜ್ಞಾನಾನಂದ, ಪುಷ್ಪಾ ಎನ್. ಎಸ್. ರಾವ್ ನಿರುಪಮಾ, ವಿಶಾಲಾಕ್ಷಿ ದಕ್ಷಿಣಾಮೂರ್ತಿ, ಪ್ರೇಮಲತಾ ಚ. ಸುಂದರೇಶನ್, ಎಚ್. ಆರ್. ಇಂದಿರಾ, ಎಸ್. ಮಂಗಳಾ

ಸತ್ಯನ್, ಕಾಂತಾ ಸುಧಾಕರ ಹೀಗೆ ಮಹಿಳಾ ಕಾದಂಬರಿಕಾರ್ತಿಯರ ಹೆಸರಿನ ಪಟ್ಟಿ ಹನುಮನ ಬಾಲದಂತಿದೆ.

ಇಂದಿನ ಮಹಿಳಾ ಕಾದಂಬರಿಕಾರ್ತಿಯರ ಬಗೆಗೆ ಒಂದು ಮಾತು ಹೇಳಬೇಕಾದರೆ, ಬಹಳಷ್ಟು ಜನ ಲೇಖಕಿಯರು ತಾವು ಆಯ್ಕೆ ಮಾಡಿದ ವಸ್ತುವಿನ ಆಳಕ್ಕೆ ಹೋಗುವದಿಲ್ಲ. ಬದುಕಿನ ಅನೇಕ ಮುಖಗಳ ಸಮಸ್ಯೆಯನ್ನು, ಅದರಲ್ಲಿಯೂ ಸ್ತ್ರೀ ಜೀವನ, ಪ್ರೀತಿ ಪ್ರೇಮಗಳ ಸಮಸ್ಯೆಗಳನ್ನು ಎತ್ತಿಕೊಂಡರೂ ಮೇಲೆ ಮೇಲೆಯೇ ಕೈಯಾಡಿಸಿ, ಕೃತಕ, ಅವಾಸ್ತವ ಆದರ್ಶದ ಬಗೆಗೆ ಉಪನ್ಯಾಸ ಬಿಗಿಯುವ ತೆರ ಕಾದಂಬರಿಗಳನ್ನು ನಿರ್ಮಿಸುತ್ತ ಲಿದ್ದಾರೆ. ಇವರ ಕಾದಂಬರಿಗಳಲ್ಲಿ ಗಾಢ ಜೀವನಾನುಭವ, ಸಾಹಿತ್ಯಿಕ ಮೌಲ್ಯಗಳು ಕಡಿಮೆ. ಬಹಳಷ್ಟು ಕಾದಂಬರಿಗಳು ಇನ್ನೂ ಅಪಕ್ವವಾಗಿಯೇ ಉಳಿಯುತ್ತವೆ. ಹಲವು ಜನ ಪುರುಷ ಕಾದಂಬರಿಕಾರರೂ ಈ ಮಾತಿಗೆ ಹೊರತಾಗುವುದಿಲ್ಲ.

ಹೊಸ ಜನಾಂಗದ ಕಾದಂಬರಿಗಳು :

ಹೊಸ ಕಾದಂಬರಿಕಾರರಲ್ಲಿ ಯಾವ ಹಣೆಪಟ್ಟಿಯನ್ನು ಕಟ್ಟಿಕೊಳ್ಳದೆ ಧ್ವನಿಪೂರ್ಣ, ಸತ್ತ್ವಶಾಲಿ ಕಾದಂಬರಿಗಳನ್ನು ನಿರ್ಮಿಸುತ್ತಿರುವವರಲ್ಲಿ ಡಾ. ಎಸ್. ಎಲ್. ಭೈರಪ್ಪ ಮತ್ತು ಡಾ. ಎಚ್. ತಿಪ್ಪೇರುದ್ರಸ್ವಾಮಿ ಇವರನ್ನು ಹೆಸರಿಸಬೇಕು. 'ಧರ್ಮಶ್ರೀ' 'ದೂರಸರಿದರು' ಕೊಟ್ಟಮೇಲೆ ಡಾ. ಸಂತೇ ಶಿವರ ಲಿಂಗಣ್ಣನವರ ಭೈರಪ್ಪನವರು ಕನ್ನಡದಲ್ಲಿ ಪ್ರತಿಭಾ

ಪೂರ್ಣ ಕೃತಿಯಾದ 'ವಂಶವೃಕ್ಷ' ವನ್ನು ಕೊಟ್ಟು ಕಾದಂಬರಿ ರಾಜ್ಯದಲ್ಲಿ ಶಾಶ್ವತ ಪಟ್ಟವನ್ನು ಸ್ಥಾಪಿಸಿಕೊಂಡರು.

ಹಿಂದು ಯುವಕನೊಬ್ಬ ಕ್ರೈಸ್ತನಾಗಿ ಮತಾಂತರ ಹೊಂದಿದ ಮೇಲೆ ಸಂಭವಿಸಬಹುದಾದ ಸಾಂಸ್ಕೃತಿಕ ಘರ್ಷಣೆ ಬಹು ಪರಿಣಾಮಕಾರಿಯಾಗಿ 'ಧರ್ಮಶ್ರೀ' ಯಲ್ಲಿ ಮೂಡಿ ಬಂದಿದೆ. ಸ್ತ್ರೀ ಪುರುಷರ ಪ್ರೇಮದ ವಿಶ್ಲೇಷಣೆ ಮತ್ತು ಬೌದ್ಧಿಕ ಸಾಹಚರ್ಯದ ಹಂಬಲ 'ದೂರಸರಿದರು' ಇದರಲ್ಲಿದೆ.

'ವಂಶವೃಕ್ಷ' ಎಲ್ಲ ವರ್ಗದ ಸಾಹಿತ್ಯಪ್ರಿಯರ ಗಮನವನ್ನು ಸೆಳೆದ ಒಂದು ಶ್ರೇಷ್ಠ ಕೃತಿಯಾಗಿದೆ. ಅರ್ಧ ಶತಮಾನಕ್ಕೂ ಹಿಂದಿನ ಕಥೆ ಮೈಸೂರು-ನಂಜನಗೂಡು ಪ್ರದೇಶದಲ್ಲಿ ಬೆಳೆದು ಒಂದು ಶತಮಾನದ ಬದುಕನ್ನೇ ಪುನರ್ನಿರ್ಮಿಸುತ್ತದೆ.

ಪ್ರಾಚೀನ ಕಾಲದಿಂದಲೂ ಭಾರತೀಯ ಸಂಸ್ಕೃತಿಯಲ್ಲಿ ಪರಂಪರೆಯಾಗಿ ಬಂದ ಗೋವಿನ ಬಗೆಗಿದ್ದ ಪೂಜ್ಯ ಭಾವನೆ ಇಂದಿನ ಪಾಶ್ಚಾತ್ಯರ ಅನುಕರಣದಲ್ಲಿ, ಯಾಂತ್ರಿಕ ಯುಗದಲ್ಲಿ ಬದಲಾಗಿ ಹೊಸ ಸ್ಥಾನ ಪಡೆಯುತ್ತಿರುವುದನ್ನು 'ತಬ್ಬಲಿಯು ನೀನಾದೆ ಮಗನೆ' ಈ ಕಾದಂಬರಿಯಲ್ಲಿ ವಿಶ್ಲೇಷಿಸಲಾಗಿದೆ. 'ಜಲಪಾತ' ಕಲಾವಿದನೊಬ್ಬನ ಬದುಕಿನ ಚಿತ್ರವಾದರೆ 'ಮತದಾನ' ಇಂದಿನ ರಾಜಕೀಯ ಸತ್ಯ ಚಿತ್ರಣ

ವಾಗಿದೆ. 'ಗೃಹಭಂಗ' ಕೂಡ ಅರ್ಧಶತಮಾನದ ಹಿಂದಿನ ಕಥೆ. ತಿಪಟೂರು ಚನ್ನರಾಯಪಟ್ಟಣಗಳ ಪ್ರದೇಶದ ಹಿನ್ನೆಲೆಯಲ್ಲಿದೆ. ಗ್ರಾಮದ ಶಾನುಭೋಗನ ಬಡ ಸಂಸಾರದ ಕಷ್ಟ ಪರಂಪರೆಯ ಕಥೆ ಕಲಾತ್ಮಕವಾಗಿ ಮೂಡಿಬಂದಿದೆ. 'ನಾಯಿ ನೆರಳು' ಮತ್ತು 'ನಿರಾಕರಣ' ಕೂಡ ಉತ್ತಮ ದರ್ಜೆಯ ಕೃತಿಗಳು. ಪುನರ್ಜನ್ಮದ ನಂಬುಗೆಯ ಮೇಲೆ ನಿಂತ ಕಾದಂಬರಿ 'ನಾಯಿ ನೆರಳು'. ಆದರೆ 'ನಿರಾಕರಣ'ದಲ್ಲಿ ಬದುಕಿಗೆ ಬೇಸತ್ತು ಏಕಾಕೀತನವನ್ನು ಹುಡುಕಲು ಹೊರಟ ವ್ಯಕ್ತಿ ಹೇಗೆ ಅಪಯಶಸ್ಸನ್ನು ಸಾಧಿಸಿದ ವೇದಾಂತಿಯ ಏಳುಬೀಳಿನ ಚಿತ್ರವಿದೆ. ಸಂನ್ಯಾಸ ಆಶ್ರಮ ತ್ಯಜಿಸಿ ವಿವಾಹವಾಗಲು ಸ್ವಾಮಿಗಳೊಬ್ಬರು ನಿರ್ಧರಿಸಿದ ಕಥಾವಸ್ತುವಿನ ಮೇಲೆ ಅವಲಂಬನವಾದ 'ಗ್ರಹಣ' ಕಾದಂಬರಿ ಸಂಪ್ರದಾಯ ಹಾಗೂ ವಾಸ್ತವಿಕತೆಗಳ ನಡುವಿನ ತಾಕಲಾಟವನ್ನು ಚಿತ್ರಿಸುತ್ತದೆ.

ಭೈರಪ್ಪನವರ ಇತ್ತೀಚಿನ ಕಾದಂಬರಿ 'ದಾಟು' ದಲಿತ ಸಮಸ್ಯೆಯ ಅಡಿಪಾಯದ ಮೇಲೆ ನಿಂತಿದ್ದು 'ವಂಶವೃಕ್ಷ'ದಂತೆ ಬಹು ಚರ್ಚೆಗೆ ಒಳಗಾಗಿದೆ. ಮೂಲಭೂತವಾದ ಜಾತಿ ಪದ್ಧತಿಯನ್ನು ಉಚ್ಚಾಟನೆ ಮಾಡಲಿಚ್ಛಿಸುವ ಶಕ್ತಿಗಳ, ದಲಿತ ಸಮಸ್ಯೆಯ ಈ ಕೃತಿ ವಸ್ತುವಿನಿಂದ ದಿಟ್ಟ ಕಾದಂಬರಿಯಾಗಿದೆ.

ಪರಂಪರೆಯನ್ನು 'ದಾಟು'ವ ಕ್ರಿಯೆಯನ್ನು ಇಲ್ಲಿಯ ಪ್ರಮುಖ ಪಾತ್ರಗಳು ಮಾಡುವ ಸಾಹಸಕ್ಕೆ ತೊಡಗುವುದು ಈ ಕಾದಂಬರಿಯ ವೈಶಿಷ್ಟ್ಯ. ಆದರೆ ಸತ್ಯ ಒಬ್ಬಳನ್ನು

ಬಿಟ್ಟು ಹೀಗೆ ದಾಟಿದ ಎಲ್ಲ ಪಾತ್ರಗಳೂ ದೈಹಿಕ ದುರಂತತೆ ಯಲ್ಲಿ ಇಲ್ಲವೆ ಬುದ್ಧಿಭ್ರಮಣೆಯಲ್ಲಿ ಕೊನೆಗೊಳ್ಳುತ್ತವೆ. 'ದಾಟು' ಜಾತಿಯ ವಿರುದ್ಧ, ಶೋಷಣೆಯ ವಿರುದ್ಧ, ಅಸಮಾನತೆಯ ವಿರುದ್ಧ ಕ್ರಾಂತಿ ಸಾರುವ ಕೃತಿಯಾಗಿದೆ. ಈ ಕಾದಂಬರಿಯ ಕೊನೆಯಲ್ಲಿ ಬರುವ 'ಜಲಪ್ರಳಯ' ದ ಪ್ರಸಂಗ ಸಾಂಕೇತಿಕವಾಗಿದೆ. ನಾಳಿನ ಸಾಮಾಜಿಕ ಪರಿಸ್ಥಿತಿಯ ಅಲ್ಲೋಲ ಕಲ್ಲೋಲವನ್ನು ಈ ಸಂದರ್ಭ ಸೂಚಿಸುತ್ತದೆ. ಪುರಾಣ, ಸಮಾಜಶಾಸ್ತ್ರ, ಜಾನಪದ, ಧರ್ಮ, ತತ್ತ್ವ ಮತ್ತು ಸಮ ಕಾಲೀನತೆ ಈ ಎಲ್ಲ ಹಿನ್ನೆಲೆಗಳಿಂದ ಜಾತೀಯತೆಯ ಪ್ರಶ್ನೆ ಯನ್ನು ಅತ್ಯಂತ ಸಮರ್ಥವಾಗಿ ವಿಶ್ಲೇಷಿಸುವ ಈ ಕಾದಂಬರಿ ಕನ್ನಡ ಕಾದಂಬರಿಗಳಲ್ಲಿ ಹೊಸದು.

ಭೈರಪ್ಪನವರು ಎಲ್ಲ ದೃಷ್ಟಿಯಿಂದ ಸಾಹಿತಿಯಾದ ತತ್ತ್ವಶಾಸ್ತ್ರಜ್ಞರು. ಎಂತಲೇ ಇವರ ಎಲ್ಲ ಕೃತಿಗಳಲ್ಲಿ ಭಾರತೀಯ ತತ್ತ್ವವನ್ನು ಮಾನದಂಡವಾಗಿಟ್ಟು, ಸಾಮಾಜಿಕ ಪರಿವರ್ತನೆಯನ್ನು ಅಳೆದು ನೋಡುವ ಪ್ರಯತ್ನ ಕಾಣುತ್ತದೆ.

ವೀರಶೈವ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿದ ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು ವೈರಾಗ್ಯಮೂರ್ತಿ ಅಕ್ಕ ಮಹಾದೇವಿಯ ಬದುಕನ್ನು 'ಕದಳಿ ಕರ್ಪೂರ' ದಲ್ಲಿ ಹೊಸ ದೃಷ್ಟಿಯಿಂದ ಕಂಡು ದಿವ್ಯವಾಗಿ ಚಿತ್ರಿಸಿದ್ದಾರೆ. ಮಹಾಜ್ಞಾನಿ ಅಲ್ಲಮ ಪ್ರಭುವಿನ ಭವ್ಯ ವ್ಯಕ್ತಿತ್ವವನ್ನು 'ಪರಿಪೂರ್ಣದೆಡೆಗೆ' ಕಾದಂಬರಿಯಲ್ಲಿ ಕಾಣುತ್ತೇವೆ. ನಿರುಪಮಜ್ಞಾನಿ ನಿಜಗುಣ

ಶಿವಯೋಗಿಗಳ ಬದುಕು 'ಜ್ಯೋತಿ ಬೆಳಗುತಿದೆ' ಕಾದಂಬರಿಯಲ್ಲಿ ಸುಂದರವಾಗಿ ಒಡಮೂಡಿದೆ. 'ಸತ್ಯಾಶ್ರಯ ಸಾಮ್ರಾಜ್ಯ' ಇದು ಕರ್ನಾಟಕ ಸಾಮ್ರಾಟ ಪುಲಕೇಶಿಯ ಜೀವನ ಕುರಿತಾದ ಐತಿಹಾಸಿಕ ಕಾದಂಬರಿಯಾಗಿದೆ.

ಬಸವಣ್ಣನವರ ಮಹಾನ್ ಬದುಕನ್ನು ಪರಿಪೂರ್ಣವಾಗಿ ಚಿತ್ರಿಸುವ ಮೂರು ಸಂಪುಟಗಳ ಮಹಾ ಕಾದಂಬರಿ 'ಕರ್ತಾರನ ಕಮ್ಮಟ' ಕನ್ನಡಕ್ಕೆ ಹೊಸ ಕೊಡುಗೆಯಾಗಿದೆ. ಮಹಾಶರಣ ಬಸವಣ್ಣನವರ ಸತ್ತ್ವಪೂರ್ಣ ವ್ಯಕ್ತಿತ್ವವನ್ನು ತಿಪ್ಪೇರುದ್ರ ಸ್ವಾಮಿಯವರು ಅಚ್ಚುಕಟ್ಟಾಗಿ ಇತಿಹಾಸಕ್ಕೆ ಅಪಚಾರವಾಗದೆ ಪ್ರಾಮಾಣಿಕವಾಗುವಂತೆ ರೂಪಿಸಿದ್ದು ವಿಶೇಷವಾಗಿದೆ.

ಯಾವ ಗುಂಪಿಗೂ ಸೇರದೆ ಹೊಸ ದೃಷ್ಟಿಯಿಟ್ಟುಕೊಂಡು ಕಾದಂಬರಿ ಬರೆಯುತ್ತಿರುವವರಲ್ಲಿ ಟಿ. ಕೆ. ರಾಮರಾವ್, ಜನಾರ್ದನ ಗುರ್ಕಾರ್, ಸೂರ್ಯನಾರಾಯಣ ಚಡಗ, ರಂ. ಶಾ. ನಾ. ಡಿಸೋಜ, ವಿಶುಕುಮಾರ, ದೇವೇಂದ್ರ ಕುಮಾರ ಹಕಾರಿ ಜಯತೀರ್ಥ ರಾಜಪುರೋಹಿತ, ಮೈ. ಸು. ಶೇಷಗಿರಿರಾವ,, ಮ. ನ. ಮೂರ್ತಿ, ಎಸ್. ವ್ಹಿ. ಶ್ರೀನಿವಾಸರಾವ್, ಶ್ರೀನಿವಾಸ ಉಡುಪ, ರಮಾತನಯ ಮುಂತಾದವರು ಮುಖ್ಯರು. ಇನ್ನೂ ಅನೇಕ ಜನ ಲೇಖಕರು ಕಾದಂಬರಿಗಳನ್ನು ಅವ್ಯಾಹತವಾಗಿ ನಿರ್ಮಿಸುತ್ತಿದ್ದಾರೆ.

ಟಿ. ಕೆ. ರಾಮರಾವ್ ಅವರ ಸಾಮಾಜಿಕ ಕಾದಂಬರಿಗಳಂತೆ ಪತ್ತೇದಾರಿ ಕಾದಂಬರಿಗಳೂ ಕೂಡ ತುಂಬ ಜನಪ್ರಿಯವಾಗಿವೆ. ಸೂರ್ಯನಾರಾಯಣ ಚಡಗರ 'ಸೀಮಂತಿನಿ' ಸೂಳೆಯ

ಮಗಳೊಬ್ಬಳು ಯಕ್ಷಗಾನ ಕಲಾವಿದನಿಗೆ ಒಲಿದ ಕಥೆಯಾಗಿದೆ. 'ಗಂಗಾ ಭವಾನಿ' ಹಳ್ಳಿಯ ಶಿಕ್ಷಕನೊಬ್ಬನ ದುರಂತ ಚಿತ್ರ. 'ಮನೆತನ' ಚಡಗರ ಕಾದಂಬರಿಗಳಲ್ಲಿ ಎತ್ತಿ ಹೇಳಬಹುದಾದ ಕೃತಿಯಾಗಿದೆ. ದ. ಕನ್ನಡ ಜಿಲ್ಲೆಯ ನಲವತ್ತು ವರ್ಷಗಳ ಹಿಂದಿನ ಯಥಾವತ್ತಾದ ಗ್ರಾಮೀಣ ಬದುಕು ಇಲ್ಲಿದೆ. ಕಾದಂಬರಿಯ ವಸ್ತು ಗಟ್ಟಿಯಾಗಿ ಸುಂದರ ಚಿತ್ರಣವಾಗಿದೆ.

ರಂ. ಶಾ. ಅವರ 'ಸಾವಿತ್ರಿ' ಉತ್ತರ ಕರ್ನಾಟಕ-ಮಹಾರಾಷ್ಟ್ರಕ್ಕೆ ಹೊಂದಿದ ಗಡಿಯ ಗ್ರಾಮೀಣ ಸಂಸಾರದ ಹಿನ್ನೆಲೆಯಲ್ಲಿ ಚಿತ್ರಿತವಾದ ಒಂದು ಸತ್ತ್ವಶಾಲಿ ಕೃತಿಯಾಗಿದೆ. ಇವರ 'ತಾಯಿ ಸಾಹೇಬ' ವತನದಾರ ಮನೆತನದಲ್ಲಿನ ಸವತಿಯರ ದತ್ತಕ ಪ್ರಕರಣದ ಕತೆ ನ್ಯಾಯಾಲಯದ, ನ್ಯಾಯ ಪ್ರಕರಣವೊಂದರ ಆಧಾರಿತವಾಗಿದ್ದು ಪ್ರಭಾವಶಾಲಿ ಕೃತಿ.

ವಿಶುಕುಮಾರರ ಕಾದಂಬರಿಗಳಲ್ಲಿ 'ಕರಾವಳಿ' ಎದ್ದು ಕಾಣುವಂತಹುದು. ಕಡಲುತೀರದ ಮೊಗೇರ (ಮೊಗವೀರ)ರ ಬದುಕಿನ ಹಿನ್ನೆಲೆಯಲ್ಲಿ ರೂಪಗೊಂಡ ಇದು ತುಂಬ ಆಕರ್ಷಕ ಹಾಗೂ ಸತ್ತ್ವಶಾಲಿ ಬರವಣಿಗೆಯಾಗಿದೆ. ದೇವೇಂದ್ರ ಕುಮಾರ ಹಕಾರಿ ಅವರ 'ಚೆಲ್ವಕೋಗಿಲೆ' ನಿಜಗುಣ ಶಿವಯೋಗಿಗಳ ಬದುಕನ್ನು ಕುರಿತಿದ್ದು ಉತ್ತಮ ಕೃತಿ. ಇವರ ಇನ್ನೊಂದು ಕಾದಂಬರಿ ರಾಷ್ಟ್ರಕೂಟ ಅರಸರ ಆಶ್ರಯದಲ್ಲಿ ಕೆಲಸಮಾಡುತ್ತಲಿದ್ದ ಕಾಲ್ಪನಿಕ ಕಲಾವಿದನೊಬ್ಬನ ಹೃದ್ಯಕಥೆ 'ಕೂಗುತಿವೆ ಕಲ್ಲು.' ಜಯತೀರ್ಥ ರಾಜಪುರೋಹಿತರ 'ಸುಳಿಗಾಳಿ' ನೈಜಾಮ

ಕರ್ನಾಟಕದಲ್ಲಿನ ಹಿಂದಿನ ಆಳರಸರ ಕಾಲದ ಸಂಸ್ಥಾನೀ ಬದುಕಿನ ಒಂದು ವಾಸ್ತವ ಚಿತ್ರಣವಾಗಿದ್ದರೆ, 'ಜೋಹರಾ' ಕೂಡ ಅದೇ ಪರಿಸರದ ಮೂನ್ನೂರು ವರುಷಗಳ ಹಿಂದಿನ ಐತಿಹಾಸಿಕ ಕೃತಿಯಾಗಿದೆ. ಇವರ 'ಹಾಲುಜೇನು' ಕೂಡ ಹೈದ್ರಾಬಾದ ಸಂಸ್ಥಾನದ ಪರಿಸರದ ಕೃತಿ.

ತಲೆಮಾರಿನಿಂದ ತಲೆಮಾರಿಗೆ ಮಾನವ ತಳೆಯುತ್ತ ಬಂದಿರುವ ವಿವಿಧ ಸ್ವರೂಪ, ವಿವಿಧ ಪ್ರವೃತ್ತಿಗಳ ಸಂಕೇತ ನಾ. ಡಿಸೋಜ ಅವರ ಕಾದಂಬರಿ 'ಮಾನವ' ಸುಂದರವಾಗಿದೆ. ಎಚ್. ಎಲ್. ನಾಗೇಗೌಡರ 'ದೊಡ್ಡಮನೆ' ದೊಡ್ಡ ಕಾದಂಬರಿ.ಮೈಸೂರು ಪ್ರದೇಶದ ಬಯಲು ಸೀಮೆಯ ಒಕ್ಕಲು ಮಕ್ಕಳ ಬದುಕಿನ ಎರಡು ತಲೆಮಾರಿನ ಕಥೆಯಿದೆ. ಗ್ರಾಮೀಣ ಬದುಕಿನ ಎಲ್ಲ ಮುಖಗಳೂ ಇಲ್ಲಿ ಹಾಸುಹೊಕ್ಕಾಗಿವೆ. ಆದರೆ ಸತ್ತ್ವದ ತೂಕ ಮಾತ್ರ ಇನ್ನೂ ಬೇಕಿತ್ತು ಎನಿಸುತ್ತಿದೆ.

ಇಂದು ದಲಿತ ಸಮಸ್ಯೆಯ ಸೂತ್ರಗಳಾಗಿ ಬಂದ ಭೈರಪ್ಪನವರ 'ದಾಟು' ಅನಂತಮೂರ್ತಿ ಅವರ 'ಭಾರತೀಪುರ' ದು.ನಿಂ. ಬೆಳಗಲಿ ಅವರ 'ಹಡೆದವರು,' ರಾವ್‌ಬಹಾದ್ದೂರರ 'ದೇವದಾಸಿ' ಈ ಕಾದಂಬರಿಗಳಿಗಿಂತ ಮುಂಚೆ ಹರಿಜನರ ಸಮಸ್ಯೆಗಳ ಹಲವು ಮುಖಗಳನ್ನು ಕಾಣಿಸುವ ಶಿವರಾಮ ಕಾರಂತರ 'ಚೋಮನ ದುಡಿ' ಕೆ.ಎ.ಎನ್. ರಾವ್ (ಅಶ್ವತ್ಥ) ಅವರ 'ಮುನಿಯನ ಮಾದರಿ,' ಎಂ. ವ್ಹಿ. ಸೀತಾರಾಮಯ್ಯ

ಅವರ ' ಮಾದನ ಮಗಳು ' ಬಸವರಾಜ ಕಟ್ಟೀಮನಿ ಅವರ 'ನೀ ನನ್ನ ಮುಟ್ಟಬೇಡ' ಮುಂತಾದವುಗಳು ಬಂದಿವೆ.

ಕಾದಂಬರಿ ಮಾರ್ಗದಲ್ಲಿ ಹೊಸತಿರುವು

ಮಾನವನ ಬದುಕಿನ ರೀತಿನೀತಿಗಳು ಬದಲಾದಂತೆ, ವೈಚಾರಿಕ ಸ್ತರಗಳು ಭಿನ್ನವಾದಂತೆ ಸಾಹಿತ್ಯಸ್ವರೂಪವೂ ಬದಲಾವಣೆ ಹೊಂದುವುದು ಸಹಜ. ಹೊಸದಾಗಿ ಬಂದ ಸಾಹಿತ್ಯ ಸ್ವರೂಪ ಬರುಬರುತ್ತ ಸಂಪ್ರದಾಯವಾಗುತ್ತದೆ. ಈಗ ಪ್ರಗತಿಶೀಲ ಸಂಪ್ರದಾಯವೂ ಹಳೆ ತರಗತಿಗೆ ಇಳಿದಂತೆ ನಾಳೆ ' ನವ್ಯ ' ಕೂಡ ಹಳೆಯದಾಗಬಹುದು. ಪಾಶ್ಚಾತ್ಯ ಶಿಕ್ಷಣ ಸಂಸ್ಕೃತಿಯ ಪ್ರಭಾವ, ಆಧುನಿಕ ಪ್ರಜ್ಞೆ ಕನ್ನಡ ಸಾಹಿತ್ಯದ ಮೇಲೂ ಆಗಿದೆ. ಸಾಂಪ್ರದಾಯಿಕ ಮತ್ತು ರೂಢಿಗತ ಸಾಹಿತ್ಯದಿಂದ ಭಿನ್ನವಾಗಿ ಹೊಸ ಧೋರಣೆಗೆ ಹಮ್ಮಿಕೊಂಡು ಕನ್ನಡದಲ್ಲಿ 'ನವ್ಯ ' ಪ್ರಾರಂಭದಲ್ಲಿ ಕಾವ್ಯಕ್ಕೆ ಅಂಟಿಕೊಂಡಿತು. ಅನಂತರ ಕಥಾ ಪ್ರಪಂಚದಲ್ಲಿಯೂ ' ನವ್ಯ ' ಕಾಲೂರಿತು. ಈಗ ನಾಟಕ ಕಾದಂಬರಿಗಳಲ್ಲಿಯೂ ಈ ಹೊಸತನ ಸೇರಿಕೊಂಡಿದೆ. ಈಗ ' ನವ್ಯ ' ಜಾತಿಗೆ ಸೇರಿದ ಕಾದಂಬರಿಗಳು ಕನ್ನಡವಲ್ಲಿ ಬಹುಸಂಖ್ಯೆಯಲ್ಲಿ ಬರದಿದ್ದರೂ ಒಂದಿಷ್ಟು ತಮ್ಮ ವೈಶಿಷ್ಟ್ಯದೊಂದಿಗೆ ಸತ್ತ್ವಪೂರ್ಣವಾಗಿ ಬರುತ್ತಲಿವೆ.

ಸಾಮ್ಯುಯೆಲ್ ಬೆಕೆಟ್, ಸ್ಟಾಲಿಂಗರ್, ಅಲ್ಬರ್ಟ ಕಾಮೂ, ಜೀನ್ ಪಾಲ್ ಸಾತ್ರ್ರ ಇವರ ಪ್ರಭಾವ ಪ್ರೇರಣೆ ಕನ್ನಡಕ್ಕಿಳಿದು, 'ನವ್ಯ' ಬಿರುಗಾಳಿ ಬೀಸಿತು. ಇವರ ಯಾವ

ಪ್ರಭಾವಕ್ಕೊ ಇಳಿಯದ ಸ್ವತಂತ್ರ ಕನ್ನಡ ಕಾದಂಬರಿಕಾರರು,– ಕಾದಂಬರಿಕಾರರೇ ಅಲ್ಲವೆನ್ನುವಷ್ಟು ಈ ಬಿರುಗಾಳಿಗೆ ಸಿಕ್ಕ ಕೆಲ ನವ್ಯರು ಧೂಳು, ಮಣ್ಣು ತುಂಬಿದ ಕಣ್ಣುಗಳನ್ನು ತಿಕ್ಕಿಕೊಳ್ಳು ತ್ತಲಿದ್ದಾರೆ. ಪ್ರಾಮಾಣಿಕವಾಗಿ ಕನ್ನಡದ ಮಣ್ಣಿನವರೇ ಆದ ಇತರ ದಿಟ್ಟ ಕಾದಂಬರಿಕಾರರನ್ನೂ ತಿಳಿಗಣ್ಣಿನಿಂದ ನೋಡಲೇ ಬೇಕಾಗಿದೆ. ಇಲ್ಲವಾದರೆ ಇವರೆಲ್ಲರ ಮಾತು ಗಾಳಿ ಮಾತಾಗ ಬಾರದು.

೧೯೩೪ ರಲ್ಲಿಯೇ ಪ್ರಕಟವಾದ ಶ್ರೀರಂಗರ 'ವಿಶ್ವಾ ಮಿತ್ರನ ಸೃಷ್ಟಿ' ಕನ್ನಡದ ಪ್ರಥಮ ನವ್ಯ ಕಾದಂಬರಿಗೆ ಅನ್ವ ಗುಣವಾಗಿದೆಯೆಂದು ಹೇಳುತ್ತಾರೆ. ಶ್ರೀರಂಗರು ಅಲ್ಲಿನ ನಾಯಕ ನಾರಾಯಣನನ್ನು ಕೇಂದ್ರ ಪ್ರಜ್ಞೆಯಾಗಿರಿಸಿಕೊಂಡು ಕಥೆ ಹೇಳುವುದರ ಮೂಲಕ ಪ್ರಜ್ಞಾ ಪ್ರವಾಹದ (Stream of Consciousness) ತಂತ್ರವನ್ನು ಯಶಸ್ವಿಯಾಗಿ ಬಳಸಿಕೊಂಡಿ ದ್ದಾರೆ. ಆದರೆ ಇದು ಆಕಸ್ಮಿಕ ಎಂದು ಹೇಳಬೇಕು.

೧೯೫೭ರಲ್ಲಿ ಪ್ರಕಟವಾದ ಶಂಕರ ಮೊಕಾಶಿ ಪುಣೇಕರ ಅವರ 'ಗಂಗವ್ವ ಮತ್ತು ಗಂಗಾಮಾಯಿ' ಹೊಸದಾರಿ ಹಿಡಿದ ಕಾದಂಬರಿಯಾಗಿದೆ. ಈ ಕಾದಂಬರಿಯ ಪಾತ್ರಗಳು ಕೇವಲ ಭಾವನಾಜೀವಿಗಳಾಗದೆ ಕಾದಂಬರಿಕಾರರ ಕಟ್ಟಿಗೆ ಬೀಳದೆ ಸ್ವತಂತ್ರವಾಗಿದ್ದು, ಈ ಕೃತಿ ಮೊಕಾಶಿಯವರ 'ನವ್ಯತೆ' ಯನ್ನು ಎತ್ತಿ ತೋರಿಸುತ್ತದೆ.

ಶಿವರಾಮ ಕಾರಂತರ ಇತ್ತೀಚಿನ ಕಾದಂಬರಿಗಳಲ್ಲಿ ಕೂಡ ಆಧುನಿಕ ಪ್ರಜ್ಞೆಯನ್ನು ಕಾಣಬಹುದು. 'ಅಳಿದ ಮೇಲೆ'

'ಮೈಮನಗಳ ಸುಳಿಯಲ್ಲಿ' 'ಕೇವಲ ಮನುಷ್ಯರು' ಇವುಗಳಲ್ಲಿ ಹೊಸ ಆಯಾಮವನ್ನು ಗುರುತಿಸುತ್ತೇವೆ.

ಈ ದಿಶೆಯಲ್ಲಿ ಕುಸುಮಾಕರ ದೇವರಗೆಣ್ಣೂರ ಅವರ ಎರಡು ಕಾದಂಬರಿಗಳನ್ನು ಹೆಸರಿಸಬಹುದು. ಇವರ 'ಮುಗಿಯದ ಕಥೆ'ಯಲ್ಲಿ ಮಾನಸಿಕ ದೌರ್ಬಲ್ಯವುಳ್ಳ ಶಾಲಾಶಿಕ್ಷಕನ ಚಿತ್ರಣ ಪರಿಣಾಮಕಾರಿಯಾಗಿದೆ. 'ನಾಲ್ಕನೆಯ ಆಯಾಮ' ದಲ್ಲಿ ಸ್ವತಂತ್ರವಾದ ಸಾರ್ಥಕ ಬಾಳನ್ನು ಹೊಂದಬೇಕೆಂಬ ಮಹತ್ವಾಕಾಂಕ್ಷೆಯುಳ್ಳ ತರುಣನ ಮಾನಸಿಕ ತೊಳಲಾಟ ಸಮರ್ಥವಾಗಿ ಬಂದಿದೆ.

ಶಾಂತಿನಾಥ ದೇಸಾಯಿ ಅವರ ' ಮುಕ್ತಿ ' ಕಾದಂಬರಿ ಎಲ್ಲ ರೀತಿಯಿಂದಲೂ ' ನವ್ಯ ' ಎಂದು ಹೇಳಬೇಕು. ಮೇಲೆ ಹೇಳಿದ ಮೊದಲಿನ ಕಾದಂಬರಿಕಾರರು ತಮ್ಮ ಕೃತಿಗಳಲ್ಲಿ ಹೊಸ ಆಯಾಮಗಳನ್ನು ಕಾಣಿಸಿದ್ದರೆ, ' ಮುಕ್ತಿ' ನವ್ಯದ ದೃಷ್ಟಿಗಳಾದ ತಂತ್ರ, ವಸ್ತು, ಮನೋಧರ್ಮಗಳನ್ನು ಪೂರ್ತಿಯಾಗಿ ಹೊಂದಿದೆ. ಇಲ್ಲಿ ಲೈಂಗಿಕ ಸಮಸ್ಯೆಯನ್ನು ನಿರಾತಂಕವಾಗಿ ಚರ್ಚಿಸಿದ್ದಾರೆ. ದೇಸಾಯಿ ಅವರ ಅನಂತರದ ' ವಿಕ್ಷೇಪ ' ಕೂಡ ನವ್ಯದಲ್ಲಿ ಒಂದು ಗಮನಾರ್ಹ ಕೃತಿಯಾಗಿದೆ. ಯುವಜನಾಂಗ ಪ್ರಜ್ಞೆಯ ಈ ಕಾದಂಬರಿಯಲ್ಲಿ ಇಂದಿನ ಯುವಜನಾಂಗದ ಪ್ರತಿನಿಧಿಯಾದ ನಾಯಕ ರಾಹುಲನ ಮಾನಸಿಕ ತೊಳಲಾಟ ಆತನ ವ್ಯಕ್ತಿತ್ವಕ್ಕೆ ಸಂವಾದಿಯಾಗಿ ಬಂದಿದೆ.

ಯಶವಂತ ಚಿತ್ತಾಲರ 'ಮೂರು ದಾರಿಗಳು' ಕಾದಂಬರಿಯಲ್ಲಿ ಎದುರಾದ ಸಮಸ್ಯೆಯನ್ನು ಮೂರು ದಾರಿಯಿಂದ

ಮೂವರು ಭಿನ್ನ ಮನೋಭಾವನೆಗಳಿಂದ ಕಂಡಿದ್ದಾರೆ. ಅವರ ದೃಷ್ಟಿಗೆ ಸಮರ್ಪಕ ಪರಿಹಾರ ಕಾಣುವದಿಲ್ಲ. ಇದೇ ದಿಶೆಯಲ್ಲಿ ಕಾದಂಬರಿಕಾರರದೊಂದು ಹೊಸರೀತಿಯ ಮಾರ್ಗದರ್ಶನವೊಂದಿದೆ. ಭೀತಿ, ಆದರ್ಶ, ಬಂಡಾಯ ಇವು ಮನುಷ್ಯನ ಮನಸ್ಸು, ಕೃತಿಗಳ ಮೇಲೆ ಹೇಗೆ ಪ್ರಭಾವ ಬೀರುತ್ತಿವೆಯೆಂಬುದನ್ನು ಚಿತ್ತಾಲರು ಕಲಾತ್ಮಕವಾಗಿ ನಿರೂಪಿಸಿದ್ದಾರೆ.

ಬಹು ಚರ್ಚಿತ ಕಾದಂಬರಿ : ಸಂಸ್ಕಾರ

ಕನ್ನಡದಲ್ಲಿ ಬಹು ಚರ್ಚೆಗೆ ಒಳಗಾದ ಕಾದಂಬರಿಯೆಂದರೆ ಯು. ಆರ್. ಅನಂತಮೂರ್ತಿ ಅವರ ' ಸಂಸ್ಕಾರ '. ಇದು ತುಂಬಾ ಸತ್ತ್ವಶಾಲಿಸಾಹಿತ್ಯ ಕೃತಿಯೆಂದು ಈಗಾಗಲೇ ಹೆಸರು ಪಡೆದಿದೆ. ಕೆಲ ಸಾಹಸಿ ಕನ್ನಡ ಯುವಜನರಿಂದ ಚಲಚ್ಚಿತ್ರಕ್ಕೆ ರೂಪಿಸಲ್ಪಟ್ಟು ಮತ್ತೆ ವಿವಾದಕ್ಕೊಳಗಾಗಿ, ರಾಷ್ಟ್ರದ ಅತ್ಯುನ್ನತ ಗೌರವ ಪಡೆಯಿತಲ್ಲದೆ ವಿದೇಶದಲ್ಲಿಯೂ ಖ್ಯಾತಿ ಗಳಿಸಿ ಕನ್ನಡಕ್ಕೆ ಕೀರ್ತಿ ತಂದಿತು.

ಸಂಸ್ಕಾರ ಬರೆಯುವ ವೇಳೆಗೆ ಫ್ರಾನ್ಸಿನ ಜೀನ್ ಪಾಲ್ ಸಾತ್ರ್ರ್, ಭಾರತೀಯ ಜೇ. ಕೃಷ್ಣಮೂರ್ತಿ, ಪಾಶ್ಚಾತ್ಯ ತತ್ತ್ವಜ್ಞಾನಿಯಾದ ಹೇಗಲ್ ಮತ್ತು ರಶಿಯಾದ ಕಾರ್ಲ್ ಮಾರ್ಕ್ಸ್ ಇವರು ತಮ್ಮ ಮೇಲೆ ಪ್ರಭಾವ ಬೀರಿದ್ದಾರೆಂದು ಅನಂತಮೂರ್ತಿಯವರು ಹೇಳಿಕೊಂಡಿದ್ದಾರೆ.

ದುರ್ವಾಸಪುರ ಅಗ್ರಹಾರದಲ್ಲಿ ಸತ್ತುಬಿದ್ದ ಅಧರ್ಮಿ ನಾರಾಣಪ್ಪನ ಶವ ಸಂಸ್ಕಾರದ ಪ್ರಶ್ನೆ ಬಹು ದೊಡ್ಡ ಸಮಸ್ಯೆ

ಯಾಗಿ ನಿಂತಾಗ, ಆ ಪ್ರಶ್ನೆಗೆ ಪರಿಹಾರವನ್ನು ಕಂಡುಹಿಡಿಯುವ ಹೊಣೆಯನ್ನು ಹೊತ್ತ ಕಾದಂಬರಿಯ ಕೇಂದ್ರ ಪ್ರಜ್ಞೆ ನಿಷ್ಠ ಬ್ರಾಹ್ಮಣರಾದ ಪ್ರಾಣೇಶಾಚಾರ್ಯರು ಆಕಸ್ಮಿಕವಾಗಿ ನಾರಣಪ್ಪ ಸೂಳೆಯೊಡನೆ ಸಂಬಂಧ ಮಾಡುತ್ತಾರೆ. ಅನಂತರ ನೊಂದ ಆಚಾರ್ಯರು ಈ ಪಾಪ ಪರಿಹಾರಕ್ಕೆ ನಡೆಸಿದ ಮಂಥನದಲ್ಲಿ ಆತ್ಮಸಂಸ್ಕಾರವೊಂದು ಉದ್ಭವಿಸಿ ಪರಿಹಾರ ನೀಡುತ್ತದೆ. ಇದು ಕಥಾವಸ್ತು. ಬದುಕಿನ ಮೂಲಭೂತ ಪ್ರಶ್ನೆಗಳ ಅರಿವು, ಸಂದಿಗ್ಧ ಮಾನಸಿಕ ಹೋರಾಟವನ್ನು ಎಳೆಎಳೆಯಾಗಿ ಬಿಡಿಸಿದ ಕುಶಲತೆ, ಜೀವಂತ ಭಾಷೆ ಇವು ಗಳಿಂದ ಸಂಸ್ಕಾರ ಸತ್ತ್ವಯುತ ಕೃತಿಯಾಗಿದೆ.

ಅನಂತಮೂರ್ತಿಯವರ ಇತ್ತೀಚಿನ 'ಭಾರತೀಪುರ' ಕಾದಂಬರಿ ಕೂಡ ಕುತೂಹಲಕಾರಿಯಾದ ಕೃತಿಯಾಗಿದೆ. ಅಸ್ಪೃಶ್ಯರ ಬಗೆಗೆ ಅನುಕಂಪವಿರುವ ಈ ಕಾದಂಬರಿಯ ಕೇಂದ್ರವ್ಯಕ್ತಿ ಮಂಜುನಾಥ, ಇಂಗ್ಲಂಡಿಗೆ ಹೋಗಿಬಂದ ಜಗನ್ನಾಥ ಇವರ ಪರಸ್ಪರ ವಿರೋಧಿ ಮನೋಭಾವನೆಗಳಲ್ಲಿ ಜಗನ್ನಾಥ ಊರಿನ ಹರಿಜನರನ್ನು ಹಿಂದುಗಳ ದೇವಾಲಯ ಪ್ರವೇಶ ಮಾಡಿಸುವುದರಲ್ಲಿ ಆಕಸ್ಮಿಕ ಘಟನೆಯೊಂದರಿಂದ ಸೋತು ಹೋಗುತ್ತಾನೆ. ಸಮಾಜವಾದದ ಹೊಸ ಸ್ವರೂಪದ ಪ್ರಯತ್ನವೊಂದನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ. " ಈ ದೇಶದಲ್ಲಿ ಕ್ರಾಂತಿ ಸಾಧ್ಯವಿಲ್ಲ. ಇದು ನಿಂತ ನೀರು" ಎಂಬುದು ಈ ಕಾದಂಬರಿಯ ಒಟ್ಟು ನೀತಿ.

ನವ್ಯದಲ್ಲಿ ಪಿ. ಲಂಕೇಶರ 'ಬಿರುಕು' ಕೂಡ ಗಮನಾರ್ಹ ವಾದ ಕೃತಿ. ಈ ಕಾದಂಬರಿಯ ಕೇಂದ್ರಪ್ರಜ್ಞೆ ಬಸವರಾಜ ಬೂರ್ಜ್ವಾ ಸಮಾಜದಿಂದ ಹೇಸಿಕೊಂಡು ಅಸಮಾಧಾನ ತಾಳಿ ಅಸಹಾಯಕನಾಗುತ್ತಾನೆ. ಫ್ರೆಂಚ ತತ್ತ್ವಜ್ಞಾನಿ, ಸಾಹಿತಿ ಆಧುನಿಕ ಯುರೋಪಿನ ವಿಚಾರವಂತ ಆಲ್ಬರ್ಟ್ ಕಾಮೂ ವಿನ 'The Fall' ಕಾದಂಬರಿಯನ್ನು ಪೂರ್ಣಚಂದ್ರ ತೇಜಸ್ವಿಯವರು ಕನ್ನಡದಲ್ಲಿ 'ಸ್ವರೂಪ'ವಾಗಿ ರೂಪಾಂತರಿಸಿ ದಂತೆ 'The Outsider' ಕಾದಂಬರಿಯನ್ನು ಡಿ. ಎ. ಶಂಕರ ಅವರು ಅನುವಾದಿಸಿದ್ದಾರೆ. ಮಾನವ ಜೀವನದ ಅರ್ಥಹೀನತೆ, ಬದುಕಿನ ಆತಂಕಗಳೆದುರು ವ್ಯಕ್ತಿಯ ನಿತ್ಯ ಹೋರಾಟ ಇವು ಕಾಮೂವಿನ ಕೃತಿಯ ವಸ್ತುಗಳು.

ಆರ್ಯ ಅವರ 'ಗುರು' ಆಧುನಿಕ ಪ್ರಜ್ಞೆಯ ಕಾದಂಬರಿ ಮನೋವಿಶ್ಲೇಷಣೆಯಲ್ಲಿ ತನ್ನದೇ ಆದ ಒಂದು ದಾರಿ ಯನ್ನು ಕಂಡಿದೆ. ಸಂಪ್ರದಾಯದ ಜಾಡ್ಯದ ಎದುರುಬಿದ್ದ ಆನಂದನಿಗೆ ಇಲ್ಲಿ ದೇವರು, ಧರ್ಮ ಇವು ಸವಾಲಾಗುವಂತೆ ಕಾಮವೂ ಕೂಡ ಒಂದು ಸವಾಲಾಗಿ ನಿಲ್ಲುತ್ತದೆ.

ಈಚೆಗೆ ಬಂದ ಇನ್ನೊಂದು ಮಹತ್ವದ ಕಾದಂಬರಿ ಯೆಂದರೆ ಗಿರಿಯವರ 'ಗತಿಸ್ಥಿತಿ'. ಅನಂತಮೂರ್ತಿಯವರ 'ಸಂಸ್ಕಾರ'ದ ನಂತರ ತೀರ ವಿಮರ್ಶೆಗೆ ಒಳಗಾದ ಕೃತಿಯಿದು. ಕಾದಂಬರಿಯ ಆತ ಮತ್ತು ಆತನ ಸಂಗಡಿಗಳಾದ ಆಕೆ ಸೆವೆಯು ಊರಿನ ವಿಚಿತ್ರವೃತ್ತದಲ್ಲಿ ಸಿಕ್ಕು ತೊಳಲಾಡುತ್ತ ಕೊನೆಗೆ

ಅವರಿಬ್ಬರೂ ಆ ವೃತ್ತ ಕಿತ್ತುಕೊಂಡು ಅಲ್ಲಿಂದ ಓಡಿಹೋಗುವ ಎತ್ತುಗಡೆಯಿದೆ. ಅವನಿಗೆ ನೌಕರಿಗಾಗಿ ಆಜ್ಞೆ ಬಂದೂ ನೌಕರಿ ಕೈಸೇರದಂತಹ ಜಾಲ, ನೌಕರಿ ಸಿಕ್ಕರೂ ಗುಲಾಮಗಿರಿಯಲ್ಲಿ ಅವಳು ಇರಲಾರದ ವಿಷವೃತ್ತದಲ್ಲಿ ಒದ್ದಾಡುವ ಚಿತ್ರಣ ಕಲಾತ್ಮಕವಾಗಿ ಒಡಮೂಡಿ ಬಂದಿದೆ.

ಮೈಸೂರು ಪ್ರದೇಶದ ಗ್ರಾಮವೊಂದರ ದುರಂತ ಪ್ರಸಂಗದ ಶ್ರೀಕೃಷ್ಣ ಆಲನಹಳ್ಳಿ ಅವರ 'ಕಾಡು' ಪ್ರಾದೇಶಿಕ ಸತ್ತ್ವದಿಂದ ಪರಿಣಾಮಕಾರಿ ಕಾದಂಬರಿಯಾಗಿದೆ. ಈ ಕೃತಿ ಮುಗ್ಧನಾದ ಬಾಲಕನೊಬ್ಬ ಕಂಡ ಬದುಕಿನ ನೋಟ-ವಿದೆ. ಆತ ಕಾಣುವ ಸಾವು ಮತ್ತು ಕಾಮ ಆ ಪುಟ್ಟ ಹೃದಯದ ಮೇಲೆ ವಿಲಕ್ಷಣ ಪರಿಣಾಮ ಬೀರಿವೆ. ಕೆಲವೇ ಪುಟಗಳಲ್ಲಿ ಅನೇಕ ಘಟನೆಗಳು, ಅದೆಷ್ಟೋ ವ್ಯಕ್ತಿಗಳು ಸಮರ್ಥವಾಗಿ ಮೂಡಿ ಬಂದಿದ್ದು ಈ ಕೃತಿಯ ವೈಶಿಷ್ಟ್ಯ.

ಉತ್ತರ ಕನ್ನಡ ಜಿಲ್ಲೆಯ ಗ್ರಾಮವೊಂದರಲ್ಲಿ ರಾತ್ರಿ ಸಂಚರಿಸುವ ಮೋಹಿನಿಯ (ಭೂತ) ಬಗೆಗೆ ಅನೇಕ ಕಥೆಗಳು ಹುಟ್ಟಲು ಕಾರಣ, ಊರಿನ ಚೆಲುವೆ ಗುಲಾಬಿಯ ಅಲೆದಾಟ ನಿರಾತಂಕವಾಗಲು ಊರಿನ ಪ್ರತಿಷ್ಠಿತರೊಬ್ಬರು ಕಟ್ಟಿದ ಕಲ್ಪನೆಯಾಗಿತ್ತು. ಈ ಕಥಾವಸ್ತುವನ್ನಿರಿಸಿಕೊಂಡ ಸುಂದರ ನಾಡಕರ್ಣಿ ಅವರ 'ಮೋಹಿತರು' ಕಾದಂಬರಿ, ಅವರ ಮೊದಲ ಕೃತಿಯಾದರೂ ಸಮರ್ಥ ಕಾದಂಬರಿಯಾಗಿದೆ.

ಹೊಸ ಪ್ರಜ್ಞೆಯ ಇನ್ನಿತರ ಕಾದಂಬರಿಗಳಲ್ಲಿ ಚಂದ್ರಕಾಂತ ಕುಸನೂರ ಅವರ 'ಚರ್ಚಗೇಟ್' ಬಿ. ವಿ.

ವೈಕುಂಠರಾಜು ಅವರ 'ಅಂತ್ಯ' ವಿಷ್ಣುಶರಣ ಅವರ 'ಕಡಲು' ಗಮನಾರ್ಹವಾಗಿವೆ.

ಮುಗಿಸುವ ಮುನ್ನ

ಕನ್ನಡದ ಇಂದಿನ ಹಲವು ಕಾದಂಬರಿಗಳು ಭಾರತೀಯ ಇತರ ಸಾಹಿತ್ಯದ ಸೃಷ್ಟಿಗೆ ಯಾವ ದೃಷ್ಟಿಯಿಂದಲೂ ಕಡಿಮೆಯಿರದೆ, ಸಮತೂಕವನ್ನು ಕಾಯ್ದುಕೊಳ್ಳುವಂತೆ ಇವೆ. ಹಲವು ನೆರೆಭಾಷೆಗಳಿಗಿಂತ ನಮ್ಮ ಕಾದಂಬರಿಗಳು ಮುಂದುವರಿದು ಕನ್ನಡದ ಬಲ ಹೆಚ್ಚಿಸಿವೆ. ಪ್ರಾರಂಭದ ಬಾಲ್ಯಾವಸ್ಥೆಯಲ್ಲಿ ಇತರ ಭಾಷೆಗಳ ಅನುವಾದಗಳು ಕನ್ನಡದಲ್ಲಿ ಬಂದಂತೆ ಈಗಲೂ ಸಾಕಷ್ಟು ಸಂಖ್ಯೆಯಲ್ಲಿ ಬರುತ್ತಲಿವೆ. ಆದರೆ ಕನ್ನಡದಿಂದ ಇತರ ಭಾಷೆಗೆ ಭಾಷಾಂತರವಾಗುವುದು ಮಾತ್ರ ತೀರ ಕಡಿಮೆ. ಉದಾಹರಣೆ ನೋಡಿದರೆ. ಭಾರತೀಯ ಭಾಷೆಗಳಿಂದ ಅದೆಷ್ಟೋ ಕಾದಂಬರಿಗಳು ರಶಿಯನ್ ಭಾಷೆಗೆ ಅನುವಾದಗೊಂಡ ಬಳಿಕ, ಮೊನ್ನೆ ನಿರಂಜನರ 'ವಿಮೋಚನೆ' ಮ. ದಾಷ್ಕೋ ಅವರಿಂದ 'ಪ್ರೋರ್' ಎಂಬ ಹೆಸರಿನಿಂದ ಆ ಭಾಷೆಗೆ ಅನುವಾದಗೊಂಡಿತು. ಇಂಗ್ಲೀಷ ಭಾಷೆಗೂ, ಇನ್ನಿತರ ಭಾರತೀಯ ಭಾಷೆಗೂ ಅನುವಾದ ತೀರ ಕಡಿಮೆ ಪ್ರಮಾಣದಲ್ಲಾಗಿವೆ. ಹೇಳಿಕೊಳ್ಳುವಂಥ ಸಮರ್ಥ ಕೃತಿಗಳಿದ್ದರೂ ಸಾಹಿತ್ಯ ಅಕಾಡೆಮಿ, ನ್ಯಾಶನಲ್ ಬುಕ್ ಟ್ರಸ್ಟ ಇಂಥ ಸಂಸ್ಥೆಗಳ ದಾರಿಕಾಯದೆ, ಒಳ್ಳೆಯ ಕೃತಿಗಳನ್ನು ಇನ್ನಿತರ ಭಾಷೆ

ಗಳಿಗೆ ಅನುವಾದಿಸಿ ಪ್ರಕಟಿಸುವ ಕಾರ್ಯವನ್ನು ಕನ್ನಡಿಗರು ನಿಯೋಜಿಸಿದರೆ ಹೆಚ್ಚು ಕ್ಷೇಮ.

ಎರಡು ದಶಕಗಳ ಹಿಂದೆ ಅಸ್ತಿತ್ವಕ್ಕೆ ಬಂದ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಕನ್ನಡದ ಎರಡೇ ಕಾದಂಬರಿಗಳು ಸನ್ಮಾನ ಪಡೆದಿವೆ. ಇನ್ನಿತರ ಭಾರತೀಯ ಭಾಷೆಗಳಿಗಿಂತ ಈ ಸಂಖ್ಯೆ ಕಡಿಮೆ ಎಂದೇ ಹೇಳಬೇಕು. ದೇವುಡು ಅವರ 'ಮಹಾಕ್ಷತ್ರಿಯ' ಮತ್ತು ಬಿ. ಪುಟ್ಟಸ್ವಾಮಯ್ಯ ಅವರ 'ಕ್ರಾಂತಿ ಕಲ್ಯಾಣ' ಇವೇ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಸನ್ಮಾನಿತ ಕಾದಂಬರಿಗಳು. ಭಾರತದ ಸರ್ವಶ್ರೇಷ್ಠ ಸಾಹಿತ್ಯಿಕ ಪಾರಿತೋಷಕವಾದ 'ಜ್ಞಾನಪೀಠ' ಬಹುಮಾನವನ್ನು ಇತರ ಭಾರತೀಯ ಭಾಷೆಗಳು ಪಡೆದಂತೆ ಕನ್ನಡ ಕಾದಂಬರಿಗಳೂ ಪಡೆಯಬೇಕಾಗಿವೆ.

ಗ್ರಂಥಋಣ

ಸಾಹಿತ್ಯೋಪಾಸನೆ : ಡಾ. ರಂ. ಶ್ರೀ. ಮುಗಳಿ
ಮೈಸೂರು ರಾಜ್ಯ (೧೯೫೬–೬೬) : ಡಾ. ಹಾ. ಮಾ. ನಾಯಕ
ಅವರ ಲೇಖನ
ಕೃತಿ ಪರೀಕ್ಷೆ : ಡಾ. ಗುರುರಾಜ ಆಮೂರ
ಆಧುನಿಕ ಭಾರತೀಯ ಸಾಹಿತ್ಯ : ಡಾ. ಎಂ. ಜಿ. ಕೃಷ್ಣಮೂರ್ತಿ
ನಡೆದುಬಂದ ದಾರಿ : (ಸಂಪುಟ ೨. ಕಾದಂಬರಿ ಇತಿಹಾಸ ಪ್ರಬಂಧ)
ಕೀರ್ತಿನಾಥ ಕುರ್ತಕೋಟಿ
ಸಾಹಿತ್ಯ ಪ್ರವೇಶ : ಅನು. ಸಿ. ಪಿ. ಕೆ.
ಕಾದಂಬರಿ ದರ್ಶನ : ಸಂ. ಶಂಕರ ಪಾಟೀಲ
ಕನ್ನಡ ವಿಶ್ವಕೋಶ : (ಸಂಪುಟ: ೩–೪)
ಜ್ಞಾನಗಂಗೋತ್ರಿ : (ಕಲೆ ಸಾಹಿತ್ಯ)
ಸಿರಿಗನ್ನಡ ಗ್ರಂಥಕರ್ತರ ಚರಿತ್ರಕೋಶ : ವೆಂಕಟೇಶ ಸಾಂಗಲಿ
ಸಾಹಿತ್ಯ ವಾರ್ಷಿಕ – ೧೯೭೧
ಸಾಹಿತ್ಯ ವಾರ್ಷಿಕ – ೧೯೭೨
ಸಾಹಿತ್ಯ ವಾರ್ಷಿಕ – ೧೯೭೩
ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ
ಹೊಸಗನ್ನಡದ ಅರುಣೋದಯ : ಡಾ. ಶ್ರೀನಿವಾಸ ಹಾವನೂರ

ಪತ್ರಿಕಾಋಣ : ಕಸ್ತೂರಿ
ಪ್ರಜಾವಾಣಿ
ಲೇಖಕ
ಕನ್ನಡ ನುಡಿ
ಇನ್ನೂ ಕೆಲ ಪತ್ರಿಕೆಗಳು ಮತ್ತು ಗ್ರಂಥಗಳು

ಉಪನ್ಯಾಸ ಗ್ರಂಥಮಾಲೆಯ ಇತ್ತೀಚಿನ ಪ್ರಕಟನೆಗಳು

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

ಜನಸಂಖ್ಯಾ ಸ್ಫೋಟ ಮತ್ತು
ಅಂತರರಾಷ್ಟ್ರೀಯ ಜನಸಂಖ್ಯಾ ವರ್ಷ —ಪಿ. ಬಿ. ಅಂಗಡಿ

ಕುಕನೂರು —ಎಸ್. ಎಲ್. ಶಾಂತಕುಮಾರಿ

ಜಗನ್ನಾಥದಾಸರ ಹಿರಿಮೆ —ವಸಂತ ಕುಷ್ಟಗಿ

ನವಭಾರತ ನಿರ್ಮಾಪಕ ರಾಜಾ ರಾಮಮೋಹನ ರಾಯ್
—ಜೆ. ಜಿ. ಕಾಡದೇವರ

ಭಾರತೀಯ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳು
—ಶಿವಾನಂದ ಗುಬ್ಬಣ್ಣವರ

ಭಾರತದ ಆರ್ಥಿಕ ಬೆಳವಣಿಗೆಯ ಗುಣದೋಷಗಳು
—ಡಿ. ಎ. ಹೆಗಡೆ

ಸಸ್ಯಪೋಷಕಗಳು —ಸಾ. ನಾ. ವಜ್ರನಾಭಯ್ಯ

ಕೌಟಿಲ್ಯನ ಅರ್ಥಶಾಸ್ತ್ರ —ಅರವಿಂದ ಜೋಶಿ

ಮೊಹರ್ರಂ ಪದಗಳು —ಚೆನ್ನಣ್ಣ ವಾಲೀಕಾರ

ಬಳ್ಳಾರಿ ಜಿಲ್ಲೆಯ ಶಿವಶರಣರು —ಶಾಂತರಸ

ಪ್ರಸಾರಾಂಗ ವಿಸ್ತರಣ–ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩